02 April 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಳ್ಳೆಯ ಸಮಯ ಬರುವವರೆಗೂ, ತಾತ್ಕಾಲಿಕವಾಗಿ ಕೆಟ್ಟ ಸಮಯವನ್ನು ತಡೆದುಕೊಳ್ಳಲೇ ಬೇಕು!

-ಸ್ನೇಹಾ ಆನಂದ್

info.varthaman@gmail.com

9742504916

ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 137 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3


ಅಸಂಘಟಿತ ಕಾರ್ಮಿಕರು ವಿಮಾ ವ್ಯಾಪ್ತಿಗೆ: ನಗರಸಭೆಯಿಂದ ಮೊದಲ ಕಂತು — ಪುಟ ಸಂ. 2


ತ್ರಿವಿಧ ದಾಸೋಹದ ಮೂಲಕ ಬಸವ ತತ್ವ ಬಿತ್ತಿದ ಶ್ರೀಗಳು — ಪುಟ ಸಂ. 3


ವಚನಗಳ ಅನುವಾದ: ಡಾ. ಗಲೀನ ಕೊಪೆಲಿಯೋವಿಚ್‌ಗೆ ಸನ್ಮಾನ — ಪುಟ ಸಂ. 4

## ಸಿದ್ದಗಂಗಾ ಶ್ರೀಗದ್ದುಗೆಗೆ ರಾಷ್ಟ್ರಪತಿ ಮುರ್ಮು ಪೂಜೆ

**ತುಮಕೂರು:** ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ ಬುಧವಾರ ಸಿದ್ದಗಂಗಾ ಮಠದಲ್ಲಿ ವಿಜೃಂಭಣೆಯಿಂದ ನಡೆಯಿತು. ಸಿದ್ಧಗಂಗಾ ಮಠಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ನೀಡಿ, ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ಪೂಜೆ ಸಲ್ಲಿಸಿದರು.

ನಂತರ ಮಠದ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಕೇಂದ್ರ ಜಲ ಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹಾಜರಿದ್ದರು.

ಸಿದ್ದಗಂಗಾ ಶ್ರೀ ಜಯಂತಿಯಲ್ಲಿ ರಾಜ್ಯದ ವಿವಿಧ ಮೂಲೆಗಳಿಂದ ಲಕ್ಷಾಂತರ ಭಕ್ತರು ಆಗಮಿಸಿದ್ದಾರೆ. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಭದ್ರತಾ ದೃಷ್ಟಿಯಿಂದ ಮಠದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಮೂವರು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, 8 ಡಿವೈಎಸ್‌ಪಿ, 29 ಸರ್ಕಲ್ ಇನ್‌ಸ್ಪೆಕ್ಟರ್, 79



ಸಬ್ ಇನ್‌ಸ್ಪೆಕ್ಟರ್, 114 ಎಎಸ್‌ಐ, 1,181 ಪೊಲೀಸ್ ಸಿಬ್ಬಂದಿ, 81 ಮಹಿಳಾ ಪೊಲೀಸ್, 4 ಡಿಎಆರ್ ತುಕಡಿ ನಿಯೋಜಿಸಲಾಗಿತ್ತು.

# ರಾಜ್ಯದಲ್ಲಿ ಜನಗಣತಿ ಆರಂಭ

**ಬೆಂಗಳೂರು:** ರಾಜ್ಯದಲ್ಲಿ ಇಂದಿನಿಂದ ಜನಗಣತಿ ಆರಂಭಗೊಂಡಿದೆ. ಎರಡು ಹಂತಗಳಲ್ಲಿ ಜನಗಣತಿ ನಡೆಯಲಿದೆ. ಮೊದಲ ಹಂತದಲ್ಲಿ ಮನೆಗಳ ಗಣತಿ ಮತ್ತು 2ನೇ ಹಂತದಲ್ಲಿ ಜನಗಣತಿ ನಡೆಯಲಿದೆ. ಇಂದಿನಿಂದ ಸ್ವಯಂ ಗಣತಿ ಕೂಡ ಆರಂಭವಾಗಿದೆ. ಸ್ವಯಂ ಗಣತಿಯಲ್ಲಿ ಸ್ವತಃ ಜನರೇ ಭಾಗವಹಿಸಿ ನೋಂದಣಿ ಮಾಡಿಕೊಳ್ಳಬಹುದು. ಗಣತಿ ವೆಬ್ ಪೋರ್ಟ ಲ್‌ನಲ್ಲಿ ಸ್ವಯಂ ಗಣತಿ ಯಲ್ಲಿ ಭಾಗವಹಿಸಬ ಹುದು. ಮನೆಯ ಯಾವುದೇ ಒಬ್ಬ ಸದಸ್ಯರು

ವೆಬ್ ಪೋರ್ಟಲ್ ಮೂಲಕ ಮನೆಯ ವಿವರ ದಾಖಲಿಸಬಹುದು. ನೋಂದಣಿ ನಂತರ ಸ್ವಯಂಗಣತಿ ಐಡಿಯನ್ನ ಮೊಬೈಲ್ ಅಥವಾ ಇಮೇಲ್ ಮೂಲಕ ಪಡೆಯಬಹುದು. ಪುಟ 2ಕ್ಕೆ

### ಸ್ವಯಂ ಗಣತಿ ಹೇಗೆ?

- ಅಧಿಕೃತ ಪೋರ್ಟಲ್ www.ce.census.gov.inಗೆ ಭೇಟಿ ನೀಡಿ.
- ಓಟಿಪಿ ಬರುವ ಮೊಬೈಲ್ ಸಂಖ್ಯೆ ಮೂಲಕ ಲಾಗಿನ್ ಆಗಬೇಕು.
- ರಾಜ್ಯ, ಜಿಲ್ಲೆ, ಸ್ಥಳೀಯ ವಿವರ ಹಾಕಬೇಕು.
- ಡಿಜಿಟಲ್ ಮ್ಯಾಪ್‌ನಲ್ಲಿ ಮನೆಯ ಸ್ಥಳವನ್ನ ಗುರುತಿಸುವುದು.
- ನಿಮ್ಮ ಮನೆ ಮತ್ತು ಕುಟುಂಬಕ್ಕೆ ಸಂಬಂಧಿಸಿದ ವಿವರಗಳನ್ನ ಭರ್ತಿ ಮಾಡಿ.
- ಗುರುತಿಸಿದ ನಂತರ ಸ್ವಯಂ ಗಣತಿ ಐಡಿ ಪಡೆಯುತ್ತೀರಿ.
- ನಿಮ್ಮ ಸ್ವಯಂ ಗಣತಿಯ ಐಡಿಯನ್ನ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು..
- ಗಣತಿದಾರರು ಮನೆಗೆ ಭೇಟಿ ನೀಡಿದಾಗ ನಿಮ್ಮ ಸ್ವಯಂ ಐಡಿಯನ್ನು ನೀಡಬೇಕು.
- ಗಣತಿದಾರರು ಸ್ವಯಂ ಐಡಿ ಮೂಲಕ ವಿವರಗಳನ್ನು ದೃಢಿಕರಿಸುತ್ತಾರೆ.



# ರಾಜ್ಯದ ಹಣಕಾಸು ಸ್ಥಿತಿ ಸುಭದ್ರ

## ದೇಶದ ಸ್ಥಿತಿಗಿಂತ ಉತ್ತಮ: ಬಿಜೆಪಿಗೆ ಸಿದ್ದರಾಮಯ್ಯ ತಿರುಗೇಟು

**ದಾವಣಗೆರೆ:** ರಾಜ್ಯದ ಹಣಕಾಸು ಸ್ಥಿತಿ ದೇಶದ ಆರ್ಥಿಕ ಸ್ಥಿತಿಗಿಂತ ಉತ್ತಮವಾಗಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹ ಹಾಗೂ ಹೂಡಿಕೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿರುವ ಕರ್ನಾಟಕದ ಹಣಕಾಸು ಸ್ಥಿತಿ ಸುಭದ್ರವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಹೆಲಿಪ್ಯಾಡ್‌ನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಜಿಡಿಪಿ ದರ 7.14 ಇದೆ. ರಾಜ್ಯದ ಜಿಡಿಪಿ 8.1 ಇದೆ. ಇದರಲ್ಲಿ ಯಾವ ಸರ್ಕಾರದ ಆರ್ಥಿಕ ಸ್ಥಿತಿ ಚೆನ್ನಾಗಿದೆ? ಎಂದು ಪ್ರಶ್ನಿಸಿದರು.

ರಾಜಕೀಯ ಆರೋಪ ಮಾಡುವಾಗ ಎಚ್ಚರ ಇರಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಸಾಲದ ರಾಮಯ್ಯ ಆರೋಪಕ್ಕೆ ತಿರುಗೇಟು ನೀಡಿದರು. ರಾಜ್ಯದಲ್ಲಿ ಕಾಂಗ್ರೆಸ್ 2023ರಲ್ಲಿ ಅಧಿಕಾರಕ್ಕೆ ಬರುವ ಹೊತ್ತಿಗೆ ರಾಜ್ಯದ ಸಾಲ 5.30 ಲಕ್ಷ ಕೋಟಿ ಇತ್ತು. ರಾಜ್ಯದಲ್ಲಿ 2019ರಿಂದ 2023ರವರೆಗೆ ಬಿಜೆಪಿ ಆಡಳಿತ ನಡೆಸಿತ್ತು. 2027ರ ಮಾರ್ಚ್ ಹೊತ್ತಿಗೆ ರಾಜ್ಯದ ಸಾಲ 8.24 ಲಕ್ಷ ಕೋಟಿಗೆ ಏರಿಕೆ ಆಗಲಿದೆ. ಸಾಲ ಯಾರು ಹೆಚ್ಚು ಮಾಡಿದವರು? ಎಂದು ಅವರು ಪ್ರಶ್ನಿಸಿದರು.

ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬಂದಾಗ ದೇಶದ ಒಟ್ಟು ಸಾಲ 53.11 ಲಕ್ಷ ಕೋಟಿ ಇತ್ತು. ಇದು ಸ್ವಾತಂತ್ರ್ಯ ಬಂದಾಗಿನಿಂದ 2013ರವರೆಗೆ ಎಲ್ಲ ಸರ್ಕಾರಗಳು ಮಾಡಿದ ಸಾಲವಾಗಿತ್ತು. ಈಗ ಸಾಲ 218 ಲಕ್ಷ ಕೋಟಿಗೆ ತಲುಪಿದೆ. ನರೇಂದ್ರ ಮೋದಿ 12 ವರ್ಷಗಳಲ್ಲಿ ಮಾಡಿದ ಸಾಲ ಒಟ್ಟು 165 ಲಕ್ಷ ಕೋಟಿ. ಈಗ ನರೇಂದ್ರ ಮೋದಿ ಅವರನ್ನು ಏನೆಂದು ಕರೆಯವುದು? ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

2019ರಿಂದ 2023ರವರೆಗೆ ನಾಲ್ಕು ವರ್ಷ ಅಧಿಕಾರದಲ್ಲಿ ಇದ್ದ ಬಿಜೆಪಿ ರಾಜ್ಯದ ಅಭಿವೃದ್ಧಿಗೆ ಶ್ರಮಿಸಲಿಲ್ಲ. ಮಧ್ಯ ಕರ್ನಾಟಕದ ದಾವಣಗೆರೆಗೆ ಏನು ಕೊಡುಗೆ ಕೊಟ್ಟಿದ್ದೀರಿ ಎಂದು ಪ್ರಶ್ನಿಸಿದ ಅವರು, ದಾವಣಗೆರೆ ಹಾಗೂ ಬಾಗಲಕೋಟೆ ಕ್ಷೇತ್ರಗಳ ಉಪಚುನಾವಣೆಯಲ್ಲಿ ದೊಡ್ಡ ಮತಗಳ ಅಂತರದಲ್ಲಿ ಗೆಲ್ಲುತ್ತೇವೆ ಎಂಬ ವಿಶ್ವಾಸ ಇದೆ ಎಂದರು.

ಚುನಾವಣಾ ಆಯೋಗ ಕೇಂದ್ರ ಸರ್ಕಾರದ ಹಿಡಿತದಲ್ಲಿ ಇದೆ. ಮತದಾರರ ಪಟ್ಟಿಯನ್ನು ದುರುಪಯೋಗ ಮಾಡಿಕೊಳ್ಳುವ ಅವಕಾಶ ಇರುವುದು ಕೇಂದ್ರಕ್ಕೆ ಮಾತ್ರ. ಜವಾಹರಲಾಲ್ ನೆಹರೂ ಹಾಗೂ ಇಂದಿರಾ ಗಾಂಧಿ ಅವರು ಅಧಿಕಾರದಲ್ಲಿ ಇದ್ದಾಗ ಆಯೋಗವನ್ನು ದುರುಪಯೋಗ ಮಾಡಿಕೊಂಡ ಆರೋಪ ಕೇಳಿ ಬಂದಿಲ್ಲ. ಇಂತಹ ಆರೋಪಕ್ಕೆ ಗುರಿ ಆಗಿರುವ ದೇಶದ ಏಕೈಕ ಪ್ರಧಾನಿ ನರೇಂದ್ರ ಮೋದಿ' ಎಂದು ಆರೋಪಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಮಾಜಿ ಸಚಿವ ಎಚ್. ಆಂಜನೇಯ ಇದ್ದರು.



### ಪ್ರಚಾರಕ್ಕೆ ಸಚಿವ ಜಮೀರ್

ವಸತಿ ಸಚಿವ ಜಮೀರ್ ಅಹ್ಮದ್ ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯ ಪ್ರಚಾರಕ್ಕೆ ಏ.5ರಿಂದ ಬರಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಜಮೀರ್ ಅಹ್ಮದ್ ಅವರಿಗೆ ಕೇರಳ ಚುನಾವಣಾ ಜವಾಬ್ದಾರಿ ನೀಡಲಾಗಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ ಅವರೊಂದಿಗೆ ಪುಟ 2ಕ್ಕೆ

### ತಳಸಮುದಾಯ ಏಳ್ಗೆ ಪರ

ವಿಶ್ವದಲ್ಲಿ ಎರಡು ರೀತಿಯ ಆರ್ಥಿಕ ವ್ಯವಸ್ಥೆ ಇವೆ. ಮೇಲ್ವರ್ಗದ ಜನರಿಗೆ ಅನುಕೂಲ ಮಾಡಿಕೊಡುವ ಹಾಗೂ ತಳಸಮುದಾಯದ ಜನರ ಏಳಿಗೆಗೆ ಶ್ರಮಿಸುವ ಆರ್ಥಿಕ ಸಿದ್ಧಾಂತಗಳಿವೆ. ಬಿಜೆಪಿ ಮೇಲ್ವರ್ಗದ ಪರವಾಗಿದ್ದರೆ ಕಾಂಗ್ರೆಸ್ ತಳಸಮುದಾಯದ ಜನರ ಏಳಿಗೆಯ ಪರವಾಗಿದೆ. ಬಸವಣ್ಣ, ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿ ಆಶಯದಂತೆ ಕಟ್ಟಕಡೆ ವ್ಯಕ್ತಿಗಳ ಕಣ್ಣೀರು ಒರೆಸುವ ಕೆಲಸ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಬಿಜೆಪಿ ಗ್ಯಾರಂಟಿ ಯೋಜನೆಗಳನ್ನು ವಿರೋಧ ಮಾಡುತ್ತಿದೆ. ಬಡಜನರ ಕಾರ್ಯಕ್ರಮಗಳನ್ನು ಬಿಜೆಪಿ ಯಾವಾಗಲೂ ವಿರೋಧ ಮಾಡುತ್ತಲೇ ಬರುತ್ತಿದೆ. ಗ್ಯಾರಂಟಿ ಯೋಜನೆಯಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡುತ್ತಿದ್ದೇವೆ. ಇದರಿಂದ ಭ್ರಷ್ಟಾಚಾರ ನಡೆಯಲು ಸಾಧ್ಯವಿಲ್ಲ. ಬಿಜೆಪಿ ಆರೋಪಗಳಲ್ಲಿ ಹುರುಳು ಇಲ್ಲ ಎಂದು ತಿರುಗೇಟು ನೀಡಿದರು.

## ಗೆಲುವಿಗೆ ಪ್ರಾರ್ಥಿಸಿ ಕೊಂಡ ಹಾಯ್ದ ಸಮರ್ಥ್, ಸಚಿವ ಮಲ್ಲಿಕಾರ್ಜುನ್!



**ದಾವಣಗೆರೆ:** ನಗರದ ಹಳೆಪೇಟೆ ವೀರಭದ್ರೇಶ್ವರ ದೇವಸ್ಥಾನದ ರಥೋತ್ಸವದಲ್ಲಿ ಜಿಲ್ಲಾ ಉಸ್ತವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಅವರ ಪುತ್ರ, ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಸಮರ್ಥ್ ಶಾಮನೂರು ಅವರು ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಪುಟ 2ಕ್ಕೆ

## ವಾಣಿಜ್ಯ ಸಿಲಿಂಡರ್ 195 ರೂ. ಏರಿಕೆ



**ನವದೆಹಲಿ:** ಗ್ಯಾಸ್ ಸಮಸ್ಯೆಯ ಬೆನ್ನಲ್ಲಿಯೇ ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಮಾಡುವ ಮೂಲಕ ಕೇಂದ್ರ ಸರ್ಕಾರ ದೇಶದ ಜನತೆಗೆ ಶಾಕ್ ನೀಡಿದೆ. ಗೃಹ ಬಳಕೆ ಸಿಲಿಂಡರ್ ಬೆಲೆ ಹೆಚ್ಚಾದ ಬೆನ್ನಲ್ಲೇ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಪುಟ 2ಕ್ಕೆ

## ಮದುವೆ ಮಾಡಿಸಲಿಲ್ಲವೆಂದು ತಾಯಿಯನ್ನೇ ಕೊಂದ ಮಗ



**ಹಾಸನ:** 40 ವರ್ಷವಾದ್ರೂ ನನಗಿನ್ನೂ ಮದುವೆ ಮಾಡಿಸಿಲ್ಲ ಎಂದು ಜಗಳ ತೆಗೆದ ಮಗ ತಾಯಿಯನ್ನೇ ಭೀಕರವಾಗಿ ಕೊಲೆ ಮಾಡಿರುವ ಘಟನೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಶ್ರವಣಬೆಳಗೊಳದಲ್ಲಿ ನಡೆದಿದೆ. ಗಂಗಮ್ಮ (65) ಕೊಲೆಯಾದ ಮಹಿಳೆ. ಉಮಾಶಂಕರ್ (40) ತಾಯಿಯನ್ನ ಕೊಂದ ಪುತ್ರ.

ಕಳೆದ ವರ್ಷ ಕುಂಭಮೇಳಕ್ಕೆ ತೆರಳಿ ಪುಟ 2ಕ್ಕೆ

## ಪ್ರೀಮಿಯಂ ಪೆಟ್ರೋಲ್ 130 ರೂ. ವಿಮಾನ ಇಂಧನ ಬೆಲೆ ದುಪ್ಪಟ್ಟು

**ಬೆಂಗಳೂರು:** ಪೆಟ್ರೋಲ್, ಡೀಸೆಲ್ ಕೊರತೆ ವದಂತಿ ಬೆನ್ನಲ್ಲೇ ಖಾಸಗಿ ಸ್ವಾಮ್ಯದ ಶೆಲ್ ಪೆಟ್ರೋಲ್ ಬಂಕ್ ಮತ್ತೆ ಶಾಕ್ ಕೊಟ್ಟಿದೆ. ಕಳೆದ 15 ದಿನಗಳಲ್ಲಿ ಮೂರು ಬಾರಿ ದರ ಏರಿಕೆ ಮಾಡಿದ್ದ ಶೆಲ್ ಇದೀಗ ಮತ್ತೆ ಪೆಟ್ರೋಲ್, ಡೀಸೆಲ್ ದರ ಏರಿಕೆ ಮಾಡಿದೆ. ಪ್ರೀಮಿಯಂ ಜೊತೆಗೆ ಸಾಮಾನ್ಯ ಪೆಟ್ರೋಲ್, ಡೀಸೆಲ್ ಪುಟ 2ಕ್ಕೆ

## ಬೇಸಿಗೆ: ಪೌರಕಾರ್ಮಿಕರ ಕೆಲಸದ ಅವಧಿ ಬದಲು

**ಮೈಸೂರು:** ನಗರದಲ್ಲಿ ಬೇಸಿಗೆ ಹಿನ್ನೆಲೆಯಲ್ಲಿ ಪೌರಕಾರ್ಮಿಕರ ಕೆಲಸದ ಸಮಯ ಪರಿಷ್ಕರಿಸಲಾಗಿದೆ ಎಂದು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ತಿಳಿಸಿದ್ದಾರೆ.



ತಾಪಮಾನ ಹೆಚ್ಚುತ್ತಿರುವ ಕಾರಣದಿಂದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಇದುವರೆಗೆ ಬೆಳಿಗ್ಗೆ 6.30ರಿಂದ ಮಧ್ಯಾಹ್ನ 2ರವರೆಗೆ ಇದ್ದ ಕೆಲಸದ ಸಮಯವನ್ನು, ಇನ್ನು ಮುಂದೆ ಬೆಳಿಗ್ಗೆ 5.30ರಿಂದ ಮಧ್ಯಾಹ್ನ 1ರವರೆಗೆ ಬದಲಾಯಿಸಲಾಗಿದೆ. ಈ ಹೊಸ ಸಮಯ ಬುಧವಾರದಿಂದ ಜಾರಿಗೆ ಬಂದಿದೆ ಎಂದು ಮಾಹಿತಿ ನೀಡಿದ್ದಾರೆ.

ಬೇಸಿಗೆಯಲ್ಲಿ ತಾಪಮಾನ ಹೆಚ್ಚಳದಿಂದ ಪೌರಕಾರ್ಮಿಕರು ಆರೋಗ್ಯ ಸಮಸ್ಯೆಗಳು, ದೇಹದ ನೀರಿನ ಕೊರತೆ ಮುಂತಾದ ತೊಂದರೆಗಳನ್ನು ಎದುರಿಸುವ ಸಾಧ್ಯತೆ ಇರುತ್ತದೆ. ಹೀಗಾಗಿ, ಅವರ ಸುರಕ್ಷತೆ ಮತ್ತು ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮಕೈಗೊಳ್ಳಲಾಗಿದೆ. ಇದರಿಂದ ಅವರ ಕಾರ್ಯಕ್ಷಮತೆ ಹೆಚ್ಚುವ ಜೊತೆಗೆ ನಗರದ ಸ್ವಚ್ಛತಾ ಕಾರ್ಯಗಳು ಪರಿಣಾಮಕಾರಿಯಾಗಿ ಮುಂದುವರಿಯಲಿವೆ. ಸಾರ್ವಜನಿಕರು ಸಹಕಾರ ನೀಡಬೇಕು. ನಗರದ ಸ್ವಚ್ಛತೆ ಕಾಪಾಡಲು ಕೈಜೋಡಿಸಬೇಕು ಎಂದು ಅವರು ತಿಳಿಸಿದ್ದಾರೆ.

## ಮೋದಿ ಭಾವಪೂರ್ಣ ನಮನ

**ನವದೆಹಲಿ:** ಕರುಣೆ, ವಿನಯ ಮತ್ತು ಮಾನವಕುಲದ ಮೇಲಿನ ಅಚಲ ಸೇವೆಯ ಪ್ರತಿರೂಪವಾಗಿ ನಮ್ಮೆಲ್ಲರ ಸ್ಮರಣೆಯಲ್ಲಿ ನೀವು ಸದಾ ಜೀವಂತವಾಗಿರುತ್ತೀರಿ ಎಂದು ಡಾ.ಶಿವಕುಮಾರ ಶ್ರೀಗಳ ಜಯಂತಿಗೆ ಪ್ರಧಾನಿ ಮೋದಿ ಭಾವಪೂರ್ಣ ನಮನ ಸಲ್ಲಿಸಿದ್ದಾರೆ.

ಸಿದ್ದಗಂಗಾ ಶ್ರೀಗಳ 119ನೇ ಜಯಂತಿ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಪರಮ ಪೂಜ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಗಳ ಜಯಂತಿಯ ಈ ಸಂದರ್ಭದಲ್ಲಿ ಭಾವಪೂರ್ಣ ನಮನಗಳನ್ನು ಸಲ್ಲಿಸುತ್ತೇನೆ. ಅವರು ಕರುಣೆ, ವಿನಯ ಮತ್ತು ಮಾನವಕುಲದ ಮೇಲಿನ ಅಚಲ ಸೇವೆಯ ಪ್ರತಿರೂಪವಾಗಿ ನಮ್ಮೆಲ್ಲರ ಸಮೂಹ ಸ್ಮರಣೆಯಲ್ಲಿ ಪುಟ 2ಕ್ಕೆ



## ಸರ್ಕಾರದ ದಿನಗೂಲಿ ನೌಕರರಿಗೆ 5 ಲಕ್ಷ ರೂ. ಆರೋಗ್ಯ ಯೋಜನೆ

**ಬೆಂಗಳೂರು:** ರಾಜ್ಯದ ವಿವಿಧ ಇಲಾಖೆಗಳ ದಿನಗೂಲಿ ನೌಕರರು ಮತ್ತು ಅವಲಂಬಿತರಿಗೆ 5 ಲಕ್ಷ ರೂ.ವರೆಗಿನ ನಗದು ರಹಿತ ಆರೋಗ್ಯ ಯೋಜನೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.



ಈ ಹಿಂದೆ ಸುಮಾರು 3 ಲಕ್ಷ ಗುತ್ತಿಗೆ ಮತ್ತು ಹೊರಗುತ್ತಿಗೆ ಹಾಗೂ ಗೌರವ ಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಯೋಜನೆ ಜಾರಿಗೊಳಿಸಲಾಗಿತ್ತು. ಈ ಸೌಲಭ್ಯವನ್ನು ತಮಗೂ ನೀಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಮನವಿಯನ್ನು ಪುರಸ್ಕರಿಸಿದ ಸರ್ಕಾರ, ಎಲ್ಲಾ ತಾತ್ಕಾಲಿಕ ಉದ್ಯೋಗಿಗಳಿಗೂ ಆರೋಗ್ಯ ಭದ್ರತೆ ನೀಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದೆ. ಈ ಯೋಜನೆ ಪ್ರಕಾರ ನೌಕರರು ಮತ್ತು ಅವರ ಅವಲಂಬಿತರಿಗೆ ವಾರ್ಷಿಕ 5 ಲಕ್ಷ ರೂ. ವರೆಗೆ ನಗದು ರಹಿತ ಚಿಕಿತ್ಸೆ ಲಭ್ಯವಿರುತ್ತದೆ. ಸರ್ಕಾರದ ಈ ನಿರ್ಧಾರದಿಂದ ಸಾವಿರಾರು ದಿನಗೂಲಿ ನೌಕರರ ಕುಟುಂಬಗಳಿಗೆ ತುರ್ತು ಚಿಕಿತ್ಸೆ ಸಮಯದಲ್ಲಿ ಆರ್ಥಿಕ ನೆರವು ಸಿಗಲಿದೆ.

## ಹೊತ್ತಿ ಉರಿದ ಕಾರು: ವ್ಯಕ್ತಿ ಸಜೀವ ದಹನ

**ತುಮಕೂರು:** ಸೇತುವೆಗೆ ಕಾರು ಡಿಕ್ಕಿ ಹೊಡೆದ ರಭಸಕ್ಕೆ ಹೊತ್ತಿ ಉರಿದ ಪರಿಣಾಮ ವ್ಯಕ್ತಿಯೊಬ್ಬರು ಸಜೀವ ದಹನವಾಗಿರುವ ಘಟನೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಬಳಿ ಬುಧವಾರ ಸಂಜೆ ನಡೆದಿದೆ.

ಹುಳಿಯಾರು ಸಮೀಪದ ಬಾಣಾವರ ರಸ್ತೆಯಲ್ಲಿ ಅಪಘಾತ ನಡೆದಿದೆ. ಹಾಗಲವಾಡಿ ಗ್ರಾಮದ ವ್ಯಕ್ತಿ ಸಾವನ್ನಪ್ಪಿದವರು ಎನ್ನಲಾಗಿದೆ. ಕಾರು ಸಂಪೂರ್ಣವಾಗಿ ಹೊತ್ತು ಉರಿದಿದ್ದು, ಇನ್ನೂ ಮೂವರು ತೀವ್ರ ಗಾಯಗೊಂಡಿದ್ದಾರೆ. ಅವರ ಸ್ಥಿತಿ ಸಹ ಗಂಭೀರವಾಗಿದೆ ಎನ್ನಲಾಗಿದೆ. ಅವರನ್ನು ಚಿಕ್ಕನಾಯಕನಳ್ಳಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಪಂಚನಹಳ್ಳಿ ದೇಗುಲಕ್ಕೆ ಹೋಗಿ ವಾಪಸ್ ಬರುವಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಖಮೇನಿ ಹತ್ಯೆಗೆ ಕಲಬುರ್ಗಿ ಬಜೆಟ್ ಸಭೆಯಲ್ಲಿ ಸಂತಾಪ!

**ಕಲಬುರಗಿ:** ಜಿಲ್ಲೆಯಲ್ಲಿ ಮಹಾನಗರ ಪಾಲಿಕೆ ಬಜೆಟ್ ಮಂಡನೆಗೂ ಮುನ್ನ ಇರಾನ್ ಪರಮೋಚ್ಚ ನಾಯಕ ಅಯೊತೊಲ್ಲಾ ಖಮೇನಿ ಹತ್ಯೆಗೆ ಇಂದು ಸಂತಾಪ ಸೂಚಿಸಲಾಯಿತು. ಕಲಬುರಗಿ ಮಹಾನಗರ ಪಾಲಿಕೆ ಬಜೆಟ್ ಮಂಡನೆ ವೇಳೆ ಬಜೆಟ್ ಮಂಡನೆಗೂ ಮುನ್ನ ಸದಸ್ಯೆ ಸಯೀದಾ ನೂರ್ ಫಾತೀಮಾ ಜೈದಿ ಅವರು ಅಯೊತೊಲ್ಲಾ ಖಮೇನಿ ಹತ್ಯೆಗೆ ಸಂತಾಪ ಸೂಚಿಸುವ ನಿರ್ಣಯ ಮಂಡಿಸಿದರು. ನಿರ್ಣಯ ಮಂಡನೆ ಬೆನ್ನಲ್ಲೇ ಪಾಲಿಕೆ ಮೇಯರ್, ಆಯುಕ್ತರು ಸೇರಿದಂತೆ ಬಿಜೆಪಿ, ಕಾಂಗ್ರೆಸ್ ಸದಸ್ಯರು ಸಂತಾಪ ಸೂಚಿಸಿದರು.

# ವರ್ಗ, ಜಾತಿ ರಹಿತ ಸಮಾಜ ನಿರ್ಮಾಣ

## ಬಿಜೆಪಿ ಸುಳ್ಳುಗಳಿಗೆ ಮರುಳಾಗಬೇಡಿ: ಸಿದ್ದರಾಮಯ್ಯ ಕರೆ | ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ

**ದಾವಣಗೆರೆ:** ನಾವು ಜಾತಿ, ಧರ್ಮದ ಮೇಲೆ ರಾಜಕೀಯ ಮಾಡುವುದಿಲ್ಲ. ವರ್ಗ, ಜಾತಿ ರಹಿತ ಸಮಾಜ ನಿರ್ಮಾಣ ಮಾಡಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಬಿಜೆಪಿ ಸುಳ್ಳುಗಳಿಗೆ ಮರುಳಾಗಬೇಡಿ ಎಂದು ಸಿದ್ದರಾಮಯ್ಯ ಕರೆ ನೀಡಿದರು.

ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ ಕಾರ್ಯಕ್ರಮದಲ್ಲಿ ಬುಧವಾರ ಮಾತನಾಡಿದ ಅವರು, ಅಲ್ಪಸಂಖ್ಯಾತ ಸಮುದಾಯದ ರಕ್ಷಣೆಗೆ ಇರುವ ಪಕ್ಷ ಕಾಂಗ್ರೆಸ್. ಪಕ್ಷೇತರರಿಗೆ ಯಾರೂ ಮತ ಹಾಕಬೇಡಿ. ಪಕ್ಷೇತರರಿಗೆ ಅಲ್ಪಸಂಖ್ಯಾತರು ಮತ ಹಾಕಿದರೆ ಬಿಜೆಪಿಗೆ ಅನುಕೂಲ ಆಗುತ್ತದೆ. ಬಡವರ ಪರವಾಗಿ ಇರುವ ಪಕ್ಷ ಗೆಲ್ಲಿಸುವ ಹೊಣೆಗಾರಿಕೆ ಅಲ್ಪಸಂಖ್ಯಾತರ ಮೇಲಿದೆ. ಬಿಜೆಪಿ ಅಭ್ಯರ್ಥಿ ಠೇವಣಿ ಕಳೆಯಬೇಕು ಎಂದು ತುರ್ಚಘಟ್ಟ ಗ್ರಾಮದ ರೋಡ್ ಶೋನಲ್ಲಿ ಮನವಿ ಮಾಡಿದರು. ಪುಟ 2ಕ್ಕೆ



### ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಪರ ಸಿದ್ದರಾಮಯ್ಯ ರೋಡ್ ಶೋ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರ್ಜರಿ ರೋಡ್ ಶೋ ನಡೆಸಿದರು. ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರವಾಗಿ ಮತಯಾಚನೆ ಮಾಡಿದರು. ತಾಲ್ಲೂಕಿನ ನಾಗನೂರು ಗ್ರಾಮಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಕಂಬಳಿ ಹೊದಿಸಿ ಆರತಿ ಬೆಳಗಿ ಗ್ರಾಮಸ್ಥರು ಸ್ವಾಗತಿಸಿದರು. ಗ್ರಾಮದ ಬೀದಿಗಳಲ್ಲಿ ತೆರೆದ ಜೀಪಿನಲ್ಲಿ ಸಂಚರಿಸಿ ಕಾಂಗ್ರೆಸ್‌ಗೆ ಮತ ನೀಡುವಂತೆ ಮನವಿ ಮಾಡಿದರು. ಅಪಾರ ಪುಟ 2ಕ್ಕೆ

# ಮೊದಲ ಪುಟದಿಂದ

## ಸಿಲಿಂಡರ್ 195 ರೂ. ಏರಿಕೆ

ಬೆಲೆಯನ್ನು 195.50 ರೂಪಾಯಿ ಏರಿಕೆ ಮಾಡಿವೆ. ಈ ಮೂಲಕ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಬೆಲೆ 2078.50 ರೂಪಾಯಿ ತಲುಪಿದೆ.

ಇದಕ್ಕೂ ಮೊದಲು, ಮಾರ್ಚ್ 1ರಂದು 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು 114.5 ರೂ. ಹೆಚ್ಚಿಸಲಾಗಿತ್ತು. ಇದು ಕಳೆದ ಒಂದು ತಿಂಗಳಲ್ಲಿ 2ನೇ ಬಾರಿಗೆ ಮಾಡಿದ ಬೆಲೆ ಏರಿಕೆಯಾಗಿದೆ. ಗೃಹಬಳಕೆ ಸಿಲಿಂಡರ್ ಬೆಲೆ ಯಥಾಸ್ಥಿತಿಯಲ್ಲಿ ಮುಂದುವರಿದಿದೆ. 14.2 ಕೆಜಿ ಸಿಲಿಂಡರ್ ಬೆಲೆ ಮಾ.7 ರಂದು 60 ರೂ. ಹೆಚ್ಚಿಸಲಾಗಿತ್ತು.

## ಮದುವೆ ಮಾಡಿಸಲಿಲ್ಲವೆಂದು ತಾಯಿಯನ್ನೇ ಕೊಂದ ಮಗ

ವಾಪಾಸ್ ಆಗುವಾಗ ನಡೆದ ಅಪಘಾತದಲ್ಲಿ ಆರೋಪಿ ಉಮಾಶಂಕರ್ ತಲೆಗೆ ಪೆಟ್ಟು ಬಿದ್ದಿತ್ತು. ಇದರಿಂದ ಒಮ್ಮೊಮ್ಮೆ ಬುದ್ದಿ ಭ್ರಮಣೆಯಾದವನಂತೆ ವರ್ತಿಸುತ್ತಿದ್ದ ಎನ್ನಲಾಗಿದೆ. ಪದೇ ಪದೇ ಮದುವೆ ಮಾಡಿಸುವಂತೆ ತಾಯಿ ಜೊತೆ ಜಗಳವಾಡುತ್ತಿದ್ದ. ಈ ವೇಳೆ ಮಾತಿಗೆ ಮಾತು ಬೆಳೆದು ಮೊದಲು ಕೈನಿಂದ ತಾಯಿಯ ತಲೆಗೆ ಬಲವಾಗಿ ಹೊಡೆದಿದ್ದಾನೆ. ಆಕೆ ಕುಸಿದು ಬಿದ್ದಾಗ ತಲೆ ಮೇಲೆ ಕಲ್ಲು ಎತ್ತಿಹಾಕಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಗಂಗಮ್ಮ ಅವರನ್ನು ಐಸಿಯುಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

## ಪ್ರೀಮಿಯಂ ಪೆಟ್ರೋಲ್ 130 ರೂ. ವಿಮಾನ ಇಂಧನ ಬೆಲೆ ದುಪ್ಪಟ್ಟು

ದರವೂ ಏರಿಕೆಯಾಗಿದೆ.

ಸಾಮಾನ್ಯ ಪೆಟ್ರೋಲ್ ದರ ಮೊದಲು 106 ರೂ.ನಿಂದ 108.50 ರೂ. ಆಗಿತ್ತು. ನಾಲ್ಕು ದಿನದ ಹಿಂದೆ 112 ರೂ.ಗೆ ಏರಿಕೆ ಆಗಿತ್ತು. ಈಗ 119.8 ರೂ.ಗೆ ಏರಿಕೆಯಾಗಿದೆ. ಸಾಮಾನ್ಯ ಪೆಟ್ರೋಲ್ ದರ ಲೀಟರ್‌ಗೆ 7 ರೂ.ನಷ್ಟು ಹೆಚ್ಚಳವಾಗಿದೆ. ಪ್ರೀಮಿಯಂ ಪೆಟ್ರೋಲ್ ದರ ಲೀಟರ್‌ಗೆ 122.42 ರೂ.ನಿಂದ 129.8ಕ್ಕೆ ಏರಿಕೆಯಾಗಿದೆ. ಪ್ರೀಮಿಯಂ ಡೀಸೆಲ್ ಲೀಟರ್‌ಗೆ 108.50 ರಿಂದ 133ಕ್ಕೆ ಏರಿಕೆಯಾಗಿದೆ.

ಕಚ್ಚಾ ತೈಲ ಬೆಲೆ ಏರಿಕೆ ಬೆನ್ನಲ್ಲೇ ಜೆಟ್ ಇಂಧನ ಬೆಲೆಯನ್ನ ಏಕಾಏಕಿ 2 ಪಟ್ಟು ಹೆಚ್ಚಿಸಲಾಗಿದೆ. 96,638.14 ರೂ. ನಷ್ಟಿದ್ದ ಇಂಧನ ಬೆಲೆಯನ್ನು ದೆಹಲಿಯಲ್ಲಿ ಎಟಿಎಫ್ 2,07,341.22 ರೂ.ಗಳಿಗೆ ಹೆಚ್ಚಿಸಿದೆ. ಇದಕ್ಕೂ ಮುನ್ನ ಮಾರ್ಚ್ 1ರಂದು ಇಂಧನ ಬೆಲೆಯನ್ನ ಶೇ.5.7ರಷ್ಟು ಅಂದರೆ 5,244.75 ರೂ. ನಷ್ಟು ಹೆಚ್ಚಿಸಲಾಗಿತ್ತು. ಇದೀಗ ತೈಲಬಿಕ್ಕಟ್ಟು ಎದುರಾಗುತ್ತಿರುವ ಹೊತ್ತಿನಲ್ಲೇ ಎರಡು ಪಟ್ಟು ಹೆಚ್ಚಿಸಲಾಗಿದೆ. ಇನ್ನೂ ದೇಶೀಯ ಎಟಿಎಫ್ ಬೆಲೆಯನ್ನ ಶೇ.8.6ರಷ್ಟು ಹೆಚ್ಚಿಸಿದ್ದು, ಪ್ರತಿ ಕಿಲೋಲೀಟರ್ 1.04 ಲಕ್ಷ ರೂ.ಗಳಿಗೆ ತಲುಪಿದೆ.

## ರಾಜ್ಯದಲ್ಲಿ ಜನಗಣತಿ ಆರಂಭ

ಏ.1ರಿಂದ ಏ.15ರವರೆಗೂ ಸ್ವಯಂ ಗಣತಿಯಲ್ಲಿ ಭಾಗವಹಿಸಬಹುದು. ನಂತರ ಗಣತಿದಾರರು ಮನೆ ಮನೆಗೆ ತೆರಳಿ ಗಣತಿ ಮಾಡಲಿದ್ದಾರೆ. ಎರಡನೇ ಹಂತವಾಗಿ ಏ.16ರಿಂದ ಮೇ 15ರ ಅವಧಿಯಲ್ಲಿ ಗಣತಿದಾರರು ಮನೆ ಮನೆಗೆ ಭೇಟಿ ನೀಡಿ ಮಾಹಿತಿಯನ್ನು ಪರಿಶೀಲಿಸಿ ಸಂಗ್ರಹಿಸಲಿದ್ದಾರೆ.

## ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಪರ ಸಿದ್ದರಾಮಯ್ಯ ರೋಡ್ ಶೋ

ಸಂಖ್ಯೆಯಲ್ಲಿ ಸೇರಿದ ಜನರು ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯ ಪರವಾಗಿ ಘೋಷಣೆ ಮೊಳಗಿಸಿದರು.

## ಗೆಲುವಿಗೆ ಪ್ರಾರ್ಥಿಸಿ ಕೊಂಡ ಹಾಯ್ದ ಸಮರ್ಥ್, ಸಚಿವ ಮಲ್ಲಿಕಾರ್ಜುನ್!

ಪುತ್ರ ಸಮರ್ಥ್ ಶಾಮನೂರು, ಪುತ್ರಿ ಶ್ರೇಷ್ಠ ಅವರು ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಹಾಗೂ ಅಗ್ನಿಕುಂಡೋತ್ಸವದಲ್ಲಿ ಕೆಂಡ ತುಳಿದು ಭಕ್ತಿ ಸಮರ್ಪಿಸಿದರು.

ಅಜ್ಜ ಶಾಮನೂರು ಶಿವಶಂಕರಪ್ಪ ಕಾಲದಿಂದಲೂ ನಾವೆಲ್ಲಾ ಪ್ರತಿ ವರ್ಷ ಕೆಂಡ ತುಳಿದು ಭಕ್ತಿ ಸಮರ್ಪಿಸುತ್ತಿದ್ದೇವೆ. ಇದೊಂದು ಸಂಪ್ರದಾಯ ಎಂದು ಸಮರ್ಥ್ ಶಾಮನೂರು ಹೇಳಿದರು.

ಗುರುವಾರ ವೀರಭದ್ರೇಶ್ವರ ದೇವರ ರಥೋತ್ಸವ ನಡೆಯಲಿದೆ. ಮತದಾರರು ಪುತ್ರ ಸಮರ್ಥ್‌ನನ್ನು ಗೆಲ್ಲಿಸಬೇಕು. ಈ ಭಾಗದ ಮನೆ ಮಗನಾಗಿ ಅಭಿವೃದ್ಧಿ ಕೆಲಸ ಮಾಡಲಿದ್ದಾನೆ ಎಂದು ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಹೇಳಿದರು.

## ಪ್ರಚಾರಕ್ಕೆ ಸಚಿವ ಜಮೀರ್

ಈ ಕುರಿತು ಮಾತನಾಡಿದ್ದೇನೆ. ಏ.4ರ ಬಳಿಕ ಜಮೀರ್ ಅವರನ್ನು ಕರ್ನಾಟಕಕ್ಕೆ ಕಳುಹಿಸಿಕೊಡುವುದಾಗಿ ಹೇಳಿದ್ದಾರೆ ಎಂದರು.

## ಮೋದಿ ಭಾವಪೂರ್ಣ ನಮನ

ಸದಾ ಉಳಿದಿದ್ದಾರೆ. ಇತರರ ಉದ್ಧಾರಕ್ಕಾಗಿ ಸಮರ್ಪಿತವಾದ ಜೀವನದ ಮೂಲಕ, ನಿಜವಾದ ಮಹತ್ವ ಇತರರಿಗೆ ಸೇವೆ ಸಲ್ಲಿಸುವುದರಲ್ಲಿದೆ ಎಂದು ತೋರಿಸಿಕೊಟ್ಟಿದ್ದಾರೆ. ಶಿಕ್ಷಣ, ಸಾಮಾಜಿಕ ಕಲ್ಯಾಣ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಅವರ ಅಪಾರ ಕೊಡುಗೆಗಳು ಸಮಾಜದ ಮೇಲೆ ಶಾಶ್ವತ ಗುರುತನ್ನು ಮೂಡಿಸಿವೆ. ಇಂದಿಗೂ ಅವರ ಜೀವನವು ಅನೇಕ ಜನರಿಗೆ ನಿಸ್ವಾರ್ಥತೆ ಮತ್ತು ಸೇವೆಯ ಮಾರ್ಗದಲ್ಲಿ ನಡೆಯಲು ಪ್ರೇರಣೆಯಾಗುತ್ತಿದೆ ಎಂದು ಬರೆದುಕೊಂಡಿದ್ದಾರೆ. ಜೊತೆಗೆ ಶ್ರೀಗಳ ಜೊತೆ ಇರುವ ಭಾವಚಿತ್ರವನ್ನು ಮೋದಿ ಪೋಸ್ಟ್ ಮಾಡಿದ್ದಾರೆ.

## ವರ್ಗ, ಜಾತಿ ರಹಿತ ಸಮಾಜ ನಿರ್ಮಾಣ

ಸಿದ್ದರಾಮಯ್ಯ ಸಾಲ ಮಾಡಿದ್ದಾರೆ ಎಂದು ಬಿಜೆಪಿ ಆರೋಪ ಮಾಡುತ್ತಿದೆ. ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಸಾಲದ ರಾಮಯ್ಯ ಎಂಬುದಾಗಿ ಟೀಕಿಸುತ್ತಿದ್ದಾರೆ. ನಾನು ಬಡವರಿಗೆ ಅನ್ನ ನೀಡಿದ ಅನ್ನದ ರಾಮಯ್ಯ ನಾನು ಎಂದು ಅವರು ಹೇಳಿದರು.

ಕಾಂಗ್ರೆಸ್ ಕುಟುಂಬ ರಾಜಕಾರಣ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿಗೆ ಯಾವ ನೈತಿಕತೆ ಇದೆ? ಬಿ.ಎಸ್. ಯಡಿಯೂರಪ್ಪ ಅವರ ಪುತ್ರರಾದ ಬಿ.ವೈ.ರಾಘವೇಂದ್ರ ಹಾಗೂ ಬಿ.ವೈ.ವಿಜಯೇಂದ್ರ ಅವರದು ಕುಟುಂಬ ರಾಜಕಾರಣ ಅಲ್ಲವೇ? ಸಂಸದ ಬಸವರಾಜ ಬೊಮ್ಮಾಯಿ ಯಾರು? ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ, ಎಚ್.ಡಿ.ರೇವಣ್ಣ ಹಾಗೂ ಅವರ ಪತ್ನಿ, ಪುತ್ರರು ರಾಜಕಾರಣದಲ್ಲಿ ಇಲ್ಲವೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ವಿದೇಶದಲ್ಲಿ ವ್ಯಾಸಂಗ ಮಾಡಿ ಬಂದಿರುವ ಸಮರ್ಥ್ ಶಾಮನೂರು ಅವರಿಗೆ ಶಾಸಕರಾಗುವ ಎಲ್ಲ ಅರ್ಹತೆ ಇದೆ. ಅವರನ್ನು ವಿಧಾನಸೌಧಕ್ಕೆ ಕಳುಹಿಸಿಕೊಟ್ಟರೆ ಸಿದ್ದರಾಮಯ್ಯ ಅವರ ಶಕ್ತಿ ಹೆಚ್ಚಾಗಲಿದೆ ಎಂದು ಶಿರಮಗೊಂಡನಹಳ್ಳಿಯಲ್ಲಿ ತಿಳಿಸಿದರು.

ವರ್ತಮಾನ
ಜಾಹೀರಾತಿಗೆ ಉತ್ತಮ ಮಾಧ್ಯಮ

## ಶ್ರೀಗಳ ಜಯಂತೋತ್ಸವ



ಮೈಸೂರು: ಬಸವೇಶ್ವರ ರಸ್ತೆಯಲ್ಲಿನ ಬಸವ ಬಳಗ ಹಾಗೂ ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರ ಭಕ್ತದವರಿಂದ ಸಿದ್ದಗಂಗಾ ಮಠದ ದಿ. ಶ್ರೀಶಿವಕುಮಾರ ಸ್ವಾಮೀಜಿಯವರ 119ನೇ ಜಯಂತೋತ್ಸವದ ಭವ್ಯ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು.

ಬೆಳಿಗ್ಗೆ 9ಗಂಟೆಗೆ ಬಸವೇಶ್ವರ ರಸ್ತೆಯ 13ನೇ ಕ್ರಾಸ್‌ನಿಂದ ಪ್ರಾರಂಭವಾದ ಶ್ರೀಗಳ ಭಾವಚಿತ್ರವುಳ್ಳ ಭವ್ಯ ಮೆರವಣಿಗೆಗೆ ಶಾಸಕ ಜಿ.ಡಿ.ಹರೀಶ್ ಗೌಡ ಚಾಲನೆ ನೀಡಿದರು. ಅಲ್ಲದೆ, ಮೆರವಣಿಗೆಯಲ್ಲಿ ಹೆಜ್ಜೆ ಹಾಕಿ ಸಂಭ್ರಮಿಸಿದರು. ಮೆರವಣಿಗೆಯುದ್ದಕ್ಕೂ ಜಾನಪದ ಕಲಾತಂಡಗಳ ಪ್ರದರ್ಶನ, ಮೇಳಗಳು ಮತ್ತು ಸಾವಿರಾರು ಭಕ್ತಾದಿಗಳ ಜಯಘೋಷಗಳು ಮೊಳಗಿದವು. ಬಸವೇಶ್ವರ ರಸ್ತೆಯಿಂದ ಆರಂಭಗೊಂಡ ಮೆರವಣಿಗೆಯು ನೂರೊಂದು ಗಣಪತಿ ದೇವಸ್ಥಾನ, ರಾಮಾನುಜ ರಸ್ತೆ, ಕಂಸಾಳೆ ಮಾದೇವಯ್ಯ ವೃತ್ತ ಹಾಗೂ ಚಾಮುಂಡಿಪುರಂ ವೃತ್ತದ ಮೂಲಕ ಸಾಗಿ, ಸಾರ್ವಜನಿಕರ ಗಮನ ಸೆಳೆಯಿತು. ಭಕ್ತಾದಿಗಳಿಗೆ ಪ್ರಸಾದ ವಿನಿಯೋಗಿಸಲಾಯಿತು.

ಶಿವಚಕರ ಸಂಘದ ರಾಜ್ಯಾಧ್ಯಕ್ಷ ಮಲ್ಲಣ್ಣ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಕುಮಾರ್, ಮಲ್ಲೇಶ್, ಬಸವ ಬಳಗ ಒಕ್ಕೂಟಗಳ ಅಧ್ಯಕ್ಷ ಎಂ.ಚಂದ್ರಶೇಖರ್, ಬ್ಯಾತಳ್ಳಿ ನಾಗರಾಜ್, ವರುಣ ಮಹೇಶ್, ಸಮಾಜದ ಮುಖಂಡರಾದ ಅಂಬಳೆ ಶಿವಣ್ಣ, ಸಂದೀಪ್ ಚಂದ್ರಶೇಖರ್, ಗೆಜ್ಜಗಳ್ಳಿ ಶಂಕರ್, ಮುಕುಂದ ರಾಜೇ ಅರಸ್, ಮಹಾದೇವ ಸ್ವಾಮಿ, ಹಡ್ಜನ ಗುರುಸ್ವಾಮಿ, ಪ್ರಭು, ಮಾರಶೆಟ್ಟಳ್ಳಿ ಮಹದೇವು, ಮಲ್ಲೇಶ್, ವೃಷಭೇಂದ್ರ, ಬಸವರಾಜು, ಜಯಣ್ಣ, ಹಡ್ಜನ ರಾಜು, ಶಿವಣ್ಣ, ಶಿವಕುಮಾರ ಶಾಸ್ತ್ರಿಗಳು, ಮುರುಡಗಳ್ಳಿ ಕುಮಾರ್, ಎಚ್‌ಎನ್ ಚಂದ್ರಶೇಖರ್, ಬಾಲಕೃಷ್ಣ ಗುಂಡಪ್ಪ, ಭಾಸ್ಕರ್, ನವೀನ್ ಸೇರಿ ಅನೇಕರು ಉಪಸ್ಥಿತರಿದ್ದರು.

## ಮಣಿಪಾಲ್‌ನಿಂದ ಯಶಸ್ವಿ ಶಸ್ತ್ರಚಿಕಿತ್ಸೆ




ಮೈಸೂರು: ಸುಸೂತ್ರವಾಗಿ ಮೂತ್ರ ವಿಸರ್ಜನೆ ಮಾಡಲಾಗದೇ ಇರುವುದು ಸಹಾ ಕೆಲವೊಮ್ಮೆ ಗಂಭೀರ ಸಮಸ್ಯೆಗೆ ಕಾರಣವಾಗಬಹುದಾಗಿದೆ. ಈ ಸಮಸ್ಯೆಗೆ ತಮ್ಮ ಆಸ್ಪತ್ರೆಯಲ್ಲಿ ನಗರದಲ್ಲಿಯೇ ಪ್ರಥಮ ಬಾರಿಗೆ ಎಂಬಂತೆ ಸರಳ ಹಾಗೂ ಅತ್ಯಾಧುನಿಕ ಚಿಕಿತ್ಸಾ ವಿಧಾನ ಬಳಸಿಕೊಂಡು ಓರ್ವ ರೋಗಿಯನ್ನು ಗುಣಪಡಿಸಲಾಗಿದೆ ಎಂದು ನಗರದ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯ ಡಾ.ಟಿ.ಪಿ. ದಿನೇಶ್‌ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸುಮಾರು 30 ವರ್ಷ ವಯಸ್ಸಿನ ರೋಗಿಯೊಬ್ಬರು ಈ ಸಮಸ್ಯೆಯಿಂದ ಬಳಲುತ್ತ ತಮ್ಮ ಆಸ್ಪತ್ರೆಗೆ ಬಂದ ವೇಳೆ ತಪಾಸಣೆ ನಡೆಸಿದ ಬಳಿಕ ಅವರು ಬೆಂಗಳೂರಿನ ಒಂದು ಆಸ್ಪತ್ರೆಯಲ್ಲಿ ಒಂದು ವರ್ಷದ ಹಿಂದೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೂ ಗುಣಮುಖರಾಗದಿರುವುದು ಗಮನಕ್ಕೆ ಬಂದಿತು. ಹೀಗಾಗಿ ಮೂತ್ರ ಸಾಗುವ ನಾಳದಲ್ಲಿ ಮಾಂಸ ಬೆಳೆದು ನಾಳವನ್ನು ಮುಚ್ಚಿಕೊಂಡಿದ್ದುದು ಕಂಡು ಬಂದು, ಹೊಸ ವಿಧಾನದ ಮೂಲಕ ಅವರನ್ನು ಗುಣಪಡಿಸಲು ನಿರ್ಧರಿಸಲಾಯಿತೆಂದರು. ಅದರಂತೆ ಅವರ ಕೆನ್ನೆಯ ಒಂದು ಭಾಗದಿಂದ ಜೀವಕೋಶಗಳನ್ನು ತೆಗೆದು ಪುಣೆಯ ವಿಶೇಷ ಪ್ರಯೋಗಾಲಯದಲ್ಲಿ ಅವು ವೃದ್ಧಿಸುವಂತೆ ಮಾಡಿ, ಔಷಧಿ ರೂಪಕ್ಕೆ ತರಲಾಯಿತು. ಅದನ್ನು ಸಿಸ್ಟೋಸ್ಕೋಪ್ ಹಾಗೂ ಲೇಸರ್ ತಂತ್ರಜ್ಞಾನದ ಮೂಲಕ ಪೀಡಿತ ಭಾಗಕ್ಕೆ ಸೇರಿಸಲಾಯಿತು. ಈಗ ರೋಗಿ ಗುಣಮುಖರಾಗಿದ್ದಾರೆ. ಇದು ಯಾವುದೇ ಅಡ್ಡ ಪರಿಣಾಮವಿಲ್ಲದ, ಶೀಘ್ರ ಚೇತರಿಕೆಯ, ದೊಡ್ಡ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲದ ನೂತನ ವಿಧಾನವಾಗಿದ್ದು, ತಮ್ಮ ಆಸ್ಪತ್ರೆಯಲ್ಲಿ ಲಭ್ಯವಿದೆ ಎಂದು ಮಾಹಿತಿ ನೀಡಿದರು. ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ. ಉಪೇಂದ್ರ ಶೆಣೈ ಮಾತನಾಡಿ, ಮೂತ್ರನಾಳದ ಸಮಸ್ಯೆ ಪದೇ ಪದೇ ಕಾಣಿಸಿಕೊಳ್ಳುವುದು ರೋಗಿಗಳಿಗೆ ದೈಹಿಕ ಮತ್ತು ಮಾನಸಿಕ ಕಿರಿಕಿರಿಯುಂಟು ಮಾಡುತ್ತದೆ. ಇವರಿಗೆ ಈ ಸ್ಟೆಮ್ ಸೆಲ್ ಎಂಬ ನೂತನ ವಿಧಾನ ಪರಿಣಾಮಕಾರಿ ಚಿಕಿತ್ಸೆಯಾಗಿದೆ ಎಂದರು. ಆಸ್ಪತ್ರೆ ನಿರ್ದೇಶಕ ಬಿ.ಜೆ. ಸಂದೀಪ್ ಪಟೇಲ್ ಇದ್ದರು.

### ಅಸಂಘಟಿತ ಕಾರ್ಮಿಕರು ವಿಮಾ ವ್ಯಾಪ್ತಿಗೆ

# ನಗರಸಭೆವತಿಯಿಂದ ಮೊದಲ ಕಂತು

### ಅಸಂಘಟಿತ ಕಾರ್ಮಿಕರ ಸಮೀಕ್ಷೆ ಆರಂಭ । ಸಮೀಕ್ಷಾದಾರರಿಗೆ ಪರಿಕರಗಳ ವಿತರಣೆ



ರಾಮನಗರ: ಅಸಂಘಟಿತ ಕಾರ್ಮಿಕರು ಕೇಂದ್ರ ಸರ್ಕಾರದ ಪಿ.ಎಂ.ಜೆ.ಜೆ.ವೈ, ಪಿ.ಎಂ.ಎಸ್.ಬಿ.ವೈ ಮತ್ತು ಪಿ.ಎಂ–ವೈ.ಎಂ ವಿಮಾ ಯೋಜನೆಗಳ ಸವಲತ್ತು ಪಡೆಯುವಂತೆ ಪ್ರೇರೇಪಿಸಲು ಸ್ಥಳೀಯ ನಗರಸಭೆ ಮುಂದಾಗಿದೆ. ಈ ಯೋಜನೆಗಳ ಮೊದಲ ಕಂತನ್ನು ನಗರಸಭೆವತಿಯಿಂದ ಪಾವತಿ ಸುವ ಮೂಲಕ ಅಸಂಘಟಿತ ಕಾರ್ಮಿಕರು ಈ ವಿಮಾ ಯೋಜನೆಗಳ ಸವಲತ್ತುಗಳನ್ನು ಪಡೆಯಲು ಪ್ರೋತ್ಸಾಹಿಸುತ್ತಿದೆ.

ನಗರಸಭಾ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಅಸಂಘಟಿತ ಕಾರ್ಮಿಕರ ಮಾಹಿತಿ ಕಲೆಹಾಕಲು ನಗರಸಭೆಯ ಸಿಬ್ಬಂದಿ ಸಮೀಕ್ಷೆಗೆ ಮುಂದಾಗಿದ್ದಾರೆ

**ದೇಶಕ್ಕೆ ಮಾದರಿ – ಕೆ.ಶೇಷಾದ್ರಿ**

ಈ ಸಂಬಂಧ ನಗರಸಭೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮಾತನಾಡಿದರು. ನಗರಸಭೆಯ 2026–27ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವಂತೆ ನಗರಸಭಾ ವ್ಯಾಪ್ತಿಯಲ್ಲಿನ ಅಸಂಘಟಿತ ಕಾರ್ಮಿಕರಾದ ಆಟೋ ಚಾಲಕರು, ಇತರೆ ವಾಹನಗಳ ಚಾಲಕರು, ಗಾರೆ ಕೆಲಸ, ಕಾರ್ಪೆಂಟರ್, ಕೂಲಿ ಕೆಲಸ, ಫಿಲೇಚರ್, ಹೋಟೆಲ್, ಅಂಗಡಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಬೀದಿ ಬದಿ ವ್ಯಾಪಾರಸ್ಥರು, ಮಡಿವಾಳರು, ಅಕ್ಕಸಾಲಿಗರು, ಪೈಂಟಿಂಗ್, ಕಟ್ಟಡ, ಪ್ಲಂಬಿಗ್, ಟೈಲರಿಂಗ್ ವೃತ್ತಿನಿರತರು ಹೀಗೆ ಜೀವನೋಪಾಯಕ್ಕಾಗಿ ಕಸಬು ಮಾಡುತ್ತಿರುವ ಅಸಂಘಟಿತ ಕಾರ್ಮಿಕರಿಗೆ ವಿಮಾ ಯೋಜನೆಯನ್ನು ಕಲ್ಪಿಸಲು ಉದ್ದೇಶಿಸಲಾಗಿದೆ ಎಂದರುಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಯೋಜನೆ (ಪಿಎಂಜೆಜೆವೈ), ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ (ಪಿಎಂಎಸ್‌ಬಿವೈ), ಪ್ರಧಾನ ಮಂತ್ರಿ ಶಮಯೋಗಿ ಮಾನ್–ಧನ್ (ಪಿ.ಎಂ–ವೈ.ಎಂ) ಯೋಜನೆಗಳಿಗೆ ಪ್ರಥಮ ಕಂತನ್ನು ನಗರಸಭೆಯವತಿಯಿಂದ ಪಾವತಿಸಲಾಗುವುದು. ತನ್ಮೂಲಕ ಈ ಕಾರ್ಮಿಕರನ್ನು ವಿಮಾ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ. ಇದು ಬಹುಶಃ ದೇಶದಲ್ಲೇ ಪ್ರಥಮ ಬಾರಿಗೆ ರಾಮನಗರ ನಗರಸಭೆ ಇಂತಹ ಮಹತ್ವದ ಕಾರ್ಯ ಕೈಗೊಂಡಿದೆ ಎಂದರು. ಅಸಂಘಟಿತ ಕಾರ್ಮಿಕರ ಪೈಕಿ ಬಹುತೇಕರಿಗೆ ವಿಮಾ ಯೋಜನೆಗಳ ಮಹತ್ವ ತಿಳಿದಿಲ್ಲ, ಹೀಗಾಗಿ ನಗರಸಭೆವತಿಯಿಂದ ವಿಮಾ ಸವಲತ್ತಿನ ಮಹತ್ವವನ್ನು ತಿಳಿಸಿಕೊಡುವ ಪ್ರಯತ್ನ ಆರಂಭಿಸಿದ್ದೇವೆ. ಪ್ರಥಮ ಕಂತನ್ನು ನಗರಸಭೆಯಿಂದ ಪಾವತಿಸಲಾಗುವುದು, ಉಳಿದ ಕಂತುಗಳನ್ನು ಫಲಾನುಭವಿಗಳೇ ನೇರವಾಗಿ ತಮ್ಮ ಬ್ಯಾಂಕು ಖಾತೆಯಿಂದ ಪಾವತಿಸಿಕೊಳ್ಳುತ್ತಾರೆ ಎಂದರು.

### ಸಂಧ್ಯಾಕಾಲದಲ್ಲಿ ಪಿಂಚಣಿ

**ಈ ಕಾರ್ಮಿಕರಿಗೆ ಅವರ ಜೀವನ ಸಂಧ್ಯಾಕಾಲದಲ್ಲಿ ದುಡಿದು ತಮ್ಮನ್ನು ಪೋಷಿಸಿಕೊಳ್ಳಲು ಆರ್ಥಿಕ ಮೂಲಗಳು ಇರುವುದಿಲ್ಲ. ಇಂತಹ ಅಸಂಘಟಿತ ವಲಯದ ಕಾರ್ಮಿಕರಿಗೆ ಅವರ ವಯೋವೃದ್ಧ ವೇಳೆಯಲ್ಲಿ ಸಾಮಾಜಿಕ ಭದ್ರತೆ ಕಲ್ಪಿಸಲು ಭಾರತ ಸರ್ಕಾರವುಪ್ರಧಾನ ಮಂತ್ರಿ ಶ್ರಮ್‌ಯೋಗಿ ಮಾನ್–ಧನ್ (ಪಿಎಂ ಎಸ್‌ವೈಎಂ) ಎಂಬ ಮಹತ್ವಾಕಾಂಕ್ಷಿ ವಂತಿಗೆ ಆಧಾರಿ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯ ಸವಲತ್ತನ್ನು ನಗರಸಭೆ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಕಾರ್ಮಿಕರಿಗೆ ಒದಗಿಸಿಕೊಡಬೇಕಾಗಿದೆ. 60 ವರ್ಷದ ನಂತರ ಮೂರು ಸಾವಿರ ಮಾಸಿಕ ಪಿಂಚಣಿ ಪಡೆಯಲು ಸಾಧ್ಯವಾಗುತ್ತದೆ ಎಂದರು.**

### ಸಮೀಕ್ಷೆಗಾಗಿ ಗುಂಪುಗಳ ರಚನೆ

**ನಗರಸಭೆ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಕಾರ್ಮಿಕರ ಸಮೀಕ್ಷೆಗಾಗಿ 85 ಮಂದಿಯ ಗುಂಪು ರಚಿಸಲಾಗಿದೆ. ಈ ಪೈಕಿ 8 ಮಂದಿ ಮೇಲುಸ್ತುವರಿ ವಹಿಸಲಿದ್ದಾರೆ. ಈ ಗುಂಪುಗಳು ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಲಿದ್ದಾರೆ. ಇವರಿಗೆ ಬೇಕಾದ ಎಲ್ಲ ಪರಿಕರಗಳನ್ನು ನಗರಸಭೆಯ ಮೂಲಕ ಒದಗಿಸಲಾಗುತ್ತಿದೆ. ಸಮೀಕ್ಷಾದಾರರು ಆಯಾ ವಾರ್ಡುಗಳ ನಗರಸಭಾ ಸದಸ್ಯರ ಸಹಕಾರದಲ್ಲಿ ತಮ್ಮ ಕಾರ್ಯ ನಿರ್ವಹಿಸುವರು ಎಂದು ಕೆ.ಶೇಷಾದ್ರಿ ತಿಳಿಸಿದರು.**

### ಕಂದಾಯ– ಏಪ್ರಿಲ್‌ನಲ್ಲಿ ಪಾವತಿಸಿದರೆ ಶೇ 5 ರಿಯಾಯಿತಿ

**ನಗರಸಭೆಯ ಆಯುಕ್ತ ಡಾ.ಜಯಣ್ಣ ಮಾತನಾಡಿ, ನಗರಸಭಾ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಕಂದಾಯ ಪಾವತಿಸಿದರೆ ಶೇ 5 ರಷ್ಟು ರಿಯಾಯಿತಿಗೆ ಅರ್ಹತೆ ಪಡೆಯುತ್ತಾರೆ ಎಂದು ತಿಳಿಸಿದರು. ಮೇ, ಜೂನ್‌ನಲ್ಲಿ ಕಂದಾಯ ಪಾವತಿಸಿದರೆ ದಂಡ ರಹಿತ ಕಂದಾಯದ ಮೊತ್ತ ಪಾವತಿಸಿಕೊಳ್ಳಲಾಗುವುದು. ತದನಂತರ ಪಾವತಿಸಿದರೆ ಮಾಸಿಕ ಶೇ 2ರಷ್ಟು ದಂಡ ವಿಧಿಸಲಾಗುತ್ತದೆ. ಹೀಗಾಗಿ ಆಸ್ತಿ ಮಾಲೀಕರು ರಿಯಾಯಿತಿ ಅವಧಿಯ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.**

ಪತ್ರಿಕಾಗೋಷ್ಠಿಯಲ್ಲಿ ನಗರಸಭಾ ಸದಸ್ಯರುಗಳಾದ ಪವಿತ್ರ, ಪಾರ್ವತಮ್ಮ, ನಿಜಾಮುದ್ದಿನ್, ಅಜ್ಮತ್, ಮಂಜುನಾಥ್, ಮುನಜಿಲ್ ಆಗಾ, ಸಮದ್, ನಾಗಮ್ಮ, ಖುರೇಷಿ ಮತ್ತಿತರರು ಭಾಗವಹಿಸಿದ್ದರು.

## ಏ.8ರಿಂದ ಬೇಸಿಗೆ ಶಿಬಿರ

ಮೈಸೂರು: ಬಿದಿರು ಥಿಯೇಟರ್ ಸಂಸ್ಥೆ ವತಿಯಿಂದ ಏ.8ರಿಂದ ಮೇ 8 ರವರೆಗೆ 6 ರಿಂದ 15 ವರ್ಷದೊಳಗಿನ ಮಕ್ಕಳಿಗಾಗಿ ಬಣ್ಣದ ಬುಗುರಿ ಎಂಬ ಬೇಸಿಗೆ ಶಿಬಿರ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಮಂಜುನಾಥ್ ಪ್ಯಾಟೆ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶುಲ್ಕ 3499 ರೂ. ಗಳಾಗಿವೆ. ಯಾದವಗಿರಿಯ ಆಕಾಶವಾಣಿ ವೃತ್ತ ಬಳಿಯ ಸುನಂದ ಅಕಾಡೆಮಿಯಲ್ಲಿ ಶಿಬಿರ ನಿತ್ಯ ಬೆಳಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ನಡೆಯಲಿದ್ದು, ನಾಟಕ, ಜಾನಪದ ಕಲೆಗಳು, ದೇಸಿ ಆಟ, ಮಕ್ಕಳ ಸಂತೆ, ಪಾಶ್ಚಾತ್ಯ ನೃತ್ಯ, ಈಜು, ಪ್ರವಾಸ, ಹೋಳಿ, ಪೋಷಕರು ಮತ್ತು ಮಕ್ಕಳ ನಡುವಿನ ಸಂವಾದ ಮೊದಲಾದವನ್ನು ಒಳಗೊಂಡಿದೆ. ಹೆಚ್ಚಿನ ಮಾಹಿತಿಗೆ ದೂ. 73496 16609 ನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ರಂಗಕರ್ಮಿ ಅಶ್ವತ್ ಕದಂಬ, ಜ್ಯೋತಿ ಶಿವನಂಜ, ಚೈತನ್ಯ ಶಿವನಂಜ, ಶಶಿರಾವ್ ಇದ್ದರು.



## ಕೇಂದ್ರದ ಕಾರ್ಮಿಕ ಸಂಹಿತೆ ವಿರೋಧಿಸಿ ಪ್ರತಿಭಟನೆ




ಮೈಸೂರು: ಕೇಂದ್ರ ಸರ್ಕಾರ ಇಂದಿನಿಂದ ಜಾರಿಗೆ ತಂದಿರುವ ಕಾರ್ಮಿಕ ಸಂಹಿತೆ ವಿರೋಧಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಪದಾಧಿಕಾರಿಗಳು ನಗರದ ಗಾಂಧಿ ಚೌಕದಲ್ಲಿ ಪ್ರತಿಭಟಿಸಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಾರ್ಮಿಕ ಸಂಹಿತೆಯು ಕಾರ್ಮಿಕರಿಗೆ ಮರಣ ಶಾಸನವಾಗಿದೆ. ಈ ಹಿನ್ನೆಲೆಯಲ್ಲಿ ಕರಾಳ ದಿನಾಚರಣೆ ಆಯೋಜಿಸಲಾಗುತ್ತಿದೆ. ಕೇಂದ್ರ ಸರ್ಕಾರವು ಈ ದೇಶದಲ್ಲಿ ಸಂಪತ್ತು ಸೃಷ್ಟಿಸುವ ಕಾರ್ಮಿಕ ವರ್ಗವನ್ನು ಸಂಪೂರ್ಣವಾಗಿ ಕಡೆಗಣಿಸಿ ಅವರನ್ನು ಮಾಲೀಕರ ಗುಲಾಮನನ್ನಾಗಿ ಮಾಡುವ ಮತ್ತು ಮಾಲೀಕರಿಗೆ ಪರಮಾಧಿಕಾರ ನೀಡುವ ಹುನ್ನಾರದ ಭಾಗವಾಗಿ ಸ್ವತಂತ್ರ್ಯ ಪೂರ್ವದಿಂದಲೂ ಜಾರಿಯಲ್ಲಿದ್ದಂತ ಸುಮಾರು 29 ಕಾರ್ಮಿಕ ಕಾಯ್ದೆ ರದ್ದುಪಡಿಸಿ ಹೊಸದಾಗಿ 4 ಕಾರ್ಮಿಕ ಸಂಹಿತೆಗಳಾಗಿ ಮಾರ್ಪಡಿಸಿದ್ದಾರೆ ಎಂದು ಆರೋಪಿಸಿದರು.

ಈ ಹಿಂದೆ ಇದ್ದಂತಹ ಎಲ್ಲಾ ಕಾರ್ಮಿಕ ಕಾಯ್ದೆಗಳ ಬದಲಾವಣೆಯಾಗಿ ಕಾರ್ಮಿಕರ ಹಕ್ಕು ಬಾಧ್ಯತೆಗಳನ್ನು ಕಡೆಗಣಿಸಲಾಗಿದೆ. ಇದರಿಂದ ಮಾಲೀಕರಿಗೆ ಕಾರ್ಮಿಕರ ಮೇಲೆ ಪ್ರಹಾರ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಅದರಂತೆ ಹಿಂದೆ 100ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುವ ಕೈಗಾರಿಕೆಯನ್ನು ಮುಚ್ಚಬೇಕಾದರೆ ಸರ್ಕಾರದ ಅನುಮತಿ ಅವಶ್ಯಕವಿತ್ತು. ಆದರೆ ಇದನ್ನು 300ಕ್ಕೆ ಏರಿಸಿರುವುದರಿಂದ ಕರ್ನಾಟಕ ರಾಜ್ಯದಲ್ಲಿ ಶೇ. 75ರಷ್ಟು ಕೈಗಾರಿಕೆಗಳಲ್ಲಿ 300ಕ್ಕಿಂತ ಕಡಿಮೆ ಕಾಯಂ ಕಾರ್ಮಿಕರಿರುವುದರಿಂದ ಕೈಗಾರಿಕೋದ್ಯಮಿಗಳು ಯಾವಾಗ ಬೇಕಾದರೂ ಅವರ ಕೈಗಾರಿಕೆ ಮುಚ್ಚುವ ಅಥವಾ ವರ್ಗಾವಣೆ ಮಾಡುವ ಅವಕಾಶ ದೊರೆಯುವುದರಿಂದ ಕಾರ್ಮಿಕನ ಕೆಲಸದ ಭದ್ರತೆಗೆ ಧಕ್ಕೆ ಬಂದಿದೆ ಎಂದರು. ಎಲ್ಲಾ ವಿಚಾರ ಮತ್ತು ಹಲವು ಕಾರ್ಮಿಕ ವಿರೋಧಿ ನೀತಿ ವಿರೋಧಿಸಿ ಕಾರ್ಮಿಕ ಕಾಯ್ದೆ ಜಾರಿಯಾಗುವ ದಿನವಾದ ಏಪ್ರಿಲ್ ಒಂದನೇ ತಾರೀಖು ಇಡೀ ರಾಷ್ಟ್ರದಲ್ಲಿ ಕರಾಳ ದಿನವನ್ನು ಆಚರಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಬಾಲಾಜಿ ರಾವ್, ಚಂದ್ರಶೇಖರ ಮೇಟಿ, ಜವರಯ್ಯ, ಎನ್.ಕೆ. ದೇವದಾಸ್, ಅಣ್ಣಪ್ಪ, ಆನಂದರಾಜ್, ಎಚ್.ಬಿ. ರಾಮಕೃಷ್ಣ, ಜಯರಾಮು, ಉಗ್ರ ನರಸಿಂಹೇಗೌಡ ಇದ್ದರು.

### ಕೇಂದ್ರ ಸರ್ಕಾರದ ವಿರುದ್ಧ ಕಿಡಿ

# ಅಲ್ಪಸಂಖ್ಯಾತರ ನೋವು ನಲಿವಿನ ಅಕ್ವ ಕೃತಿ ಬಿಡುಗಡೆ



ಮೈಸೂರು: ತಾವು ಲಿಂಗತ್ವ ಅಲ್ಪಸಂಖ್ಯಾತರೆಂದು ಸ್ವಯಂ ಘೋಷಣೆ ಮಾಡುವಂತಿದ್ದ ಈ ಮೊದಲಿನ ಸೌಲಭ್ಯ ಕೇಂದ್ರ ಸರ್ಕಾರ ರದ್ದುಪಡಿಸಿ, ವೈದ್ಯಕೀಯ ಪರಿಶೀಲನೆಗೆ ಒಳಗಾಗಬೇಕೆಂದು ಮಸೂದೆ ಮಂಡನೆ ಮಾಡಿರುವುದನ್ನು ವಿರೋಧಿಸಿ ಲಿಂಗತ್ವ ಅಲ್ಪ ಸಂಖ್ಯಾತರಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಮುದಾಯದವರ ನೋವು ನಲಿವಿನ ಕಥೆಗಳನ್ನು ಒಳಗೊಂಡ ಅಕ್ವ?! ಕೃತಿ ಬಿಡುಗಡೆಗೊಳಿಸಿ ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದರು.

ಮೊದಲಿಗೆ ಲೇಖಕ ಡಾ.ಎನ್. ವಾಸಯ್ಯ ರಚಿಸಿರುವ ಈ ಕೃತಿ ಬಿಡುಗಡೆಗೊಳಿಸಿದ ಲಿಂಗತ್ವ ಅಲ್ಪಸಂಖ್ಯಾತರ ಒಕ್ಕೂಟದ ನೇತೃತ್ವ ವಹಿಸಿರುವ ಪ್ರಣತಿ ಪ್ರಕಾಶ್ ಮಾತನಾಡಿ, ಸಮುದಾಯದವರನ್ನು ಸಮಾಜ ಮೂಲೆಗುಂಪು ಮಾಡುತ್ತದೆ. ಆದರೆ ಇವರಿಗೂ ಭಾವನೆಗಳಿವೆ ಎಂಬುದನ್ನು ಈ ಕೃತಿ ತೋರಿಸುತ್ತದೆ. ಈ ಮೊದಲು ಲಿಂಗತ್ವ ಅಲ್ಪಸಂಖ್ಯಾತರ ಕಾರ್ಡ್ ಪಡೆಯಲು ಜಿಲ್ಲಾಧಿಕಾರಿ ಕಚೇರಿಗೆ ಸ್ವಯಂ ಘೋಷಣೆಯ ಪ್ರಮಾಣಪತ್ರ ಸಲ್ಲಿಸಿದರೆ ಸಾಕಾಗುತ್ತಿತ್ತು. ಇದರ ಆಧಾರದ ಮೇಲೆ ಕಾರ್ಡ್ ಬರುತ್ತಿತ್ತು. ಇದನ್ನು ಪಡೆದ ಎಷ್ಟೋ ಮಂದಿ ಈಗ ಗೃಹಲಕ್ಷ್ಮಿ ?ಮ ಸೌಲಭ್ಯ ಪಡೆದಿದ್ದಾರೆ. ಆದರೆ ಕೇಂದ್ರ ಸರ್ಕಾರ ಇದೀಗ ಮಂಡಿಸಿರುವ ಮಸೂದೆ ಇದಕ್ಕೆ ತಡೆಯೊಡ್ಡಿದ್ದು, ವೈದ್ಯಕೀಯ ತಪಾಸಣೆ ಮಾಡಿಕೊಳ್ಳುವ ಮೂಲಕ ದೃಢ ಪಡಿಸಬೇಕು ಎಂದು ಸೂಚಿಸುತ್ತದೆ. ಇದು ತಮ್ಮ ಸಮುದಾಯದವರ ಮೇಲೆ ಮಾಡಿದ ಪ್ರಹಾರವಾಗಿದೆ ಎಂದು ಕಿಡಿಕಾರಿದರು.

ಸಮುದಾಯದ ಮತ್ತೋರ್ವ ಮುಖಂಡ ಟಿ. ಶಿವರಾಮು ಮಾತನಾಡಿ, ಹೊಸ ಮಸೂದೆ ತಮ್ಮ ಸಮುದಾಯದವರ ಮನಸ್ಥಿತಿಗೆ ವಿರುದ್ಧವಾದುದಾಗಿದೆ. ಜೊತೆಗೆ ಅಂತಹವರು ಸಮುದಾಯದೊಡನೆ ಬೆರೆಯಬಾರದು, ಆ ರೀತಿ ಮಾಡಿದರೆ ಜೈಲು ಶಿಕ್ಷೆ ವಿಧಿಸುವ ಅವಕಾಶ ನೀಡಿದೆ. ಈ ರೀತಿ ಪ್ರಮಾಣಪತ್ರ ಪಡೆಯಬೇಕಾದ ನಿಯಮ ಲಿಂಗತ್ವ ಅಲ್ಪ ಸಂಖ್ಯಾತರಿಗೆ ಮಾತ್ರ ಏಕೆ, ತಾನು ಪುರುಷ, ತಾನು ಮಹಿಳೆ ಎಂದು ಇತರರು ಸಹಾ ವೈದ್ಯಕೀಯ ಪ್ರಮಾಣಪತ್ರದ ಮೂಲಕ ದೃಢ ಪಡಿಸಿಕೊಳ್ಳುವಂತೆ ಮಾಡಲಿ ಎಂದು ಆಗ್ರಹಿಸಿದರು.

ಕೃತಿಕಾರ ಡಾ.ಎನ್. ವಾಸಯ್ಯ ಮಾತನಾಡಿ, ಅಕ್ವಾ ಎಂಬುದು ಸಮುದಾಯದೊಳಗಿನವರು ಕೆಲವರಿಗೆ ಬಳಸುವ ಪದ, ತಾನು ಮಹಿಳೆ ಎಂಬ ಭಾವನೆಗಳು ಬಾಧಿಸಲ್ಪಡುವ ಪುರುಷರನ್ನು ಈ ರೀತಿ ಕರೆಯಲಾಗುತ್ತದೆ. ಇವರೂ ಸಹಾ ಈ ರೀತಿ ಲೈಂಗಿಕ ಅಲ್ಪ ಸಂಖ್ಯಾತರೇ ಆಗಿರುತ್ತಾರೆ. ಇಂತಹವರ ಭಾವನೆ, ನೋವುಗಳನ್ನು ಈ ಕೃತಿ ಒಳಗೊಂಡಿದೆ. ಈ ರೀತಿ ಲೈಂಗಿಕ ಅಲ್ಪ ಸಂಖ್ಯಾತರ ಬಗೆಗಿನ ಸಮಗ್ರ ಕಥೆಗಳ ಕಥಾ ಸಂಕಲನ ಕನ್ನಡದಲ್ಲಿ ಬಹುಶಃ ಇದೇ ಮೊದಲಿನದೆನ್ನಬಹುದಾಗಿದೆ ಎಂದರು. ಸಮುದಾಯದವರಾದ ಅಪ್ಸರಾ ಮೊದಲಾದವರು ಇದ್ದರು.

# ಮಾರಮ್ಮ ಜಾತ್ರಾ ಮಹೋತ್ಸವ



ಸರಗೂರು: ತಾಲೂಕಿನ ಕುರ್ಣೇಗಾಲ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ಕೂಡಗಿ ಮಾರಮ್ಮನ ಜಾತ್ರಾ ಮಹೋತ್ಸವ ಬಹಳ ವಿಜೃಂಭಣೆಯಿಂದ ಜರುಗಿತು.

ಎರಡು ದಿನಗಳ ಕಾಲ ನಡೆದ ಜಾತ್ರಾ ಮಹೋತ್ಸವಕ್ಕೆ ಕುರ್ಣೇಗಾಲ ಮತ್ತು ಕೂಡಗಿ ಗ್ರಾಮಗಳು ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದವು. ತಳಿರು ತೋರಣ , ವಿದ್ಯುತ್ ದೀಪಾಲಂಕಾರದಿಂದ ಬೀದಿಗಳು ಕಂಗೊಳಿಸುತ್ತಿದ್ದವು.

ಮಂಗಳವಾರ ಬೆಳಗ್ಗೆ ನುಗು ನದಿಯ ಹಿನ್ನೀರಿನಿಂದ ಮಂಗಳವಾದ್ಯ, ಸತ್ತಿಗಗಳ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಮಾರಮ್ಮ ದೇವರ ಗಡುಗೆಯನ್ನು ಹೊತ್ತು ತರಲಾಯಿತು.

ಬಳಿಕ ಸಾವಿರಾರು ಭಕ್ತರು ಶ್ರೀ ಮಾರಮ್ಮ ದೇವಿಗೆ ತಪ್ಪಿನ ಪೂಜೆ ಜೊತೆ ಭಕ್ತಿ ಭಾವದಿಂದ ತಾಯಿಯ ದರ್ಶನ ಪಡೆದು ಪುನೀತರಾದರು. ಸಂಜೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸತ್ತಿಗೆಗಳ ಮೆರವಣಿಗೆ ಮಾಡಲಾಯಿತು.

ಅಕ್ಕಪಕ್ಕದ ಗ್ರಾಮಗಳಾದ ಆಲನಹಳ್ಳಿ, ಕಾಡಬೇಗೂರು, ಮುತ್ತಿಗೆಹುಂಡಿ, ಶಿವಪುರ ಕಂದಲಿಕೆ, ಮುಗುತನ ಮೂಲೆ, ಸಿದ್ದಾಪುರ ಸೇರಿದಂತೆ ಹಲವು ಗ್ರಾಮಸ್ಥರು ಗ್ರಾಮಸ್ಥರು ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗಿದ್ದರು.

# ಸರ್ಕಾರ ಯೋಜನೆ ರೂಪಿಸಲು ಜನಗಣತಿ ಸಹಕಾರಿ



ಮೈಸೂರು: ಜನಗಣತಿಯಿಂದ ಜನರ ಜೀವನದ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಅನುಕೂಲವಾಗಿದ್ದು, ಇದರಿಂದ ಸರ್ಕಾರ ಹೊಸ ಯೋಜನೆಗಳನ್ನು ರೂಪಿಸಲು ಸಹಕಾರಿಯಾಗಲಿದೆ. ಸಾರ್ವಜನಿಕರು ಜನಗಣತಿಯ ಗಣತಿದಾರರಿಗೆ ನಿಖರ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಾಧ್ಯಮ ಗೋಷ್ಠಿ ನಡೆಸಿ ಮಾತನಾಡಿದರು. ಜನಗಣತಿಯು ಎರಡು ಹಂತದಲ್ಲಿ ನಡೆಯಲಿದ್ದು, ಮೊದಲ ಹಂತದಲ್ಲಿ ಮನೆ ಪಟ್ಟಿ ಅಥವಾ ಮನೆ ಸರ್ವೆ ಏಪ್ರಿಲ್ 1 ರಿಂದ ಮೇ 15 ರವರೆಗೆ ನಡೆಯಲಿದೆ. ಎರಡನೇ ಹಂತದ ವ್ಯಕ್ತಿವಾರು ಸರ್ವೆ ಫೆಬ್ರವರಿ ಮಾಹೆಯಲ್ಲಿ ನಡೆಯಲಿದೆ ಎಂದರು.

ಏ.1 ರಿಂದ 15 ರವರೆಗೆ ಸಾರ್ವಜನಿಕರು ಸ್ವಯಂ ಗಣತಿಗಾಗಿ ವೆಬ್ ಸೈಟ್ ವಿಳಾಸ ತಿತಿತಿ.ಜ.ಛಿಜಟಣ. ರಂತಿ.ಎಟ ಬಳಸಿಕೊಂಡು ಲಾಗ್ ಇನ್ ಆಗಿ ಮನೆಗಳ ಪಟ್ಟಿ ಮತ್ತು ವಸತಿ ಗಣತಿ ಸಂಬಂಧ ಕೇಳಲಾಗುವ 33 ಪ್ರಶ್ನೆಗಳಿಗೆ ಉತ್ತರಿಸಬಹುದಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸ್ವಯಂಗಣತಿಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು..

ಮನೆ ಮನೆ ಜನಗಣತಿಗಾಗಿ ಜಿಲ್ಲೆಯಲ್ಲಿ 6013 ಬ್ಲಾಕ್ ರಚಿಸಲಾಗಿದ್ದು, 6540 ಗಣತಿದಾರರು ಹಾಗೂ 1207 ಮೇಲ್ವಿಚರಕರು ಸೇರಿದಂತೆ ಒಟ್ಟು 7748 ಸಿಬ್ಬಂದಿಗಳನ್ನು ನಿಯೋಜಿಸಿ ಅವರಿಗೆ ತರಬೇತಿ ನೀಡಲಾಗುತ್ತಿದೆ ಎಂದರು.

ಜನರ ಆರ್ಥಿಕ ಚಟುವಟಿಕೆ, ಸಾಕ್ಷರತೆ, ಶಿಕದಷಣ, ವಸತಿ,ಗೃಹ ಸೌಲಭ್ಯ, ನಗರೀಕರಣ, ಫಲವತ್ತತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಭಾಷೆ, ಧರ್ಮ, ವಲಸೆ, ಅಂಗವಕಲ್ಯ ಮತ್ತು ಇತರೆ ಹಲವು ಸಾಮಾಜಿಕ ಸಾಂಸ್ಕೃತಿಕ ದತ್ತಾಂಶ ಪಡೆಯುವುದು ಜನಗಣತಿಯ ಉದ್ದೇಶವಾಗಿದ್ದು, ಜನಗಣತಿಯಲ್ಲಿ ಗಣತಿದಾರರು ನಿಗದಿಪಡಿಸಿರುವ 33 ಪ್ರಶ್ನೆಗಳನ್ನು ಜನರಿಗೆ ಕೇಳಿ ಮಾಹಿತಿ ಸಂಗ್ರಹಿಸಲಿದ್ದಾರೆ ಎಂದರು. ಜಿಲ್ಲೆಯ ಸಾರ್ವಜನಿಕರು ಜನಗಣತಿ ಕಾರ್ಯದಲ್ಲಿ ಸ್ವಯಂಪ್ರೇರಿತವಾಗಿ ಪಾಲ್ಗೊಂಡು ಜನಗಣತಿಯನ್ನು ಯಶಸ್ವಿಗೊಳಿಸಬೇಕು ಎಂದರು. ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಮೈಸೂರು ಮಹಾನಗರಪಾಲಿಕೆ ಉಪ ಆಯುಕ್ತ ಹಾಗೂ ಮೈಸೂರು ನಗರ ಜನಗಣತಿ ಅಧಿಕಾರಿ ಜಿ.ಎಸ್.ಸೋಮಶೇಖರ್ ಉಪಸ್ಥಿತರಿದ್ದರು.

# ಗುರುಸಿದ್ದೇಶ್ವರಸ್ವಾಮಿ ರಥೋತ್ಸವ

ಕೊಳ್ಳೇಗಾಲ: ತಾಲ್ಲೂಕಿನ ಹೊಂಡರಬಾಳು ಗ್ರಾಮದಲ್ಲಿ ಇಂದು ಶ್ರೀ.ಗುರುಸಿದ್ದೇಶ್ವರಸ್ವಾಮಿ ರಥೋತ್ಸವ ಬುಧವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಗ್ರಾಮದ ಶಂಕಿನ ಮಠದ ಶ್ರೀ ನೀಲಕಮಠ ಶಿವಚಾರ್ಯ ನೇತೃತ್ವದಲ್ಲಿ ಶ್ರೀ.ಸಿದ್ದೇಶ್ವರಸ್ವಾಮಿ ಹಾಗೂ ಅಡವಿ ತಾಯಿ ಸತ್ತಿಗೆ ರಥೋತ್ಸವ ಮಧ್ಯಾಹ್ನ 2–45 ರಲ್ಲಿ ನಡೆಯಿತು.

ನೆನ್ನೆ ಹೊಂಡರಬಾಳು ಹೊರವಲಯದ ಸಿದ್ದೇಶ್ವರ ಬೆಟ್ಟದ ಗವಿಯಲ್ಲಿ ಗುರುಸಿದ್ದೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನುಟ್ಟು ಪೂಜೆ ನಡೆಸಿ ಬುಧವಾರ ಉತ್ಸವಮೂರ್ತಿ, ಅಡವಿ ತಾಯಿ ಸತ್ತಿಗೆ ಹಾಗೂ ಹೊಂಡರಬಾಳು ಗ್ರಾಮದ ಬಸವನ್ನು ಹೂ ಹೊಂಬಾಳೆ ಮೂಲಕ ಕರೆತಂದು ಸಿದ್ಧವಾಗಿದ್ದ ರಥದ ಸುತ್ತಲೂ ಮೂರು ಪ್ರದಕ್ಷಿಣೆ ಹಾಕಿ ನಂತರ ರಥದ ಮೇಲೆ ಕೂರಿಸಿ ಬಳಿಕ ರಥೋತ್ಸವವನ್ನು ಭಕ್ತರು ಹರ್ಷೋದ್ಗಾರ ಹಾಗೂ ಮಂಗಳವಾದ್ಯದ ಸದ್ದಿನೊಂದಿಗೆ ಜರುಗಿತು.

ರಥೋತ್ಸವದ ವೇಳೆ ನೆರೆದಿದ್ದ ಭಕ್ತರು ಹಣ್ಣು ಜವನೆ ಎಸೆದು ಭಕ್ತಿ ಸಮರ್ಪಣೆ ಮಾಡಿದರು.

ನಾಳೆ ರಾತ್ರಿ ಗ್ರಾಮದ ಕೊಂಡದ ಮಾಳದಲ್ಲಿ ಕೊಂಡಕ್ಕೆ ಅಗ್ನಿಸ್ಪರ್ಶ ಮಾಡಿ ಶುಕ್ರವಾರ ಮುಂಜಾನೆ ಸಮಯದಲ್ಲಿ ಕೊಂಡೋತ್ಸವ ಹಾಗೂ ಪಲ್ಲಕ್ಕಿ ಉತ್ಸವ ನಡೆಯಲಿದೆ.

ಈ ಸಂಧರ್ಭದಲ್ಲಿ ಶ್ರೀ ಸಿದ್ದೇಶ್ವರ ಗ್ರಾಮಾಭಿವೃದ್ಧಿ ಹಾಗೂ ಹರಿದಿನ ಜಾತ್ರಾ ಸೇವಾ ಸಮಿತಿಯವರು ಮತ್ತು ಅರ್ಚಕರು, ಎಲ್ಲಾ ಕೋಮಿನ ಯಜಮಾನರು ಗಳು, ಗ್ರಾಮಸ್ಥರು ಹಾಗೂ ಗ್ರಾ.ಪಂ ಮಾಜಿ ಅಧ್ಯಕ್ಷರು, ಮಾಜಿ ಸದಸ್ಯರು ಹಾಗೂ ಇತರರು ಇದ್ದರು.



# ತ್ರಿವಿಧ ದಾಸೋಹದ ಮೂಲಕ ಬಸವ ತತ್ವ ಬಿತ್ತಿದ ಶ್ರೀಗಳು

## ಕೆ.ಶೇಷಾದ್ರಿ ಅಭಿಪ್ರಾಯ | ಶಿವಕುಮಾರ ಸ್ವಾಮೀಜಿ ಜಯಂತಿ

ರಾಮನಗರ: ಶಿವಕುಮಾರ ಸ್ವಾಮೀಜಿ ಅವರು ತ್ರಿವಿಧ ದಾಸೋಹದ?ಮೂಲಕ ದೇಶದಲ್ಲಿ ಬಸವ ತತ್ವ?ಭಿತ್ತಿದ್ದಾರೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅಭಿಪ್ರಾಯಪಟ್ಟರು.

ಇಲ್ಲಿನ ಹಳೇ ಬಸ್ ನಿಲ್ದಾಣದ ಹೆಚ್.ಡಿ. ದೇವೇಗೌಡ ಕಾಂಪ್ಲೆಕ್ಸ್ ಮುಂಭಾಗ ಬುಧವಾರ ರಾಮನಗರ ತಾಲ್ಲೂಕು ವೀರಶೈವ ಸಂಘ, ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಮತ್ತು ಜಿಲ್ಲಾ ಸಂಘ ವೀರಶೈವ ಸಮಾಜದ ವತಿಯಿಂದ ನಡೆದ ಡಾ॥ ಶಿವಕುಮಾರ ಮಹಾಸ್ವಾಮೀಜಿಗಳವರ 119ನೇ ವರ್ಷದ ಜಯಂತೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿವಕುಮಾರಸ್ವಾಮೀಜಿ ಅವರ ಸಾಧನೆ ಸುವರ್ಣಾಕ್ಷರದಲ್ಲಿ ದಾಖಲಿಸಬಹುದು. ಸ್ವಾಮೀಜಿಗಳು ಮನುಕುಲಕ್ಕೆ ಮಾದರಿಯಾಗಿದ್ದರು, ಬಸವಣ್ಣರ ತತ್ವಾದರ್ಶ?ಕಾರ್ಯರೂಪಕ್ಕೆ ತಂದ ಅಪರೂಪದ ತಪಸ್ವಿ ಎಂದರು. ಜಾತ್ಯಾತೀತ ತತ್ವ?ಮೈಗೂಡಿಸಿಕೊಂಡಿದ್ದ ಶ್ರೀಗಳು ತಮ್ಮಲ್ಲಿ ವಿದ್ಯೆಗಾಗಿ ಅರಸಿ ಬರುವವರಿಗೆ ಜಾತಿ, ಮತಗಳ ಬೇಧವಿಲ್ಲದೆ ಅನ್ನ, ವಸತಿ, ಶಿಕ್ಷಣಕ್ಕೆ ಒತ್ತು ಕೊಟ್ಟು ಸ್ವಸ್ಥ ಸಮಾಜಕ್ಕೆ ಬುನಾದಿ ಹಾಕಿದ್ದಾರೆ. ಶಿಕ್ಷಣದ ಮಹತ್ವ ತಿಳಿದು ರಾಜ್ಯದಲ್ಲಿ ಅಕ್ಷರ ಕ್ರಾಂತಿ?ಮಾಡಿದರು. ಸರಳ ಸಜ್ಜನಿಕೆಯಲ್ಲಿ ನಡೆದ ಅವರು ವಿವಿಧ ಕ್ಷೇತ್ರಗಳ ಅಭಿವೃದ್ಧಿಗೂ ಕೊಡುಗೆ ನೀಡಿದ್ದರು ಅವರ ಆದರ್ಶಗಳು ನಮಗೆ ದಾರಿದೀಪವಾಗಿವೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಅಧ್ಯಕ್ಷ ಹೆಚ್.ಎಸ್. ಯೋಗಾನಂದ್, ತಾಲ್ಲೂಕು ಅಧ್ಯಕ್ಷ ಪೋಲೀಸ್ ಶಂಕರಪ್ಪ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನರಸಿಂಹಯ್ಯ, ಮಾಜಿ ಪ್ರಾಧಿಕಾರ ಅಧ್ಯಕ್ಷರುಗಳಾದ ರಾಜಶೇಖರ್, ಎಸ್.ಆರ್, ನಾಗರಾಜು ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು. ಜಯಂತ್ಯೋತ್ಸವದ ಅಂಗವಾಗಿ ಅನ್ನಸಂತರ್ಪಣೆ ನಡೆಯಿತು.

ತಾಪಂ ಮಾಜಿ ಅಧ್ಯಕ್ಷರುಗಳಾದ ಭದ್ರಯ್ಯ, ಸಿ. ನಾಗರಾಜು, ಮಾಜಿ ನಗರಸಭಾ ಸದಸ್ಯರುಗಳಾದ ಎ.ಜೆ. ಸುರೇಶ್, ವೇದಮೂರ್ತಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಲಿಂಗಯ್ಯ, ಮುಖಂಡರುಗಳಾದ ಜನತಾ ನಾಗೇಶ್, ಡೈರಿ ಮಹೇಶ್, ಜಗದೀಶ್, ಗುರುಮಾದಯ್ಯ, ರಾಜಣ್ಣ, ಬೆಂಕಿ ಮಹದೇವ್, ಶಿವಾನಂದ, ಗುರುಲಿಂಗಯ್ಯ, ಬೇಕರಿ ಶಿವಕುಮಾರ್, ಯತೀಶ್, ಶಿವಶಂಕರ್, ಸರಸ್ವತಮ್ಮ, ಸ್ವಾಮಿ, ಅಕ್ಕಮಹಾದೇವಮ್ಮ, ಶಿವರಾಜಮ್ಮ, ವಿಜಯಕುಮಾರ್, ಗೀತಾ, ಶೋಭಾ, ನಾಗರಾಜು, ಶಿವಸ್ವಾಮಿ, ಮಹದೇವ್, ರಾಜಶೇಖರ್, ಬಸವರಾಜು, ಕುಮಾರಸ್ವಾಮಿ, ಶಿವಪ್ರಕಾಶ್, ಸುರೇಶ್, ಗೌರೀಶ್, ಅರ್ಚಕ ಬಸವರಾಜು, ಮಹೇಶ್, ಪರಮಶಿವಯ್ಯ ಮುಂತಾದವರಿದ್ದರು.




### ದೀನ, ದಲಿತರ ಸೇವೆ

**ವೀರಶೈವ ಸಂಘ ತಾಲ್ಲೂಕು ಅಧ್ಯಕ್ಷ ಎಂ.ಆರ್. ಶಿವಕುಮಾರಸ್ವಾಮಿ ಮಾತನಾಡಿ ಶಿವಕುಮಾರ ಸ್ವಾಮೀಜಿ ಅವರು ಏಳು ದಶಕಕ್ಕೂ ಹೆಚ್ಚು ಕಾಲ ಸಮಾಜದಲ್ಲಿ ಬಡವರು, ದೀನ ದಲಿತರಿಗೆ ಅಕ್ಷರ, ಆಶ್ರಯ, ಅನ್ನ ನೀಡಿದರು. ಸ್ವಾಮೀಜಿ ದಾರ್ಶನಿಕರು ಅವರ ಆದರ್ಶ ನಮಗೆ ಶ್ರೀರಕ್ಷೆ ಎಂದರು.**

### ಲಕ್ಷಾಂತರ ಮಂದಿಗೆ ಶಿಕ್ಷಣ

**ತಾಪಂ ಮಾಜಿ ಅಧ್ಯಕ್ಷ ಕೆ.ಎಸ್. ಶಂಕರಯ್ಯ ಮಾತನಾಡಿ ಶಿವಕುಮಾರ ಸ್ವಾಮೀಜಿ ಅವರು ಧರ್ಮ, ಜಾತಿ, ವರ್ಣ ಭೇದವಿಲ್ಲದೆ ಲಕ್ಷಾಂತರ ಮಂದಿಗೆ ಶಿಕ್ಷಣ ನೀಡುವ ಮೂಲಕ ಜ್ಞಾನದ ಬೆಳಕು ತೋರಿದರು. ಕೊನೆಯ ಉಸಿರಿರುವವ ರೆಗೂ ತಮ್ಮ ಬದುಕನ್ನು ಸಮಾಜ ಸೇವೆಗೆ ಮುಡುಪಾ ಗಿಟ್ಟ ಅವರು ಮಹಾನ್ ಮಾನವತಾವಾದಿ ಎಂದರು.**

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ!

**ಯಶೋದೆಯಮ್ಮಾ ನಿನ್ನ ಗೋಪನ್ನ ಎತ್ತಿಕೊಳ್ಳಮ್ಮಾ!**
**ತುಂಟತನವನು ತಡೆಯದೇ**
**ಬಿಟ್ಟರೆ ಹೀಗೆ ಕೆಟ್ಟು ಹೋಗುವನಮ್ಮಾ!**

**ಭರಣಿಯೊಳಗಿನ ಬೆಣ್ಣೆ ಎತ್ತಿ ಹಾಕಿದನಮ್ಮ**
**ಬೆರಳೊಳಗೆ ತೆಗೆದು ನೆಕ್ಕಿದನಮ್ಮ!**
**ಗೋಪಿಯರ ಕೂಡ ಕನ್ನ ಹಾಕಿದನಮ್ಮ**
**ಛಂದವೇ ಹೇಳೇ ಯಶೋದೆಮ್ಮ!**

**ಬಂದರೆ ಕಂಬಿಕೆ ಕಟ್ಟುವೆನಮ್ಮ**
**ಬೆಣ್ಣೆಯ ಮುದ್ದೆಯ ಕೊಡಲಾರೆನಮ್ಮ**
**ಸಾಕು, ಸಾಕು ಎನಿಸಿದ ನಿನ್ನ ಕಂದನಮ್ಮ**
**ಹೇಮ ಗಿರೀಶನ ಸುಮ್ಮನೆ ಬಿಡಲಾರೆನಮ್ಮಾ!**

# ವರದಕ್ಷಿಣೆ ಕಿರುಕುಳ ಆರೋಪಿಗೆ: 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ

ಮೈಸೂರು: ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡಿದ ಮೊದಲನೇ ಆರೋಪಿಗೆ 7ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ.

2000ರಲ್ಲಿ ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಚಪ್ಪರದಹಳ್ಳಿ ಗ್ರಾಮದ ಸಿ.ಎನ್.ರೂಪರನ್ನು ಕೆ.ಆರ್.ನಗರ ತಾಲ್ಲೂಕು ಬೆಣಗನಹಳ್ಳಿ ಗ್ರಾಮದ 2ನೇ ಆರೋಪಿ ಗೌರಮ್ಮ ಮತ್ತು ಪುಟ್ಟಣ್ಣಯ್ಯ ಮಗ 1ನೇ ಆರೋಪಿ ರಂಗನಾಥನಿಗೆ 70,000 ನಗದು ಹಣ ಮತ್ತು 100 ಗ್ರಾಂ ಚಿನ್ನವನ್ನು ವರದಕ್ಷಿಣೆಯಾಗಿ ಕೊಟ್ಟು ವಿವಾಹ ಮಾಡಿದ್ದರು. ಇವರಿಗೆ ಒಬ್ಬ ಮಗನಿರುತ್ತಾನೆ. ಒಂದು ವರ್ಷದಿಂದ 1ನೇ ಆರೋಪಿ ರಂಗನಾಥನು ದುಷ್ಚಟಗಳಿಗೆ ದಾಸನಾಗಿದ್ದಾನೆ. 2ನೇ ಆರೋಪಿ ಗೌರಮ್ಮ ಕೂಡ ರೂಪಾಳಿಗೆ ನೀನು ನಮ್ಮ ಮನೆಗೆ ಬಂದ ಮೇಲೆ ನಮ್ಮ ಮನೆಯಲ್ಲಿ ಇರುವವರೆಲ್ಲಾ ಬೇರೆ ಬೇರೆ ಆಗಿದ್ದೇವೆ ಎಂದು ತುಚ್ಛವಾಗಿ ಮಾತನಾಡಿ 'ಎಲ್ಲಿಯಾದರೂ ಹೋಗಿ ನೇಣು ಹಾಕಿಕೊಂಡು ಸಾಯಿ, ನಿನ್ನಂತಾ ಹೆಂಗಸು ಭೂಮಿ ಮೇಲೆ ಇರಬಾರದು' ಎಂದು ಬೈದಿದ್ದಾರೆ. ಈ ವೇಳೆ ವರದಕ್ಷಿಣೆ ಹಣಕ್ಕಾಗಿ ಒತ್ತಾಯಿಸಿದ್ದಾರೆ.

2015ರ ಮಾ.15ರಂದು 1ನೇ ಆರೋಪಿ ರಂಗನಾಥನು 'ಏಕೆ ನಿನ್ನ ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆ ಹಣ ತಂದಿಲ್ಲ' ಎಂದು ಬೈದು 'ಎಲ್ಲಿಯಾದರೂ ಹೋಗಿ ನೇಣು ಹಾಕಿಕೊಂಡು ಸಾಯಿ' ಎಂದು ಬೈದು ಆ ರಾತ್ರಿ ಗಲಾಟೆ ಮಾಡಿದ್ದು, ಮಾ.16ರ ಮ.11ಕ್ಕೆ ರೂಪಾ ನೇಣು ಹಾಕಿಕೊಂಡು ಸಾವನ್ನಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಇಬ್ಬರ ವಿರುದ್ಧ ಕೆ.ಆರ್.ನಗರ ಪೊಲೀಸ್ ಠಾಣೆಯ ಹಿಂದಿನ ಆರಕ್ಷಕ ವೃತ್ತ ನಿರೀಕ್ಷಕ ಹೆಚ್.ಎನ್.ಸಿದ್ದಯ್ಯ ತನಿಖೆ ಪೂರೈಸಿ ದೋಷಾರೋಪಣಾ ಪತ್ರ ಸಲ್ಲಿಸಿದ್ದರು. ಪ್ರಕರಣದ ತನಿಖೆ ನಡೆಸಿದ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾ. ಕೆ.ಎನ್.ರೂಪಾ ಅಭಿಯೋಜನೆ ಪರ ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಆರೋಪಿತರ ಮೇಲಿನ ಆರೋಪ ರುಜುವಾತಾಗಿದೆ ಎಂದು ಅಭಿಪ್ರಾಯ ಪಟ್ಟು ಆರೋಪಿತರಿಗೆ ಕಲಂ 498(ಎ) ರೆ.ವಿ34 ಐಪಿಸಿ ಅಡಿಯ ಅಪರಾಧಕ್ಕೆ ಆರೋಪಿ–1 ಮತ್ತು 2 ರವರಿಗೆ 2 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ತಲಾ 10,000 ದಂಡ ವಿಧಿಸಿ ತೀರ್ಪು ನೀಡಿರುತ್ತದೆ. ದಂಡ ಪಾವತಿಸಲು ತಪ್ಪಿದಲ್ಲಿ ಮತ್ತೆ 6 ತಿಂಗಳ ಸಾದಾ ಶಿಕ್ಷೆ ವಿಧಿಸಿರುತ್ತದೆ. ಕಲಂ 306 ರೆ.ವಿ 34 ಐಪಿಸಿ ಅಡಿಯ ಅಪರಾಧಕ್ಕೆ 1ನೇ ಆರೋಪಿಗೆ 5 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು 25,000 ದಂಡ ಮತ್ತು 2ನೇ ಆರೋಪಿತಳಿಗೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು 10,000ದಂಡ ವಿಧಿಸಿ ತೀರ್ಪು ನೀಡಿರುತ್ತದೆ. ದಂಡ ಪಾವತಿಸಲು ತಪ್ಪಿದಲ್ಲಿ ಮತ್ತೆ 6 ತಿಂಗಳ ಸಾದಾ ಶಿಕ್ಷೆ ವಿಧಿಸಿರುತ್ತದೆ. ಸದರಿ ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕ ಎ.ಎನ್.ಮಧು ಸರ್ಕಾರದ ಪರ ವಾದ ಮಂಡಿಸಿದ್ದರು.

# ಡಾ.ಚಿತ್ರಾ ಬಿಳಿಗಿರಿ ನೂತನ ಅಧ್ಯಕ್ಷೆ



**ಅಖಿಲ ಭಾರತ ಸಂಗೀತ ನೃತ್ಯ ಕಲಾವಿದರ ಒಕ್ಕೂಟದ ಮೈಸೂರು ವಿಭಾಗದ ನೂತನ ಅಧ್ಯಕ್ಷರಾಗಿ ಆಯ್ಕೆ**

ಚಾಮರಾಜನಗರ: ಅಖಿಲ ಭಾರತ ಸಂಗೀತ ನೃತ್ಯ ಕಲಾವಿದರ ಒಕ್ಕೂಟ ಮೈಸೂರು ವಿಭಾಗದ ಹೊಸ ಸಮಿತಿ ರಚಿಸಿ ನೂತನ ಪದಾಧಿಕಾರಿಗಳನ್ನು ಅವಿರೋಧ ಆಯ್ಕೆಮಾಡಲಾಯಿತು.

ಇತ್ತೀಚೆಗೆ ಬೆಂಗಳೂರಿನ ಶ್ರೀ ಗುರುರಾಜ ಸಭಾಭವನದಲ್ಲಿ ನಡೆದ ಅಖಿಲ ಭಾರತ ಸಂಗೀತ ನೃತ್ಯ ಕಲಾ ವಿದರ ಸಂಘದ ಮೊದಲ ವರ್ಷದ ಮಹಾಸಭೆಯು ಸಂಘದ ರಾಷ್ಟ್ರೀಯ ಅಧ್ಯಕ್ಷ ಸಾಯಿನಾರಾಯಣ ಕಲ್ಮಡ್ಕ ಅವರ ನೇತೃತ್ವದಲ್ಲಿ ನಡೆಯಿತು .

ಸಭೆಯಲ್ಲಿ ವಿದುಷಿ ಡಾ.ನಾಗಲಕ್ಷ್ಮಿರವರ ಸಂಚಾಲಕತ್ವದಲ್ಲಿ ಅಖಿಲ ಭಾರತ ಸಂಗೀತ ನೃತ್ಯ ಕಲಾವಿದರ ಒಕ್ಕೂಟ ಮೈಸೂರು ವಿಭಾಗದ ಹೊಸ ಸಮಿತಿ ರಚನೆ ಮಾಡಿದ್ದು ನೂತನ ಅಧ್ಯಕ್ಷರಾಗಿ ವಿದುಷಿ ಡಾ.ಚಿತ್ರಾ ಬಿಳಿಗಿರಿ, ಉಪಾಧ್ಯಕ್ಷರಾಗಿ ವಿದುಷಿ ಗೀತಾ ಎಸ್ , ವಿದುಷಿ ಶೀಲಾ, ಕಾರ್ಯದರ್ಶಿಯಾಗಿ ವಿದ್ವಾನ್ ಗುಣಶಂಕರ್, ಸಹಕಾರ್ಯದರ್ಶಿ ವಿದ್ವಾನ್ ರಜತ್, ನಿರ್ದೇಶಕರಾಗಿ ವಿದುಷಿ ಮೇಘನ, ವಿದ್ವಾನ್ ಮಹೇಶ್, ವಿದುಷಿ ರಮ್ಯ ರಾಘವೇಂದ್ರ, ವಿದುಷಿ ಅದಿತಿ ಭಟ್, ವಿದುಷಿ ಸೌಜನ್ಯ, ವಿದುಷಿ ಸುನಿಧಿ, ಚಂದ್ರಿಕಾ.ಕೆ ಆಶಾ ರಾಣಿ ಕೆ, ಶ್ರಾವಣಿ ಜಿಎಸ್, ಶಶಿಕಲಾ ಕೆ ಎಸ್ ಸಂಗೀತ ನೃತ್ಯ ಕಲಾವಿದರುಗಳು ಅವರನ್ನು ಸಮಿತಿಗೆ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಂಗೀತ ನೃತ್ಯ ಕ್ಷೇತ್ರದಲ್ಲಿ ಹಿರಿಯ ಕಲಾವಿದರ ಸಹಕಾರದೊಂದಿಗೆ ವಿಶ್ವಾಸ ಸಾಮರಸ್ಯದೊಂದಿಗೆ ಕಲಾವಿದರ ಏಳಿಗೆಗಾಗಿ ನಿಸ್ವಾರ್ಥವಾಗಿ ಶ್ರಮಿಸುವುದಾಗಿ ಮಾತೃ ಸಂಸ್ಥೆಗೆ ವಚನ ನೀಡಲಾಯಿತು. ಹೊಸ ಸಮಿತಿಯನ್ನು ರಾಷ್ಟ್ರೀಯ ಆಡಳಿತ ಮಂಡ ಳಿಯು ಅಭಿನಂದಿಸಿ ಗೌರವಿಸಿದರು. ಕಲಾವಿದರಿಂದ ಕಲಾವಿದರಿಗೋಸ್ಕರವಿರುವ ಮೈಸೂರು ವಿಭಾಗದ ಒಕ್ಕೂಟಕ್ಕೆ ಸಾಯಿನಾರಾಯಣ ಕಲ್ಮಡ್ಕ ಶುಭ ಕೋರಿದರು.

# ಶಿವಕುಮಾರ ಸ್ವಾಮೀಜಿ ಜಯಂತಿ



ಚಾಮರಾಜನಗರ, ತ್ರಿವಿಧ ದಾಸೋಹಿ ಎಂದೇ ಖ್ಯಾತರಾದ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ 119ನೇ ಜನ್ಮದಿನದ ಪ್ರಯುಕ್ತ, ಶಿವು ಜನಸ್ನೇಹಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಆಯೋಜಿಸಲಾಯಿತು.

ಈ ಸಂದರ್ಭದಲ್ಲಿ ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ಅನ್ನಪ್ರಸಾದ ವಿತರಣೆ ಮಾಡಲಾಗಿದ್ದು, ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಕಾರ್ಯಕ್ರಮದಲ್ಲಿ ಶಿವು ಜನಸ್ನೇಹಿ ಚಾಮರಾಜನಗರ ಸಂಘದ ಪದಾಧಿಕಾರಿಗಳು, ಮೂಡಲಪುರದ ನಂದೀಶ್, ಮೂಡಲ ಅಗ್ರಹಾರದ ರವಿ ಸೇರಿದಂತೆ ಅನೇಕ ಸಾರ್ವಜನಿಕರು ಭಾಗವಹಿಸಿ ಸೇವಾ ಕಾರ್ಯಕ್ಕೆ ಕೈಜೋಡಿಸಿದರು.

# ಕೇರಳ ಲಾಟರಿ ಮಾರುತ್ತಿದ್ದವನ ಬಂಧನ

ಗುಂಡ್ಲುಪೇಟೆ : ಕೇರಳ ಲಾಟರಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಗುಂಡ್ಲುಪೇಟೆ ಠಾಣೆ ಪೊಲೀಸರು ಬಂದಿಸಿ, ಲಾಟರಿ ಟಿಕೆಟ್ ಗಳನ್ನು ವಶಕ್ಕೆ ಪಡೆದ ಘಟನೆ ಪಟ್ಟಣದ ಹಳೆ ಬಸ್ ನಿಲ್ದಾಣ ಪಾರ್ಕ್ ಬಳಿ ನಡೆದಿದೆ.



ಹ ವ ್ಮ ರ ಗಾ ಲ ಗ್ರಾಮದ ದೊರೆಸ್ವಾಮಿ ಹಾಗೂ ತಾಲೂಕಿನ ಹಂಗಳ ಗ್ರಾಮದ ಬಸವೇಗೌಡ ಎಂಬುವವರು ಹಳೆ ಬಸ್ ನಿಲ್ದಾಣ ಪಾರ್ಕ್ ಬಳಿ ಕೇರಳ ಲಾಟರಿಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪಟ್ಟಣ ಠಾಣೆಯ ಪೊಲೀಸರು ಆರೋಪಿಗಳನ್ನು ಬಂಧಿಸಿ ದೊರೆಸ್ವಾಮಿ ಬಳಿಯಿದ್ದ 50 ರೂ. ಮುಖ ಬೆಲೆಯ 1580 ಲಾಟರಿಗಳು ಮೌಲ್ಯ 77000 ರೂ. ಹಾಗೂ ಬಸವೇಗೌಡ ಬಳಿಯಿದ್ದ 360 ಲಾಟರಿಗಳು ,18000 ರೂ. ಮೌಲ್ಯದ ಲಾಟರಿಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಚರಣೆಯಲ್ಲಿ ಸಬ್ ಇನ್ಸ್ ಪೆಕರ್ ನರೇಶ್ ಕುಮಾರ್, ಪೇದೆ ಜಯಕುಮಾರ್ ಭಾಗವಹಿಸಿದ್ದರು.

**350ಕ್ಕೂ ಹೆಚ್ಚು ಜನರಿಗೆ ಉಚಿತ ಪರೀಕ್ಷೆ | ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಚಿದಂಬರ ಉದ್ಘಾಟನೆ**

# ಕಿದ್ವಾಯಿ ತಜ್ಞರಿಂದ ಕ್ಯಾನ್ಸರ್ ತಪಾಸಣಾ ಶಿಬಿರ

ಗುಂಡ್ಲುಪೇಟೆ: "ಕ್ಯಾನ್ಸರ್ ಕಾಯಿಲೆಯನ್ನು ಆರಂಭಿಕ ಹಂತದಲ್ಲಿ ಪತ್ತೆ ಹಚ್ಚುವುದರಿಂದ ಸಂಪೂರ್ಣ ಗುಣಪಡಿಸಲು ಸಾಧ್ಯ. ಈ ನಿಟ್ಟಿನಲ್ಲಿ ಜಿಲ್ಲೆಯನ್ನು ಕ್ಯಾನ್ಸರ್ ಮುಕ್ತ ಮಾಡಲು ಸಾರ್ವಜನಿಕರು ಇಂತಹ ಉಚಿತ ತಪಾಸಣಾ ಶಿಬಿರಗಳ ಪ್ರಯೋಜನ ಪಡೆಯಬೇಕು," ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಚಿದಂಬರ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರಿನ ಪ್ರಸಿದ್ಧ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ ನುರಿತ ವೈದ್ಯರು ಮತ್ತು ತಾಂತ್ರಿಕ ತಂಡ ಶಿಬಿರದಲ್ಲಿ ಭಾಗವಹಿಸಿ ತಪಾಸಣೆ ನಡೆಸಿದರು. ವಿಶೇಷವಾಗಿ ಮಹಿಳೆಯರಲ್ಲಿ ಕಂಡುಬರುವ ಬಾಯಿ ಕ್ಯಾನ್ಸರ್, ಗರ್ಭಕಂಠದ ಕ್ಯಾನ್ಸರ್ ಹಾಗೂ ಸ್ತನ ಕ್ಯಾನ್ಸರ್ ಪರೀಕ್ಷೆಗಳನ್ನು ನಡೆಸಲಾಯಿತು. ತಾಲೂಕಿನ 14 ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಿಂದ



ಸುಮಾರು 350ಕ್ಕೂ ಹೆಚ್ಚು ಮಹಿಳೆಯರು ಶಿಬಿರದಲ್ಲಿ ಪಾಲ್ಗೊಂಡು ತಪಾಸಣೆ ಮಾಡಿಸಿಕೊಂಡರು.

ಉಚಿತ ಚಿಕಿತ್ಸೆಯ ಭರವಸೆ: ತಾಲೂಕು ಆರೋಗ್ಯ ಅಧಿಕಾರಿ ಡಾ. ಅಲೀಮ್ ಪಾಷಾ ಮಾತನಾಡಿ, "30 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಕಡ್ಡಾಯವಾಗಿ ಈ ಪರೀಕ್ಷೆ ಮಾಡಿಸಿಕೊಳ್ಳಬೇಕು. ಒಂದು ವೇಳೆ ಕ್ಯಾನ್ಸರ್ ಲಕ್ಷಣಗಳು ಕಂಡುಬಂದಲ್ಲಿ ಬಿಪಿಎಲ್ ಕಾರ್ಡ್ ಹಾಗೂ ಆಯುಷ್ಮಾನ್ ಭಾರತ್ (ಂಃ–ಂಡಿಇ) ಯೋಜನೆಯಡಿ ಕಿದ್ವಾಯಿ ಆಸ್ಪತ್ರೆಯಲ್ಲಿ ಸಂಪೂರ್ಣ ಉಚಿತವಾಗಿ ಹೆಚ್ಚಿನ ಚಿಕಿತ್ಸೆ ಕೊಡಿಸಲಾಗುವುದು," ಎಂದು ಮಾಹಿತಿ ನೀಡಿದರು.

ಮುಂದಿನ ದಿನಗಳಲ್ಲಿ ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲೂ ಇಂತಹ ಶಿಬಿರಗಳನ್ನು ಆಯೋಜಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದ ಅಧಿಕಾರಿಗಳು, ಶಿಬಿರದ ಯಶಸ್ಸಿಗೆ ಕಾರಣರಾದ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಒ ಹಾಗೂ ಆರೋಗ್ಯ ಸಿಬ್ಬಂದಿಗೆ ಧನ್ಯವಾದ ಅರ್ಪಿಸಿದರು. ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಮಂಜುನಾಥ್, ಡಾ. ಚಂದ್ರಶೇಖರ್, ಸಿಡಿಪಿಒ ಹೇಮಾವತಿ, ಆರೋಗ್ಯ ನಿರೀಕ್ಷಕರು, ಆಶಾ ಕಾರ್ಯಕರ್ತೆಯರು ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಮಹಿಳಾ ಸಬಲೀಕರಣ ಸಮಾಜದ ಸಮಗ್ರ ಅಭಿವೃದ್ಧಿಗೆ ಅನಿವಾರ್ಯ




ರಾಮನಗರ/ಕನಕಪುರ: ಮಹಿಳಾ ಸಬಲೀಕರಣ ಸಮಾಜದ ಸಮಗ್ರ ಅಭಿವೃದ್ಧಿಗೆ ಅನಿವಾರ್ಯವಾಗಿದೆ ಎಂದು ಕನಕಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ. ಬಿ. ಶಾಮಲಾ ಅಭಿಪ್ರಾಯಪಟ್ಟರು.

ಕನಕಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಘಟಕದ ವತಿಯಿಂದ ಆಯೋಜಿಸಲಾದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಹಿಳೆ ಕೇವಲ ಕುಟುಂಬದ ಅಡಿಪಾಯವಾಗಿಲ್ಲ, ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಪ್ರಮುಖ ಚಾಲಕ ಶಕ್ತಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಆರ್ಥಿಕವಾಗಿ ಹಾಗೂ ಹಾರ್ದಿಕವಾಗಿ ಸಬಲರಾಗಬೇಕು ಎಂಬುದು ಇಂದಿನ ಕಾಲದ ಅಗತ್ಯವಾಗಿದೆ ಎಂದರು.

ಮಹಿಳೆಯರು ತಮ್ಮ ಸ್ವಂತ ಆದಾಯವನ್ನು ಹೊಂದಿದಾಗ ಮಾತ್ರ ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬಹುದು. ಆರ್ಥಿಕ ಸಬಲತೆ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವುದಲ್ಲದೆ, ಪೂರ್ವಗ್ರಹ ಪೀಡಿತ ಮನಸ್ಸುಗಳಿಂದ ಮುಕ್ತವಾಗಿ ಸ್ವತಂತ್ರ ಜೀವನವನ್ನು ನಡೆಸಲು ಸಹಕಾರಿ ಆಗುತ್ತದೆ. ಮಹಿಳೆ ತನ್ನ ನಿರ್ಧಾರಗಳನ್ನು ತಾನೇ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದಾಗ ಮಾತ್ರ ಆಕೆಯ ವ್ಯಕ್ತಿತ್ವವು ಸಂಪೂರ್ಣವಾಗುತ್ತದೆ ಎಂದರು.

**ಸವಾಲುಗಳನ್ನು ಎದುರಿಸಿದ್ದಾರೆ ಮಹಿಳೆಯರು – ಪ್ರೊ.ಸಾವಿತ್ರಿ**

ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ. ಸಾವಿತ್ರಿ ಮಾತನಾಡಿ, ಇತಿಹಾಸದಲ್ಲಿಯೇ ಮಹಿಳೆಯರು ಹಲವಾರು ಸವಾಲುಗಳನ್ನು ಎದುರಿಸಿಕೊಂಡು ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ. ಇಂದಿನ ಮಹಿಳೆಯರು ಶಿಕ್ಷಣ ಮತ್ತು ಉದ್ಯೋಗದ ಮೂಲಕ ತಮ್ಮ ಬದುಕನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಾಣಿಜ್ಯ ಶಾಸ್ತ್ರ ವಿಭಾಗದ ಸಿದ್ದಪ್ಪಾಜಿ, ಡಾ. ಗೀತಾಬಾಯಿ, ಡಾ. ರಾಧಿಕಾ, ಅಕ್ಷತಾ, ಪರಂಜ್ಯೋತಿ ಕುಮಾರ್, ಪ್ರಸನ್ನ ಕುಮಾರ್, ನಂಜುಂಡ ಸೇರಿದಂತೆ ಹಲವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಮಹಿಳೆಯರ ಶಿಕ್ಷಣ, ಉದ್ಯೋಗಾವಕಾಶಗಳು ಹಾಗೂ ಸಮಾಜದಲ್ಲಿನ ಸಮಾನತೆ ಕುರಿತು ಅವರು ವಿಸ್ತಾರವಾಗಿ ಮಾತನಾಡಿದರು. ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿನಿಯರು ಮಹಿಳಾ ಪ್ರಾಧ್ಯಾಪಕರಿಗಾಗಿ ಹಲವು ಮನರಂಜನಾ ಕ್ರೀಡೆಗಳನ್ನು ಆಯೋಜಿಸಿದ್ದರು. ಈ ಕ್ರೀಡೆಗಳು ಕಾರ್ಯಕ್ರಮಕ್ಕೆ ಉತ್ಸಾಹವನ್ನು ಹೆಚ್ಚಿಸಿತು ಮತ್ತು ಎಲ್ಲರಲ್ಲೂ ಸಂತೋಷದ ವಾತಾವರಣವನ್ನು ನಿರ್ಮಿಸಿತು. ಒಟ್ಟಾರೆ, ಈ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವು ಮಹಿಳೆಯರ ಸಬಲತೆಗೆ ಹೊಸ ದಿಕ್ಕು ತೋರಿಸುವಂತಾಯಿತು. ಮಹಿಳೆಯರು ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಬಲಿಷ್ಠರಾಗಿದಾಗ ಮಾತ್ರ ಸಮಾಜವು ಸಮಾನತೆ ಮತ್ತು ನ್ಯಾಯದ ಮಾರ್ಗದಲ್ಲಿ ಮುಂದುವರಿಯುತ್ತದೆ ಎಂಬ ಸಂದೇಶವನ್ನು ಕಾರ್ಯಕ್ರಮವು ಸಾರಿತು. ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾದ ಬಿ. ಪಿ. ಸುರೇಶ್, ಆರ್. ಡಿ. ಬಸವರಾಜು, ಕೃಷ್ಣಯ್ಯ, ಚಂದ್ರಶೇಖರ್, ಲೋಕೇಶ್, ರಾಜೀವ್, ಚಂದನ್, ಮಂಜು, ವಿನಯ್ ಮುಂತಾದವರು ಭಾಗವಹಿಸಿದ್ದರು.

# ವಚನಗಳ ಅನುವಾದ: ಡಾ.ಗಲೀನ ಕೊಪೆಲಿಯೋವಿಚ್‌ಗೆ ಸನ್ಮಾನ



ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಚ್.ಎಸ್. ಹರಿಶಂಕರ್ ಅವರ ಮಾರ್ಗದರ್ಶನದಲ್ಲಿ 12ನೇ ಶತಮಾನದ ಸಮಾನತೆಯ ಹರಿಕಾರರು, ಮಾನವೀಯ ಮೌಲ್ಯಗಳ ಪ್ರತಿಪಾದಕರು ಆದ ಬಸವಾದಿ ಶರಣರ ವಚನಗಳನ್ನ ರಷ್ಯನ್ ಭಾಷೆಗೆ ಅರ್ಥ ಸಹಿತ ಅನುವಾದಿಸಿ ವಚನ ಸಾಹಿತ್ಯವನ್ನು ವಿಶ್ವವ್ಯಾಪಿಗೊಳಿಸಿರುವ ರಷ್ಯಾದ ಡಾ.ಗಲೀನ ಕೊಪೆಲಿಯೋವಿಚ್ ರನ್ನು ಬಸವ ಬಳಗಗಳ ಒಕ್ಕೂಟದ ಪರವಾಗಿ ಬುಧವಾರ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕುವೆಂಪುನಗರದ ಅನಿಕೇತನ ರಸ್ತೆ ಐದನೇ ಕ್ರಾಸಿನಲ್ಲಿರುವ ಪ್ರೊ.ಎಚ್.ಎಸ್. ಹರಿಶಂಕರ್ ಅವರ ನಿವಾಸದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಹಿರಿಯ ಕವಿ ಪ್ರೊ.ಕೆ.ಸಿ.ಶಿವಪ್ಪ, ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ಗಲೀನ ಅವರಿಗೆ ಶಾಲು, ಮೈಸೂರು ಪೇಟ ಹಾಕಿ, ಫಲತಾಂಬೂಲ ಹಾಗೂ ಸ್ಮರಣಿಕೆ ನೀಡಿ, ಸನ್ಮಾನಿಸಿದರು. ನಂತರ ಪ್ರೊ.ಎಂ. ಕೃಷ್ಣೇಗೌಡ ಮಾತನಾಡಿ, ಅನುವಾದ ಸವಾಲಿನ ಕೆಲಸ. ಏಕೆಂದರೆ ಒಂದು ಭಾಷೆಯ ಪದಗಳಿಗೆ ಸಮನಾದ ಪದಗಳು ಮತ್ತೊಂದು ಭಾಷೆಯಲ್ಲಿ ಸಿಕ್ಕುವುದಿಲ್ಲ. ಇಂತಹ ಮಹತ್ವದ ಕೆಲಸವನ್ನು ಡಾ.ಗಲೀನ ಮಾಡಿರುವುದು ಶ್ಲಾಘನೀಯ ಎಂದರು.

ಪ್ರೊ.ಕೆ.ಸಿ.ಶಿವಪ್ಪ, ಪ್ರೊ.ಎಚ್.ಎಸ್. ಹರಿಶಂಕರ್, ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಡಾ.ಕಾ.ರಾಮೇಶ್ವರಪ್ಪ ವಚನ ಪ್ರಸ್ತುತಪಡಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಮೈಸೂರು ತಾ. ಅಧ್ಯಕ್ಷ ದೇವರಾಜ ಪಿ.ಚಿಕ್ಕಹಳ್ಳಿ, ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ಶಿವಮೂರ್ತಿ ಕಾನ್ಯ, ಬಸವ ಬಳಗಗಳ ಒಕ್ಕೂಟದ ಪದಾಧಿಕಾರಿಗಳಾದ ಎ.ಪಿ.ವಿರೂಪಾಕ್ಷ, ಜಯಶಂಕರ್, ಬಿ.ಆರ್.ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಕೆ.ನರಸಿಂಹಮೂರ್ತಿ, ರಂಗನಾಥ್ ಮೈಸೂರು, ಲೇಖಕಿಯರಾದ ಮಂಗಳಾ ಮುದ್ದುಮಾದಪ್ಪ, ಬಿ.ಕೆ.ಮೀನಾಕ್ಷಿ, ಕೆರೋಡಿ ಲೋಲಾಕ್ಷಿ, ಕನ್ನಡ ಚಳವಳಿಗಾರದ ಮೂಗೂರು ನಂಜುಂಡಸ್ವಾಮಿ, ಶಾಸನತಜ್ಞ ಎಚ್.ಎಂ.ನಾಗರಾಜ ರಾವ್, ಪ್ರೊ.ಎಚ್.ಎಸ್.ಗೋಪಿನಾಥ್ ಹರಿಹರ, ಬಾಗಳಿ ಮಹೇಶ್ ಮೊದಲಾದವರು ಇದ್ದರು.

## 19–20ರಂದು ಬಸವ ಜಯಂತಿ

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಏ.19–20 ರಂದು ಕಲಾಮಂದಿರದಲ್ಲಿ ಅದ್ದೂರಿಯಾಗಿ ನಡೆಯುವ ಬಸವ ಜಯಂತಿಯಲ್ಲಿ ಗಲೀನ ಅವರನ್ನು ಸನ್ಮಾನಿಸುವ ಉದ್ದೇಶ ಇತ್ತು. ಆದರೆ ಅವರು ನಾಳೆಯೇ ರಷ್ಯಾಗೆ ತೆರಳುತ್ತಿರುವುದರಿಂದ ಡಾ.ಸಿದ್ಧಗಂಗಾ ಶಿವಕುಮಾರ ಸ್ವಾಮಿಗಳ ಜಯಂತಿಯ ದಿನವಾದ ಇವತ್ತು ಅಭಿನಂದಿಸಲಾಗುತ್ತಿದೆ ಎಂದರು.

# ಸಿದ್ದಗಂಗಾ ಶ್ರೀಗಳಿಗೆ ಭಾರತ ರತ್ನ ಪ್ರಶಸ್ತಿ ನೀಡಲು ಆಗ್ರಹ

## ಶ್ರೀಗಳ ಜನ್ಮದಿನ: ಇಂಚರ ಗ್ರೂಪ್‌ನಿಂದ ದಾಸೋಹ ವ್ಯವಸ್ಥೆ, ಸಾಯಂಕಾಲದವರೆಗೂ ಪಾನಕ, ಮಜ್ಜಿಗೆ ವಿತರಣೆ



ಚಾಮರಾಜನಗರದ: ಸಿದ್ದಗಂಗಾ ಡಾ.ಶ್ರೀ ಶಿವಕುಮಾರಸ್ವಾಮಿ ಅವರ 119ನೇ ವರ್ಷದ ಜನ್ಮ ದಿನಾಚರಣೆ ಪ್ರಯುಕ್ತ ಇಂಚರ ಹೋಟೆಲ್ ಸಮೂಹದ ಮಾಲೀಕ ಸ್ಟೈಲ್ ಮಂಜು ಪ್ರತಿ ವರ್ಷದಂತೆ ಈ ವರ್ಷವೂ ಉಚಿತ ದಾಸೋಹದ ವ್ಯವಸ್ಥೆ ಮಾಡಿದ್ದರು.

ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಹೋಟೆಲ್ ನಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಾಯಿತು. ನಂತರ ಬೆಳಿಗ್ಗೆಯಿಂದ ಸಂಜೆಯವರೆಗೆ ತಿಂಡಿ?ಊಟ ಹಾಗೂ ಪಾನಕ, ಮಜ್ಜಿಗೆ ವಿತರಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ,ಮಾತನಾಡಿ, ತ್ರಿವಿಧ ದಾಸೋಹಿ ಡಾ.ಶ್ರೀ ಶಿವಕುಮಾರಸ್ವಾಮೀಜಿಗಳು ಜ್ಞಾನ, ಅಕ್ಷರ, ಅನ್ನ ದಾಸೋಹದ ಮೂಲಕ ನಾಡಿನಾದ್ಯಂದ ಹೆಸರುವಾಸಿಯಾಗಿದ್ದರು. ಅವರು ನಡೆದಾಡುವ ದೇವರು ಎಂದು ಕರೆಸಿಕೊಳ್ಳುತ್ತಿದ್ದರು. ಅವರ 119ನೇ ಜನುಮದಿನದ ಅಂಗವಾಗಿ ಇಂಚರ ಹೋಟೆಲ್ ಸಮೂಹದ ಮಾಲೀಕ ಸ್ಟೈಲ್ ಮಂಜು ಅವರು ಪ್ರತಿ ವರ್ಷದಂತೆ ಈ ವರ್ಷವೂ ಉಚಿತ ದಾಸೋಹದ ವ್ಯವಸ್ಥೆ ಮಾಡಿರುವುದು ಒಂದು ಪುಣ್ಯದ ಕೆಲಸ.ಈ ಮಹಾತ್ಕಾರ್ಯ ಶ್ಲಾಘನೀಯವಾದದ್ದು ಎಂದರು.

ಇಂಚರ ಹೋಟೆಲ್ ಗ್ರೂಪ್ ಮಾಲೀಕ ಕೆ.ಜಿ.ಮಂಜುನಾಥ ಮಾತನಾಡಿ, ಸ್ವಾಮೀಜಿಯವರ ಹುಟ್ಟುಹಬ್ಬದ ಅಂಗವಾಗಿ ಪ್ರತಿ ವರ್ಷವೂ ಉಚಿತವಾಗಿ ಊಟ, ತಿಂಡಿ ವ್ಯವಸ್ಥೆ ಮಾಡುತ್ತಿದ್ದು, ಆದರಂತೆ ಈ ಬಾರಿಯು ಬೆಳಿಗ್ಗೆ ತಿಂಡಿ 1500 ಮಂದಿ ಮಧ್ಯಾಹ್ನ 3500 ಮಂದಿ ಊಟ ವ್ಯವಸ್ಥೆ ಮಾಡಲಾಗಿದೆ. ಇಡೀ ಪ್ರಪಂಚಕ್ಕೆ ದಾಸೋಹ ತತ್ವವನ್ನು ಸಾರಿ ತ್ರಿವಿಧ ದಾಸೋಹದಲ್ಲಿ ಎತ್ತರಕ್ಕೆ ಸಾಗಿ ಪ್ರಕಾಶಿಸಿ, ಆ ಬೆಳಕನ್ನು ಇಡೀ ನಾಡಿಗೆ ಹಂಚಿದ ದಿವ್ಯ ಬೆಳಕು ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ ಅವರಿಗೆ ಕೇಂದ್ರ ಸರ್ಕಾರ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಬೇಕು ಆಗ್ರಹಿಸಿದರು. ಈ ಸಂದರ್ಭದಲ್ಲಿ ಉಪ ತಹಸೀಲ್ದಾರ್ ರಂಗರಾಜು ಮುಖಂಡರಾದ ಬೇಡಗುಳಿ ವೀರಭದ್ರಸ್ವಾಮಿ, ವನಮೇಟಿ ಸುಂದ್ರಣ್ಣ, ಲಿಂಗರಾಜುಮೂರ್ತಿ, ಯೋಗ ಪ್ರಕಾಶ್, ವಿಶ್ವ, ಶಿವಮಲ್ಲಪ್ಪ, ಇಂಚರ ಗ್ರೂಪ್ ನ ಈಶ್ವರ್ ರಕ್ಷಿತ್, ನಾಗರತ್ನಮ್ಮ, ಉಮಾಮಂಜುನಾಥ್, ರಾಧಾಕೃಷ್ಣ, ಕಾರ್ ಸಿದ್ದರಾಜು, ಅಡುಗೆ ಭಟ್ಟರಾದ ಹೆಬ್ಬಸೂರ ಶಂಕರ್,ಮಹೇಶ್, ರಾಜು, ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಏ.4ಕ್ಕೆ ಬಸವಣ್ಣ ಮತ್ತು ಕ್ರಾಂತಿ ಕಲ್ಯಾಣ ನಾಟಕ

ಮೈಸೂರು: ನಗರ್‌ಬಾದ್ ಮುಖ್ಯ ರಸ್ತೆಯಲ್ಲಿನ ನಾಟ್ಯ ಸಂಸ್ಥೆ ವತಿಯಿಂದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಏ.4ರ ಸಂಜೆ 6.30ಕ್ಕೆ ರಂಗಾಯಣದ ಆವರಣದ ಶ್ರೀರಂಗ ವೇದಿಕೆಯಲ್ಲಿ ಬಸವಣ್ಣ ಮತ್ತು ಕ್ರಾಂತಿ ಕಲ್ಯಾಣ ಎಂಬ ನಾಟಕ ದೃಶ್ಯಗಳ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಎನ್. ಸಂತೋಷ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬಿ. ಪುಟ್ಟಸ್ವಾಮಿ ಅವರ ರಚನೆಯ ನಾಟಕ ಇದಾಗಿದ್ದು, ಇವುಗಳಲ್ಲಿನ ಆಯ್ದ ಭಾಗ ಪ್ರದರ್ಶಿಲಾಗುವುದು. ಸಹಾಯಧನ 100 ರೂ.ಗಳಾಗಿವೆ. ಇದೇ ವೇಳೆ ಏ. 5 ರಿಂದ ನಜರ್‌ಬಾದ್ ಹಾಗೂ ಕುವೆಂಪುನಗರದ ಒಂದೊಂದು ಸ್ಥಳದಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಶುಲ್ಕ 2500 ರೂ.ಗಳಾಗಿದ್ದು, ಮಕ್ಕಳಿಗೆ ನೃತ್ಯ, ನಾಟಕ, ಭಗವದ್ಗೀತೆ, ಹಾಡುಗಾರಿಕೆ, ಯೋಗಾಸನ ಮೊದಲಾದವನ್ನು ಕಲಿಸಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 99644 91957 ನ್ನು ಸಂಪರ್ಕಿಸಬಹುದಾಗಿದೆ ಎಂದರು. ಎನ್.ಪವಿತ್ರ, ಲಕ್ಷ್ಮಿ ರಾಮ್, ಶ್ರುತಿ, ನಾಗಸುಂದರ್ ಇದ್ದರು.

## ಏ.4ರಿಂದ ಬೇಸಿಗೆ ಶಿಬಿರ

ಮೈಸೂರು: ತಾವು ಸಂಚಾಲಕರಾಗಿರುವ ಮಕ್ಕಳಿಗಾಗಿನ ಬೇಸಿಗೆ ಶಿಬಿರ ಏ.4 ರಿಂದ ಮೇ 5 ರವರೆಗೆ ನಿತ್ಯ ಬೆಳಗ್ಗೆ 6 ರರಿಂದ 7 ಹಾಗೂ ಸಂಜೆ 5 ರಿಂದ 6ರವರೆಗೆ ಡಿ.ಸುಬ್ಬಯ್ಯ ರಸ್ತೆಯ ಸಂಜೀವಿನಿ ವಿಳಾಸದಲ್ಲಿ ನಡೆಯಲಿದೆ ಎಂದು ಬಿ.ಎಸ್.ನರಸಿಂಹ ಪ್ರಸಾದ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕ್ರಮಬದ್ಧ ಉಸಿರಾಟ ರೂಢಿಯಲ್ಲಿಲ್ಲದ ಕಾರಣ ಚಿಕ್ಕ ವಯಸ್ಸಿನಲ್ಲಿಯೇ ಹಲವು ಮಕ್ಕಳು ಕಾಯಿಲೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ ಇದನ್ನ ಕಲಿಸಿಕೊಡಲಾಗುವುದು. ಜೊತೆಗೆ ಸೀಮೆಸುಣ್ಣ ಹಾಗೂ ತೆಂಗಿನ ಚಿಪ್ಪಿನಲ್ಲಿ ಕಲಾಕೃತಿ ರೂಪಿಸುವುದನ್ನೂ ಕಲಿಸಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 94803 84065ನ್ನು ಸಂಪರ್ಕಿಸಬಹುದೆಂದರು. ಹರೀಶ್, ಮಣಿಕಂಠ, ಶಂಕರ್ ಸುಬ್ರಹ್ಮಣ್ಯ ಇದ್ದರು.

# ಶ್ರೀಗಳ ಜಯಂತೋತ್ಸವ



ಮೈಸೂರು: ಬಸವೇಶ್ವರ ರಸ್ತೆಯಲ್ಲಿನ ಬಸವ ಬಳಗ ಹಾಗೂ ಡಾ.ಶ್ರೀ ಶಿವಕುಮಾರ ಸ್ವಾಮೀ ಜಿಯವರ ಭಕ್ತದವರಿಂದ ಸಿದ್ದಗಂಗಾ ಮಠದ ದಿ. ಶ್ರೀಶಿವಕುಮಾರ ಸ್ವಾಮೀಜಿಯವರ 119ನೇ ಜಯಂತೋತ್ಸವದ ಭವ್ಯ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಬೆಳಿಗ್ಗೆ 9ಗಂಟೆಗೆ ಬಸವೇಶ್ವರ ರಸ್ತೆಯ 13ನೇ ಕ್ರಾಸ್‌ನಿಂದ ಪ್ರಾರಂಭವಾದ ಶ್ರೀಗಳ ಭಾವಚಿತ್ರವುಳ್ಳ ಭವ್ಯ ಮೆರವಣಿಗೆಗೆ ಶಾಸಕ ಜಿ.ಡಿ.ಹರೀಶ್ ಗೌಡ ಚಾಲನೆ ನೀಡಿದರು. ಅಲ್ಲದೆ, ಮೆರವಣಿಗೆಯಲ್ಲಿ ಹೆಜ್ಜೆ ಹಾಕಿ ಸಂಭ್ರ ಮಿಸಿದರು. ಮೆರವಣಿಗೆಯುದ್ದಕ್ಕೂ ಜಾನಪದ ಕಲಾತಂಡಗಳ ಪ್ರದರ್ಶನ, ಮೇಳಗಳು ಮತ್ತು ಸಾವಿರಾರು ಭಕ್ತಾದಿಗಳ ಜಯಘೋಷಗಳು ಮೊಳಗಿದವು. ಬಸವೇಶ್ವರ ರಸ್ತೆಯಿಂದ ಆರಂಭಗೊಂಡ ಮೆರವಣಿಗೆಯು ನೂರೊಂದು ಗಣಪತಿ ದೇವಸ್ಥಾನ, ರಾಮಾನುಜ ರಸ್ತೆ, ಕಂಸಾಳೆ ಮಾದೇವಯ್ಯ ವೃತ್ತ ಹಾಗೂ ಚಾಮುಂಡಿಪುರಂ ವೃತ್ತದ ಮೂಲಕ ಸಾಗಿ, ಸಾರ್ವಜನಿಕರ ಗಮನ ಸೆಳೆಯಿತು. ಭಕ್ತಾದಿಗಳಿಗೆ ಪ್ರಸಾದ ವಿನಿಯೋಗಿಸಲಾಯಿತು. ಶಿವಚಕರ ಸಂಘದ ರಾಜ್ಯಾಧ್ಯಕ್ಷ ಮಲ್ಲಣ್ಣ, ಮಾಜಿ ಶಾಸಕ ಎಂ. ಕೆ.ಸೋಮಶೇಖರ್, ನಗ ರಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಕುಮಾರ್, ಮಲ್ಲೇಶ್, ಬಸವ ಬಳಗ ಒಕ್ಕೂಟಗಳ ಅಧ್ಯಕ್ಷ ಎಂ.ಚಂದ್ರಶೇಖರ್, ಬ್ಯಾತಳ್ಳಿ ನಾಗರಾಜ್, ವರುಣ ಮಹೇಶ್, ಸಮಾಜದ ಮುಖಂಡರಾದ ಅಂಬಳೆ ಶಿವಣ್ಣ, ಸಂದೀಪ್ ಚಂದ್ರಶೇಖರ್, ಗೆಜ್ಜಗಳ್ಳಿ ಶಂಕರ್, ಮುಕುಂದ ರಾಜೇ ಅರಸ್, ಮಹಾದೇವ ಸ್ವಾಮಿ, ಹಡ್ಜನ ಗುರುಸ್ವಾಮಿ, ಪ್ರಭು, ಮಾರಶೆಟ್ಟಳ್ಳಿ ಮಹದೇವು, ಮಲ್ಲೇಶ್, ವೃಷಭೇಂದ್ರ, ಬಸವರಾಜು, ಜಯಣ್ಣ, ಹಡ್ಜನ ರಾಜು, ಶಿವಣ್ಣ, ಶಿವಕುಮಾರ ಶಾಸ್ತ್ರಿಗಳು, ಮುರುಡಗಳ್ಳಿ ಕುಮಾರ್, ಎಚ್‌ಎನ್ ಚಂದ್ರ ಶೇಖರ್, ಬಾಲಕೃಷ್ಣ ಗುಂಡಪ್ಪ, ಭಾಸ್ಕರ್, ನವೀನ್ ಸೇರಿ ಅನೇಕರು ಉಪಸ್ಥಿತರಿದ್ದರು.

# ಪಟ್ಟಣದಲ್ಲಿ ಸಾರಿಗೆ ಬಸ್‌ಗೆ ಕಾರು ಡಿಕ್ಕಿ–ಮಹಿಳೆಗೆ ಗಾಯ



ಗುಂಡ್ಲುಪೇಟೆ: ಕಾರೊಂದು ಬಸ್ ಗೆ ಹಿಂಬದಿಯಿಂದ ಡಿಕ್ಕಿ ಹೊಡೆದು ಮಹಿಳೆ ಗಾಯಗೊಂಡ ಘಟನೆ ಪಟ್ಟಣದ ಸ್ವಾಗತ ಕಮಾನಿನ ಬಳಿ ನಡೆದಿದೆ.

ಬೆಂಗಳೂರು ಮೂಲದ ಇಬ್ಬರು ಮೈಸೂರಿನತ್ತ ತೆರಳುವಾಗ ಬಸ್ ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಸದ್ಯ, ಪ್ರಾಣಾಪಾಯದಿಂದ ಮಹಿಳೆ ಪಾರಾಗಿದ್ದು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ. ಎರಡೂ ವಾಹನಗಳನ್ನು ಗುಂಡ್ಲುಪೇಟೆ ಪೊಲೀಸರು ವಶಕ್ಕೆ ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಜಾತಿ ರಹಿತ ಪ್ರಜಾಪ್ರಭುತ್ವ ವ್ಯವಸ್ಥೆ ಅಗತ್ಯ: ಬಿ.ಸೋಮಶೇಖರ್



ಮೈಸೂರು: ಜಾತಿ ರಹಿತ ಪ್ರಜಾಪ್ರಭುತ್ವ ವ್ಯವಸ್ಥೆ ಇಂದಿನ ಅಗತ್ಯ ಎಂದು ಮಾಜಿ ಸಚಿವ ಬಿ.ಸೋಮಶೇಖರ್ ಹೇಳಿದರು.

ಬುಧವಾರ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ತಿ.ನರಸೀಪುರ ತಾಲೂಕು ಯಾಚೇನಹಳ್ಳಿಯ ನನ್ನವ್ವ ಸಾಂಸ್ಕೃತಿಕ ಕಲಾ ತಂಡದಿಂದ ಕನ್ನಡ ರಾಜ್ಯೋತ್ಸವ, ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಆಯೋಜಿಸಿದ್ದ ಅಂಬೇಡ್ಕರ್ ಮತ್ತು ಸಂವಿಧಾನ ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಎಲ್ಲವನ್ನೂ ಜಾತಿಯಿಂದ ನೋಡುವ ಮನೋಭಾವ ಹೋಗಬೇಕು. ಶೋಷಿತ ಸಮಾಜದ ವ್ಯಕ್ತಿ ಮಾಡುವ ಒಳ್ಳೆಯ ಕೆಲಸವನ್ನು ಜನರು, ವ್ಯವಸ್ಥೆ ಗುರುತಿಸುವುದಿಲ್ಲ. ಆದರೆ, ಮೇಲ್ವರ್ಗದ ವ್ಯಕ್ತಿಯ ವಿರುದ್ಧ ಏನೇ ಆರೋಪಗಳಿದ್ದರೂ, ಅಕ್ರಮ, ಕೆಟ್ಟ ಕೆಲಸ ಮಾಡಿದರೂ, ಪ್ರಕರಣಗಳು ದಾಖಲಾಗಿದ್ದರೂ ಅವರ ಸಮಾಜ ಬೆನ್ನಿಗೆ ನಿಲ್ಲುತ್ತದೆ. ಇಂತಹ ವ್ಯವಸ್ಥೆ ತಪ್ಪಬೇಕು ಎಂದರು.

ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿರುವ ವ್ಯವಸ್ಥೆ ಬಡವರನ್ನು ಮತ್ತಷ್ಟು ಬಡವರನ್ನಾಗಿ ಮಾಡುತ್ತಿದೆ. ಪ್ರಜಾಪ್ರಭುತ್ವವನ್ನೂ ನಾಶಪಡಿಸುತ್ತಿದೆ. ಅವಕಾಶ ಸಿಕ್ಕಾಗ, ದೂರದೃಷ್ಟಿಯಿಂದ ಒಳ್ಳೆಯ ಯೋಜನೆಗಳನ್ನು ಮಾಡಬೇಕು. ಅಂಥವರನ್ನು ಜನ ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಅಂಥ ಕೆಲಸವನ್ನು ಸಾವಿತ್ರಿ ಬಾಯಿ ಫುಲೆ ದಂಪತಿ, ಅಂಬೇಡ್ಕರ್ ಮೊದಲಾದವರು ಮಾಡಿದ್ದಾರೆ. ಅವಮಾನವನ್ನು ಲೆಕ್ಕಿಸದೆ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಇದೇ ವೇಳೆ ಬೆಂಗಳೂರು ದಕ್ಷಿಣ ಜಿಲ್ಲೆಯ ಕೆಡಿಪಿ ಸದಸ್ಯ ಗುರುಮೂರ್ತಿ. ಎನ್.ಸಿ ಅವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಪುರಸ್ಕಾರ ಪ್ರದಾನ ಮಾಡಲಾಯಿತು. ಹೂಟಗಳ್ಳಿಯ ಗೀತಾ ಮತ್ತು ತಂಡದವರು ಅಂಬೇಡ್ಕರ್ ಪ್ರಾರ್ಥನಾ ಸಮೂಹ ಗೀತೆ ಹಾಡಿದರು. ತಿ.ನರಸೀಪುರದ ಭೀಮಬಾಯಿ ಮಹಿಳಾ ತಂಡದವರು ಮಹಾನಾಯಕ ನೃತ್ಯ ಪ್ರದರ್ಶನ ನೀಡಿದರು. ಸುತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಜಿ.ಮಾರಹಳ್ಳಿ ರಂಗಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ತಿ.ನರಸೀಪುರ ತಾಲೂಕು ಪಂಚಾಯಿತಿ ತಾಂತ್ರಿಕ ಸಹಾಯಕ ಎಂಜಿನಿಯರ್ ಎಂ. ಕಿರಣ್ ಕುಮಾರ್, ನಿವೃತ್ತ ಶಿಕ್ಷಕ ನಾ. ಗಂಗಾಧರಪ್ಪ, ಲೇಖಕಿ ಪ್ರಭಾಶಾಸ್ತ್ರಿ ಜೋಶುಲ, ನನ್ನವ್ವ ಸಾಂಸ್ಕೃತಿಕ ಕಲಾತಂಡದ ಅಧ್ಯಕ್ಷ ಯಾಚೇನಹಳ್ಳಿ ಮಹದೇವ್ ಪಾಲ್ಗೊಂಡಿದ್ದರು.

# ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಗುಂಡ್ಲುಪೇಟೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆ ವತಿಯಿಂದ ತಾಲೂಕಿನಲ್ಲಿ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಡಿಯಲ್ಲಿ ಹುಲಿಯಮ್ಮನ ಕೆರೆ, ಈರನ ಕೆರೆ, ಸಿದ್ದರಾಮನ ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಬಂಡೀಪುರ ವ್ಯಾಪ್ತಿಯಲ್ಲಿ ಗುದ್ದಲಿ ಪೂಜೆ ಕಾರ್ಯಕ್ರಮವನ್ನು ಪ್ರಾದೇಶಿಕ ನಿರ್ದೇಶಕ ಜಯಂತ್ ಪೂಜಾರಿ ನೆರವೇರಿಸಿದರು.

ಈ ವೇಳೆ ಪ್ರಾದೇಶಿಕ ನಿರ್ದೇಶಕ ಜಯಂತ್ ಪೂಜಾರಿ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸಮಾಜಮುಖಿ ಕೆಲಸ ಜೊತೆಗೆ ಜನ ಸಾಮಾನ್ಯರ ಉತ್ತಮ ಬದುಕಿಗಾಗಿ ಸೇವೆ ಸಲ್ಲಿಸುವುದು ಮಾತ್ರ ಅಲ್ಲ ಕಾಡು ಪ್ರಾಣಿಗಳನ್ನು ಉಳಿಸುವುದು ಹಾಗೂ ಅರಣ್ಯವನ್ನು ಕಾಪಾಡಿಕೊಳ್ಳುವ ಕಾರ್ಯವು ಎಲ್ಲರ ಹೊಣೆಯಾಗಿರುತ್ತದೆ. ಈ ಬಿಸಿಲಿನ ತಾಪಮಾನಕ್ಕೆ ಮನುಷ್ಯರೇ ಕಂಗಲಾಗಿ ಅಲೆದಾಡುತ್ತಿರುವಾಗ ಇನ್ನು ಮೂಕ ಪ್ರಾಣಿಗಳು ಏನು ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಕಾಡು ಪ್ರಾಣಿಗಳು ನೀರಿಗಾಗಿ ಆಹಾರಕ್ಕಾಗಿ ಹಳ್ಳಿಗಳಿಗೆ ಹೋಗಿ ಹಾನಿ ಮಾಡುವ ಮುಂಚೆ ನಾವು ಪ್ರಾಣಿಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಾಡಿನಲ್ಲಿ ಕಲ್ಪಿಸಿಕೊಟ್ಟರೆ ಎಲ್ಲವೂ ಎಲ್ಲರೂ ಸುರಕ್ಷಿತ ಎಂದು ತಿಳಿಸಿದರು. ಸಿಎಚ್ ಎಸ್ ಸಿ ನಿರ್ದೇಶಕ ಚಿದಾನಂದ್, ಜಿಲ್ಲಾ ನಿರ್ದೇಶಕ ದಿನೇಶ್, ಎಚ್ ಆರ್ ಟಿಎ ಪ್ರಾಂಶುಪಾಲ ದಿನೇಶ್, ಯೋಜನಾಧಿಕಾರಿ ಚಂದ್ರಶೇಖರ್, ಜನ ಜಾಗೃತಿ ವೇದಿಕೆ ಅಧ್ಯಕ್ಷ ಮಹೇಂದ್ರ, ಅರಣ್ಯ ಅಧಿಕಾರಿ ನಾಗೇಂದ್ರ ಅರ್. ಎಫ್. ಓ ಉಪಸ್ಥಿತರಿದ್ದರು.

## ಅಖಿಲ ಭಾರತ ವೀರ ಶೈವ ಮಹಾಸಭಾ, ಯುವ ಘಟಕದ ವತಿಯಿಂದ ಆಯೋಜನೆ

# ಶಿವಕುಮಾರ ಮಹಾಸ್ವಾಮೀಜಿ ಜನ್ಮ ದಿನಾಚರಣೆ



ಗುಂಡ್ಲುಪೇಟೆ: ಅಖಿಲ ಭಾರತ ವೀರ ಶೈವ ಮಹಾಸಭಾ ಹಾಗೂ ಯುವ ಘಟಕದ ವತಿಯಿಂದ ಪಟ್ಟಣದಲ್ಲಿ ತ್ರಿವಿಧ ದಾಸೋಹಿ ನಡೆದಾಡುವ ದೇವರು ಸಿದ್ದಗಂಗಾ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಜನ್ಮ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಪಟ್ಟಣದ ವಿಶ್ವಗುರು ಬಸವೇಶ್ವರ ವೃತ್ತದಲ್ಲಿ ಶಿವಕುಮಾರ ಶ್ರೀಗಳ ಭಾವಚಿತ್ರ ಇರಿಸಿ ಪೂಜೆ ಸಲ್ಲಿಸಲಾಯಿತು. ಈ ವೇಳೆ ಮುಖಂಡರು ಮಾತನಾಡಿ, ಸಿದ್ದಗಂಗಾ ಶ್ರೀಗಳು ಕಾಯಕ ತತ್ವದಲ್ಲಿ ಅಪಾರ ನಂಬಿಕೆವುಳ್ಳವರಾಗಿದ್ದರು. ನುಡಿದಂತೆ ನಡೆದ ಕಾರಣಕ್ಕೆ ಆಧುನಿಕ ಬಸವಣ್ಣ ಎಂದು ಕರೆಸಿಕೊಂಡರು. ಸಿದ್ಧಗಂಗಾ ಮಠಾಧ್ಯಕ್ಷರಾಗಿ ಪರಂಪರೆ ಮುಂದುವರೆಸುವ ಜತೆಗೆ ಯಾವುದೇ ಧರ್ಮ, ಜಾತಿ ಬೇಧಗಳಿಲ್ಲದೇ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆ ದಾಸೋಹ ನೀಡಿದ್ದರಿಂದ ಶ್ರೀಗಳ ಜನ್ಮ ದಿನವನ್ನು ದಾಸೋಹ ದಿನವನ್ನಾಗಿ ಆಚರಣೆ ಮಾಡಿಕೊಂಡು ಬರಲಾಗುತ್ತಿದೆ ಎಂದರು.

ಶ್ರೀಮಠದಲ್ಲಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನ ಹಾಗೂ ಶಿಕ್ಷಣವನ್ನು ಪಡೆದ ಯುವ ಜನತೆ ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ಸಿದ್ದಗಂಗಾ ಮಠದಲ್ಲಿ ಸಂಸ್ಕಾರ ಕಲಿತ ವಿದ್ಯಾರ್ಥಿಗಳು ನಾಡಿಗೆ ಕೊಡುಗೆ ನೀಡಿದ್ದಾರೆ. ರಾಜ್ಯದ ಉದ್ದಗಲಕ್ಕೂ ಮಠದ ಭಕ್ತರಿದ್ದು, ಶ್ರೀಗಳನ್ನು ಎಲ್ಲ ವರ್ಗದ ಜನರೂ ದೇವರೆಂದು ಪೂಜಿಸುತ್ತಿದ್ದಾರೆ. ಅವರ ಆದರ್ಶ ಜೀವನ, ಸಂದೇಶಗಳು ಸರ್ವ ಕಾಲಕ್ಕೂ ಸಮಾಜಕ್ಕೆ ದಾರಿದೀಪವಾಗಿದೆ. ಆದ್ದರಿಂದ ಶ್ರೀಗಳನ್ನು ಜಯಂತಿ ದಿನವಲ್ಲದೇ ನಿತ್ಯವೂ ಸ್ಮರಿಸಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಪ್ರಸಾದ ವಿತರಣೆ ಮಾಡಲಾಯಿತು ಈ ಸಂದರ್ಭದಲ್ಲಿ ವೀರಶೈವ ಲಿಂಗಾಯಿತ ಮುಖಂಡರಾದ ಹೆಚ್.ಎಸ್. ನಂಜಪ್ಪ,ಕನ್ನೇಗಾಲ ಸ್ವಾಮಿ,ಕಮರಹಳ್ಳಿ ರವಿ, ಹಂಗಳ ಪ್ರಣಯ್,ಸಿ. ಮಹದೇವಪ್ರಸಾದ್,ಬಸವಣ್ಣ, ದೇವರಹಳ್ಳಿ ಮಲ್ಲೇಶ್,ಮಂಜು,ಬೊಮ್ಮನಹಳ್ಳಿ ಪ್ರಭು,ನಾಗೇಂದ್ರ,ಡಿ. ಮಹೇಶ್, ಶಿಂಡನಪುರ ಮಂಜು ಸೇರಿದಂತೆ ಇನ್ನಿತರ ಮುಖಂಡರು ಮತ್ತು ಯುವಕರು ಇದ್ದರು.

## ದೈನಂದಿನ ಬೇಡಿಕೆಗೆ ತಕ್ಕಂತೆ ಗೃಹ ಬಳಕೆಯ ಅನಿಲ ಸರಬರಾಜು ಮಾಡಲು ಸೂಚನೆ

# ಅಡುಗೆ ಅನಿಲ ಸರಬರಾಜಿನಲ್ಲಿ ವ್ಯತ್ಯಯವಿಲ್ಲ, ಆತಂಕ ಬೇಡ : ಜಿಲ್ಲಾಧಿಕಾರಿ ಕುಮಾರ

**ಮಂಡ್ಯ:** ಗೃಹ ಬಳಕೆಯ ಅನಿಲ ಸರಬರಾಜು ಮತ್ತು ವಿತರಣೆ ಕುರಿತಂತೆ ಸರ್ಕಾರ ನೀಡುವ ಮಾರ್ಗಸೂಚಿಗಳನ್ನು ಅನಿಲ ವಿತರಕ ಕಂಪನಿಯ ಮಾರಾಟಗಾರರು ಪಾಲಿಸುವಂತೆ ಹಾಗೂ ಎಲ್ಲಾ ಕಂಪನಿಗಳು ಜಿಲ್ಲೆಯ ದೈನಂದಿನ ಬೇಡಿಕೆಗೆ ತಕ್ಕಂತೆ ಗೃಹ ಬಳಕೆಯ ಅನಿಲ ಸರಬರಾಜು ಮಾಡಲು ಅಗತ್ಯ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಬುಧವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಊಕಅ, ಃಕಅ ಮತ್ತು ಖಔಅ ಅನಿಲ ವಿತರಕ ಕಂಪನಿಯ ಮಾರಾಟಾಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಜಿಲ್ಲೆಯಲ್ಲಿ 34 ಅನಿಲ ವಿತರಣೆ ಕಂಪನಿಯ ಮಾರಾಟಗಾರರು ಇದ್ದು ಆಹಾರ ಇಲಾಖೆಯ ಅಧಿಕಾರಿಗಳು ನಿಯಾಮನುಸಾರ ಸ್ಥಳಕ್ಕೆ ಹೋಗಿ ಸ್ಟಾಕ್ ಪರಿಶೀಲನೆ ಮಾಡಬೇಕು. ಅಕ್ರಮ ಮಾರಾಟ ಮಾಡುವುದು. ಕಾಳಸಂತೆಯಲ್ಲಿ ಮಾರಾಟ ಮಾಡುವುದು ಕಂಡುಬಂದರೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು



ಜಿಲ್ಲಾಧಿಕಾರಿಗಳು ತಿಳಿಸಿದರು.

ಸಾರ್ವಜನಿಕರು ಗೃಹ ಬಳಕೆ ಅನಿಲ ಮುಂಗಡ ಬುಕಿಂಗ್ ಮಾಡಿದಾಗ ಏಜೆನ್ಸಿ ಅವರು ನಿಯಾಮನುಸಾರ ಹಾಗೂ ಆದ್ಯತೆಯ ಮೇರೆಗೆ ವಿತರಣೆ ಮಾಡಬೇಕು.

ಮಂಡ್ಯ ಜಿಲ್ಲೆಯಲ್ಲಿ ಗೃಹಬಳಕೆಯ ಅನಿಲ ಸರಬರಾಜು ವ್ಯವಸ್ಥೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಇಲ್ಲ. ಗೃಹಬಳಕೆ ಅನಿಲದ ದೈನಂದಿನ ಸರಬರಾಜು ಮತ್ತು ವಿತರಣೆಯಲ್ಲಿ ಯಾವುದೇ ಅಡಚಣೆ ಇಲ್ಲದೇ ಎಂದಿನಂತೆ ನಡೆಯುತ್ತಿದೆ. ಸಾರ್ವಜನಿಕರು ಯಾವುದೇ ರೀತಿಯ ಅನಗತ್ಯ ಗೊಂದಲ ಮತ್ತು ಆತಂಕಗಳಿಗೆ ಒಳಗಾಗಬಾರದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿನ ಅಂಗನವಾಡಿಗಳು, ಶಾಲೆಗಳು, ಆಸ್ಪತ್ರೆಗಳು, ಸರ್ಕಾರಿ ಹಾಸ್ಟೆಲ್‌ಗಳಿಗೆ ದೈನಂದಿನ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಆದ್ಯತೆಯಲ್ಲಿ ಅನಿಲ ಸರಬರಾಜು ಮಾಡುವಂತೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ. ಜೆ. ಶೋಭಾರಾಣಿ, ಆಹಾರ ಇಲಾಖೆ ಉಪನಿರ್ದೇಶಕ ಪ್ರತೀಕ ಹೆಗ್ಡೆ ಹಾಗೂ ಅನಿಲ ಸರಬರಾಜು ಕಂಪನಿಗಳ ಅಧಿಕಾರಿಗಳು ಮತ್ತು ಜಿಲ್ಲೆಯ ವಿವಿಧ ತಾಲೂಕುಗಳ ಅನಿಲ ಸರಬರಾಜುದಾರರು ಭಾಗವಹಿಸಿದ್ದರು.

## ಏಪ್ರಿಲ್ 05 ರಂದು ಡಾ.ಬಾಬು ಜಗಜೀವನ ರಾಮ್ ಜನ್ಮ ದಿನಾಚರಣೆ



**ಮೈಸೂರು:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಅವರ ಸಂಘಗಳ ಒಕ್ಕೂಟದ ವತಿಯಿಂದ ಡಾ.ಬಾಬು ಜಗಜೀವನ ರಾಮ್ ಅವರ 119 ನೇ ಜನ್ಮ ದಿನಾಚರಣೆಯನ್ನು ಏಪ್ರಿಲ್ 05 ರಂದು ಬೆಳಗ್ಗೆ 11:00 ಘಂಟೆಗೆ ಕರ್ನಾಟಕ ಕಲಾಮಂದಿರದದಲ್ಲಿ ಆಯೋಜಿಸಲಾಗಿರುತ್ತದೆ.

ಬೆಳಗ್ಗೆ 9:30 ಗಂಟೆಗೆ ನಗರದ ರೈಲ್ವೆ ನಿಲ್ದಾಣದ ಬಳಿಯಿರುವ ಡಾ.ಬಾಬು ಜಗಜೀವನ ರಾಮ್ ಅವರ ವೃತ್ತದಲ್ಲಿರುವ ಪ್ರತಿಮೆಗೆ ಮಾಲಾರ್ಪಣೆಯನ್ನು ಮಾಡಲಾಗುತ್ತದೆ. ಬೆಳಗ್ಗೆ 10 ಗಂಟೆಗೆ ನಗರದ ರೈಲ್ವೆ ನಿಲ್ದಾಣದಿಂದ ಕಲಾಮಂದಿರದವರೆಗೆ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯನವರು ಹಾಗೂ ಉಕ್ಕು ಮತ್ತು ಕೈಗಾರಿಕ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿಯವರ ಘನ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪರವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕರಾದ ಕೆ. ಹರೀಶ್ ಗೌಡರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

## ಕುರುಬರ ಸಂಘದ ಜಿಲ್ಲಾಧ್ಯಕ್ಷ ಎಂ.ಎಲ್.ಸುರೇಶ್ ಮೇಲೆ ಹಲ್ಲೆ ಖಂಡನೀಯ: ಕೆ.ಎಂ.ಬೀರಪ್ಪ

**ಮಂಡ್ಯ:** ಸಮಾಜದ ಕೆಲವು ಕಿಡಿಗೇಡಿಗಳು ಕುರುಬರ ಸಂಘದ ಜಿಲ್ಲಾಧ್ಯಕ್ಷ ಎಂ.ಎಲ್.ಸುರೇಶ್ ಅವರ ಮೇಲೆ ಹಲ್ಲೆ ನಡೆಸಿ, ಕಪ್ಪು ಮಸಿ ಬಳಿದ ಘಟನೆಯನ್ನು ತಾಲೂಕು ಕುರುಬರ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದು ತಾಲೂಕು ಅಧ್ಯಕ್ಷ ಕೆ.ಎಂ.ಬೀರಪ್ಪ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುರೇಶ್ ಅವರ ಆಡಳಿತ ಮಂಡಳಿ ಮುಂದಿನ ಒಂದು ವರ್ಷ ಮುಂದುವರೆಯುವ ಸಂಬಂಧ ಆಕ್ಷೇಪಣೆ ಇದ್ದರೆ ಸಂಘದ ಆವರಣದಲಿ ಕುಳಿತು ಚರ್ಚಿಸಬೇಕು ಅದನ್ನು ಬಿಟ್ಟು ಅಸಭ್ಯವಾಗಿ ವರ್ತಿಸಿ ಸಂಘದ ಮಾನಹಾಳು ಮಾಡುವುದು ತರವಲ್ಲ ಎಂದರು.

ಕಳೆದ 5 ವರ್ಷಗಳಿಂದ ಸಂಘದ ಜಿಲ್ಲಾ ಆಡಳಿತ ಮಂಡಳಿಯಲ್ಲಿ ಯಾವುದೇ ಅವ್ಯವಹಾರ ನಡೆಸದೇ ಸುರೇಶ್ ಅವರು ಆಡಳಿತ ನಡೆಸಿದ್ದಾರೆ. ಕನಕಭವನದ ಅತಿಥಿಗೃಹ, ವಿನಾಯಕ ದೇವಸ್ಥಾನ ಕಾಮಗಾರಿ ಪೂರ್ಣಗೊಳಿಸಿ, ಕನಕಭವನದ ಪೂರ್ವಭಾಗದ ಗೇಟ್ ಸಂಬಂಧ ಸಮಸ್ಯೆ ಬಗೆಹರಿಸಿ ಅದನ್ನು ತೆರೆಸಿರುವುದಲ್ಲದೇ. ಚಿಕ್ಕಮಂಡ್ಯ ಕೆರೆಯಂಗಳದಲ್ಲಿ ಸಂಘದ ನಿವೇಶನ ಖರೀದಿಗೆ 23.80 ಲಕ್ಷ ರೂ ಸ್ವಂತ ಹಣ ನೀಡಿದ್ದಾರೆ ಎಂದು ಹೇಳಿದರು.

ಅವರು ಅಧಿಕಾರಕ್ಕೆ ಬಂದ ನಂತರ ಜಿಲ್ಲಾ ಎಲ್ಲ ತಾಲೂಕು ಸಂಘಗಳನ್ನು ಸಹಕಾರ ನಿಯಮದಡಿ ನೋಂದಣಿ ಮಾಡಿಸಿದ್ದಾರೆ. ಅವರ ಕಾರ್ಯಗಳನ್ನು ಗಮನಿಸದ ಮಾಜಿ ಕಾರ್‍ಯದರ್ಶಿ ದೊಡ್ಡಯ್ಯ, ಸಾತನೂರು ಮಹೇಶ್, ಪಾಂಡವಪುರ ಕೃಷ್ಣ, ಅಣಸಾಲೆ ಶಿವಣ್ಣ ಅವರು ಕೇವಲ ಸದಸ್ಯತ್ವ ನೋಂದಣಿ ಸಂಬಂಧ ಹಲ್ಲೆ ಮಾಡಿ, ಕಪ್ಪು ಮಸಿ ಬಳಿದು ಸಮಾಜಕ್ಕೆ ಅವಮಾನ ಎಸಗಿದ್ದಾರೆ ಎಂದು ಕಿಡಿಕಾರಿದರು.


ಜಿಲ್ಲಾ ಪ್ರಧಾನ ಕಾರ್‍ಯದರ್ಶಿ ಶಶಿಧರ್ ಮಾತನಾಡಿ, ಸುರೇಶ್ ಅವರ ಆಡಳಿತಾವಧಿಯಲ್ಲಿ ಭ್ರಷ್ಟಾಚಾರ ನಡೆದಿದ್ದೇ ಆದರೆ ದೊಡ್ಡಯ್ಯ ಅವರ ಮನೆ ದೇವರು ಮೈಲಾರಲಿಂಗೇಶ್ವರ ದೇವಾಲಯದ ಬಳಿ ಪ್ರಮಾಣ ಮಾಡಿ ಸಾಕ್ಯಗಳ ಸಮೇತ ಸಾಭೀತು ಮಾಡಲಿ ಎಂದು ಸವಾಲು ಹಾಕಿದರು.

ಇವರೊಂದಿಗಿದ್ದ ಕಿಡಿಗೇಡಿಗಳಲ್ಲಿ ಓರ್ವನಾದ ತಾ.ಸಂಘದ ನಿರ್ದೇಶಕ ರಮೇಶ್ ಹಾಗೂ ಶೈಲೇಶ್ ಎಂಬುವವರು 2025ರಲ್ಲಿ ಸಮುದಾಯ ಭವನ ಬಳಸಿಕೊಂಡಿದ್ದು ಇದುವರೆಗೆ ಹಣ ಪಾವತಿ ಮಾಡಿಲ್ಲ. ಇವರು ಭಷ್ಟಾಚಾರದ ಆರೋಪ ಮಾಡುತ್ತಿದ್ದಾರೆ. ಹಲ್ಲೆಗೆ ಕಾರಣರಾದ ಜಿಲ್ಲಾ ನಿರ್ದೇಶಕರಾದ ಪಾಂಡವಪುರ ಕೃಷ್ಣ, ಸಾತನೂರು ಮಹೇಶ್, ಅಣಸಾಲೆ ಶಿವಣ್ಣ ಅವರನ್ನು ಅಮಾನತು ಮಾಡಿರುವುದಾಗಿ ಇದೇ ವೇಳೆ ತಿಳಿಸಿದರು.

ಗೋಷ್ಠಿಯಲ್ಲಿ ಜಿಲ್ಲ ಉಪಾಧ್ಯಕ್ಷ ಶ್ರೀನಿವಾಸ್, ಖಜಾಂಚಿ ರಾಜು, ಮೀನಾಕ್ಷಿ, ಮಹೇರ್ಶ, ನರಸಪ್ಪ ಹೆಗಡೆ, ಹುಚ್ಚಪ್ಪ ಇತರರಿದ್ದರು.

## ಮಹಿಳೆ ಆರ್ಥಿಕವಾಗಿ ಸಬಲಳಾಗಲಿ: ಡಾ.ಬಿ.ಶಾಮಲಾ

**ರಾಮನಗರ:** ಮಹಿಳೆ ಸಮಾಜದ ಅವಿಭಾಜ್ಯ ಅಂಗವಾಗಿದ್ದು, ಆಕೆಯ ಸಬಲತೆ ಸಮಾಜದ ಸಮಗ್ರ ಅಭಿವೃದ್ಧಿಗೆ ಅನಿವಾರ್ಯವಾಗಿದೆ. ಮಹಿಳೆ ಕೇವಲ ಕುಟುಂಬದ ಅಡಿಪಾಯವಾಗಿರದೇ, ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪ್ರಮುಖ ಚಾಲಕಶಕ್ತಿಯಾಗಿದ್ದಾಳೆ. ಆದ್ದರಿಂದ ಮಹಿಳೆಯರು ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಸಬಲರಾಗಬೇಕು ಎಂಬುದು ಇಂದಿನ ಕಾಲದ ಅಗತ್ಯವಾಗಿದೆ ಎಂದು ಕನಕಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ.ಬಿ. ಶಾಮಲಾ ಅಭಿಪ್ರಾಯಪಟ್ಟರು.




ಅವರು ಕನಕಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಘಟಕದ ವತಿಯಿಂದ ಆಯೋಜಿಸಲಾದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಿಳೆಯರು ತಮ್ಮ ಸ್ವಂತ ಆದಾಯವನ್ನು ಹೊಂದಿದಾಗ ಮಾತ್ರ ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬಹುದು. ಆರ್ಥಿಕ ಸಬಲತೆ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವುದಲ್ಲದೆ, ಪೂರ್ವಗ್ರಹಪೀಡಿತ ಮನೋಭಾವಗಳಿಂದ ಮುಕ್ತವಾಗಿ ಸ್ವತಂತ್ರ ಜೀವನ ನಡೆಸಲು ಸಹಕಾರಿಯಾಗಿದೆ. ಮಹಿಳೆ ತನ್ನ ನಿರ್ಧಾರಗಳನ್ನು ತಾನೇ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿದಾಗ ಮಾತ್ರ ಆಕೆಯ ವ್ಯಕ್ತಿತ್ವ ಸಂಪೂರ್ಣವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ। ಸಾವಿತ್ರಿ ಮಾತನಾಡಿ, ಇತಿಹಾಸದಲ್ಲಿಯೇ ಮಹಿಳೆಯರು ಅನೇಕ ಸವಾಲುಗಳನ್ನು ಎದುರಿಸಿ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ. ಇಂದಿನ ಮಹಿಳೆಯರು ಶಿಕ್ಷಣ ಹಾಗೂ ಉದ್ಯೋಗದ ಮೂಲಕ ತಮ್ಮ ಜೀವನವನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಸಿದ್ದಪ್ಪಾಜಿ, ಡಾ.ಗೀತಾಬಾಯಿ, ಡಾ.ರಾಧಿಕಾ, ಅಕ್ಷತಾ, ಪರಂಜ್ಯೋತಿ ಕುಮಾರ್, ಪ್ರಸನ್ನ ಕುಮಾರ್, ನಂಜುಂಡ ಸೇರಿದಂತೆ ಹಲವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಮಹಿಳೆಯರ ಶಿಕ್ಷಣ, ಉದ್ಯೋಗಾವಕಾಶಗಳು ಹಾಗೂ ಸಮಾಜದಲ್ಲಿನ ಸಮಾನತೆ ಕುರಿತು ವಿಸ್ತಾರವಾಗಿ ಚರ್ಚಿಸಲಾಯಿತು.

ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿನಿಯರು ಮಹಿಳಾ ಪ್ರಾಧ್ಯಾಪಕರಿಗಾಗಿ ಮನರಂಜನಾ ಕ್ರೀಡೆಗಳನ್ನು ಆಯೋಜಿಸಿದ್ದರು. ಈ ಕ್ರೀಡೆಗಳು ಕಾರ್ಯಕ್ರಮಕ್ಕೆ ಉತ್ಸಾಹವನ್ನು ತುಂಬಿ, ಸಂತೋಷದ ವಾತಾವರಣವನ್ನು ನಿರ್ಮಿಸಿತು. ಒಟ್ಟಾರೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಕಾರ್ಯಕ್ರಮವು ಮಹಿಳಾ ಸಬಲತೆಗೆ ಹೊಸ ದಿಕ್ಕು ತೋರಿಸುವಂತಾಯಿತು. ಮಹಿಳೆಯರು ಆರ್ಥಿಕ ಹಾಗೂ ಮಾನಸಿಕವಾಗಿ ಬಲಿಷ್ಠರಾಗಿದಾಗ ಮಾತ್ರ ಸಮಾಜವು ಸಮಾನತೆ ಮತ್ತು ನ್ಯಾಯದ ದಾರಿಯಲ್ಲಿ ಮುಂದುವರಿಯುತ್ತದೆ ಎಂಬ ಸಂದೇಶವನ್ನು ಕಾರ್ಯಕ್ರಮ ಸಾರಿತು.

ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾದ ಬಿ.ಪಿ.ಸುರೇಶ್, ಆರ್.ಡಿ.ಬಸವರಾಜು, ಕೃಷ್ಣಯ್ಯ, ಚಂದ್ರಶೇಖರ್, ಲೋಕೇಶ್, ರಾಜೀವ್, ಚಂದನ್, ಮಂಜು, ವಿನಯ್ ಮುಂತಾದವರು ಭಾಗವಹಿಸಿದ್ದರು.

## ದೇವಲಾಪುರ ಜಗನ್ಮಾತೆ ಶ್ರೀಪಟ್ಟಲದಮ್ಮ ದೇವಿಗೆ ಅದ್ದೂರಿ ಜಾತ್ರೆ



**ನಾಗಮಂಗಲ:** ತಾಲೂಕಿನ ದೇವಲಾಪುರ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ಜಗನ್ಮಾತೆ ಪಟ್ಟಲದಮ್ಮ ದೇವಿಯ ಜಾತ್ರಾ ಮಹೋತ್ಸವವು ಏ.3 ರಿಂದ 5ರವರೆಗೆ ಮೂರು ದಿನಗಳ ಕಾಲ ಅದ್ದೂರಿಯಾಗಿ ಜರುಗಲಿದೆ.

ದೇವಲಾಪುರ ಹಾಗೂ ತೂಬಿನಕೆರೆ ಸೇರಿದಂತೆ ಏಳು ಗ್ರಾಮಗಳ ಭಕ್ತರು ಸೇರಿ ಜಾತ್ರೆಯಲ್ಲಿ ಭಾಗವಹಿಸಲಿದ್ದು, ಭಕ್ತರ ಮಹಾಸಾಗರವೇ ಸೇರುವ ನಿರೀಕ್ಷೆಯಿದೆ. ಮೊದಲ ದಿನ ವಿಶೇಷ ಪೂಜಾ ವಿಧಿವಿಧಾನಗಳು ನಡೆಯಲಿದ್ದು, ರಾತ್ರಿ ದೇವಿಯ ಉತ್ಸವ ಹಾಗೂ ಪಟ್ಟದ ಕುಣಿತ ನಡೆಯಲಿದೆ. ಇದೇ ಸಂದರ್ಭದಲ್ಲಿ ಭಕ್ತರು ಹರಕೆ ಹೊತ್ತು ಮಡೆಅನ್ನ ಮತ್ತು ಹೊಂಬಾಳೆ ಸಮರ್ಪಿಸಿ ಕೊಂಡೋತ್ಸವದಲ್ಲಿ ಭಾಗವಹಿಸಲಿದ್ದಾರೆ.

ಎರಡನೇ ದಿನ ಅಮ್ಮನ ಅಲಂಕಾರ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿದ್ದು, ಉತ್ಸವ ಮೂರ್ತಿಯ ಪಲ್ಲಕ್ಕಿ ಮೆರವಣಿಗೆ ಹಾಗೂ ವಿವಿಧ ಗ್ರಾಮಗಳ ದೇವತೆಗಳ ಭಾಗವಹಿಸುವಿಕೆ ನಡೆಯಲಿದೆ. ಮೂರನೇ ದಿನ ಬೆಳಿಗ್ಗೆ ಕೊಂಡೋತ್ಸವ ಮತ್ತು ಸಂಜೆ ಅಮ್ಮನ ರಥೋತ್ಸವ ನಡೆಯಲಿದ್ದು, ಜಾತ್ರೆ ಸಂಪನ್ನಗೊಳ್ಳಲಿದೆ. ತೂಬಿನಕೆರೆ ಸೇರಿದಂತೆ ಏಳು ಗ್ರಾಮಗಳಾದ ದೇವರಮಲ್ಲನಾಯಕನಹಳ್ಳಿ, ತೂಬಿನಕೆರೆ, ದೊಡ್ಡಉಪ್ಪಳ, ಹದಮಗೆರೆ, ಚೌದರಿ ಕೊಪ್ಪಲು, ಲಕ್ಕೆಗೌಡನ ಕೊಪ್ಪಲು ಮತ್ತು ಕೊಂಬಿನ ಕೊಪ್ಪಲು ಗ್ರಾಮಗಳ ಭಕ್ತರು ಈ ಜಾತ್ರೆಯಲ್ಲಿ ಭಾಗವಹಿಸಲಿದ್ದಾರೆ.

## ಗ್ಯಾರಂಟಿ ಯೋಜನೆ ನೆಪದಲ್ಲಿ ಜನ ಸಾಮಾನ್ಯರ ಹಣ ಲೂಟಿ

**ಪಿರಿಯಾಪಟ್ಟಣ:** ಸರ್ಕಾರ ಅಕ್ಷರ ಆರೋಗ್ಯ ಉಚಿತ ಎಂಬ ಘೋಷ ವಾಕ್ಯವನ್ನು ಹೊಂದಬೇಕು ಎಂದು ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್ ಒತ್ತಾಯಿಸಿದರು.

**ಎಚ್.ವಿಶ್ವನಾಥ್ ಆರೋಪ**

ತಾಲ್ಲೂಕಿನ ಕೊಪ್ಪ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಅಹಿಂದ ರೈತ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ನೂತನ ತಾಲ್ಲೂಕು ಶಾಖೆ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣದಿಂದ ಬದಲಾವಣೆ ಸಾಧ್ಯ.ರಾಜ್ಯದಲ್ಲಿ ಸರ್ಕಾರಿ ಶಾಲೆ ಮುಚ್ಚುತ್ತಿದೆ. ರಾಜ್ಯ ಇಂದು ಅನ್ನ ಕೊಟ್ಟು ಅಕ್ಷರ ಕೊಡುತ್ತಿಲ್ಲ.ಅಕ್ಷರ ಆರೋಗ್ಯ ಉಚಿತ ಕೊಟ್ಟರೆ ಅನ್ನ ಹುಟ್ಟುತ್ತದೆ.

ಡಿ. ದೇವರಾಜ್ ಅರಸುರವರು 21 ಲಕ್ಷ ಎಕರೆ ಭೂಮಿಯನ್ನು ಉಳುವವವನ್ನು ಭೂ ಒಡೆಯ ಪದ್ಧತಿಯಲ್ಲಿ ನೀಡಿದರು.ಇವರು ಎಂದಿಗೂ ನಾನು ಕೊಟ್ಟಿದ್ದು ಎಂದಿಲ್ಲ. ಎಸ್. ನಿಜಲಿಂಗಪ್ಪ,, ವೀರೇಂದ್ರ ಪಾಟೀಲ್,ವೀರಪ್ಪ ಮೋಹಿಲಿ,ಬಂಗಾರಪ್ಪ ಸೇರಿದಂತ್ತೆ ಅನೇಕರು ಸಾಮಾಜಿಕ ಕಾರ್ಯಕ್ರಮ ನೀಡಿದ್ದಾರೆ.ಕೇಂದ್ರ ದಿಂದ ಆಹಾರ ಉಚಿತ ಪಡೆದು ನಾನು ಉಚಿತ ಕೊಡುತ್ತಿದ್ದೇನೆ ಎಂದು ಸಿದ್ದರಾಮಯ್ಯ ಸುಳ್ಳು ಹೇಳುತ್ತಿದ್ದಾರೆ ಎಂದರು.

ಸ್ತ್ರೀ ಶಕ್ತಿ ಸಂಘಟನೆಯಾಗಬೇಕೆಂದು ನಾನು ಮಹಿಳಾ



ಸಬಲೀಕರಣಕ್ಕೆ ಒತ್ತು ನೀಡಿದ್ದೆ. ಯಶಸ್ವಿನಿ ಯೋಜನೆ ತಂದು ಇಂದು ಉಚಿತ ಚಿಕಿತ್ಸೆಗೆ ಸಹಕಾರವಾಗುತ್ತಿದೆ.ಜನ ಸಾಮಾನ್ಯರಿಗೆ ಒಳಿತು ಮಾಡಲು ಅಂತ್ತಕರಣವಿರಬೇಕು. ಗ್ಯಾರಂಟಿ ಯೋಜನೆಯ ಎರಡು ಸಾವಿರ ಹಣ ಕೂಡ ಮಹಿಳೆಯರಿಗೆ ಬರುತ್ತಿಲ್ಲ.ಇದರಿಂದ 98 ಲಕ್ಷ ಸಾವಿರ ಕೋಟಿ ಸಾಲವಾಗಿದೆ. ಇದನ್ನು ತೀರಿಸುವವರು ಯಾರು ಎಂದು ಯೋಚಿಸಬೇಕು.ಸರ್ಕಾರ ದುಡಿಯುವವರ ಕೈಗೆ ದುಡ್ಡಲ್ಲ ಉದ್ಯೋಗ ಕೊಡಿ.ಸಾರ್ವಜನಿಕರ ತೆರಿಗೆ ಹಣವನ್ನು ಸರ್ಕಾರ ದುಂದು ವೆಚ್ಚ ಮಾಡುತ್ತಿದೆ ಆದ್ದರಿಂದ್ದ ಸಂಘಟನೆಗಳು ಎಂದಿಗೂ ಚುನಾವಣೆಯ ಗೀಳು ಹತ್ತಿಸಿಕೊಳ್ಳಬೇಡಿ ಎಂದರು. ರಾಜ್ಯಾಧ್ಯಕ್ಷ ಸೋಮನಳ್ಳಿ ಶಿವ ಶೇಖರ್ ಮಾತನಾಡಿ ಮಹನೀಯರ ಆದರ್ಶಗಳಡಿಯಲ್ಲಿ ಸಂಘಟನೆ ಪ್ರಾರಂಭಿಸಿದ್ದೇವೆ. ಜಾತ್ಯತೀತ ಸಿದ್ಧಾಂತ ನಮ್ಮದಾಗಿದೆ.ನಾಡು ನುಡಿಯ ರಕ್ಷಣೆ,ಜನ ಸಾಮಾನ್ಯರಿಗೆ ಸಾಮಾಜಿಕ ನ್ಯಾಯವನ್ನು ಕೊಡಿಸುವುದೇ ನಮ್ಮ ಗುರಿಯಾಗಿದೆ.ನಮ್ಮ ಹಕ್ಕುಗಳಿಗಾಗಿ ಹೋರಾಟ ಅನಿವಾರ್ಯವಾಗಿದೆ. ರೈತ ಬೆಳೆಯುವ ಬೆಳೆಗೆ ಸೂಕ್ತ ಬೆಲೆ ಇಲ್ಲದಾಗಿದೆ. ಸ್ಥಳೀಯವಾಗಿ ತಂಬಾಕಿಗೆ ಬೆಲೆ ಇಲ್ಲದೆ ಪರಿತಪಿಸುವಂತಾಗಿದೆ.ಇಂತಹ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟನೆ ಅವಶ್ಯಕತೆಯಾಗಿದೆ ಎಂದರು.

**ಸಭೆಯ ನಿರ್ಣಯ:** ಸಭೆಯಲ್ಲಿ ಹುಣಸೂರು ಉಪ ವಿಭಾಗವನ್ನು ಜಿಲ್ಲೆಯನ್ನಾಗಿ ಮಾಡಬೇಕು. ಲೋಕ ಸಭೆ ಮತ್ತು ವಿಧಾನ ಸಭೆಯಲ್ಲಿ ಗ್ರಾಮ ಪಂಚಾಯಿತಿ ಮಾದರಿಯಲ್ಲಿ ಮೀಸಲಾತಿ ತರಬೇಕು.ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಶೇ.50 ಮೀಸಲಾತಿ ನೀಡಬೇಕು.ಸಹಕಾರ ಕ್ಷತ್ರದಲ್ಲಿ ಮೀಸಲಾತಿ ನೀಡಬೇಕು.ವಿಧಾನ ಪರಿಷತ್ತಿಗೆ ರೈತರನ್ನು ನಾಮ ನಿರ್ದೇಶನ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಲು ನಿರ್ಣಯ ಕೈಗೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ಯೋಧ ಬೋಪಯ್ಯ,ಪ್ರಗತಿಪರ ರೈತರಾದ ಭರತ್ ಅರಸ್, ಫ್ರಾನ್ಸಿಸ್, ಶಿವಪ್ಪ ರವರನ್ನು ಸನ್ಮಾನಿಸಿದರು ಹಾಗೂ ರಾಜ್ಯ ಮಹಿಳಾ ಕಾರ್ಯದರ್ಶಿಯಾಗಿ ಮಮತಾ ಮತ್ತು ಜಿಲ್ಲಾ ಮಹಿಳಾ ಅಧ್ಯಕ್ಷರಾಗಿ ಅನುಪಮ ಆರ್ಯಯನ್ನು ಆಯ್ಕೆ ಮಾಡಿಲಾಯಿತು.

ಈ ಸಂದರ್ಭದಲ್ಲಿ ಕಾವೇರಿ ಆಸ್ಪತ್ರೆ ವ್ಯವಸ್ಥಾಪಕ ಡಾ.ಲೋಹಿತ್, ಕಸಾಪ ಕೊಡಗು ಜಿಲ್ಲಾಧ್ಯಕ್ಷರಾದ ಲೋಕೇಶ್ ಸಾಗರ್,ರಾಜ್ಯ ಉಪಾಧ್ಯಕ್ಷ ನವಿಲೂರು ಚನ್ನಪ್ಪ, ಪ್ರಧಾನ ಕಾರ್ಯದರ್ಶಿ ವಾಸುದೇವ ರೆಡ್ಡಿ,ರಾಜ್ಯ ಮಹಿಳಾ ಅಧ್ಯಕ್ಷೆ ಉಮಾಕ್ಷಿಗೌಡ,ಉಪಾಧ್ಯಕ್ಷೆ ಭಾಗ್ಯ ಗೌಡ,ಪ್ರಧಾನ ಕಾರ್ಯದರ್ಶಿ ದಿವ್ಯ ಜ್ಯೋತಿ,ಬೆಮ್ಮತಿ ಚಂದ್ರು,ತಾಲ್ಲೂಕು ಅಧ್ಯಕ್ಷ ಸಿದ್ದೇಗೌಡ, ಕುಮಾರ್,ವೀಣಾ,ಮಹದೇವ್,ಸುಜಾತ ಸೇರಿದಂತ್ತೆ ಇತರರಿದ್ದರು.

## ಮಹಾವೀರರ ಸಂದೇಶಗಳು ವರ್ತಮಾನದಲ್ಲಿ ತುಂಬಾ ಅಗತ್ಯವಿದೆ: ಸುರೇಶ್ ಋಗ್ವೇದಿ

**ಚಾಮರಾಜನಗರ:** ಜಗತ್ತಿಗೆ ಶಾಂತಿಯ ತತ್ವವನ್ನು ಬೋಧಿಸಿದ ಮಹಾವೀರರ ಸಂದೇಶಗಳು ವರ್ತಮಾನದಲ್ಲಿ ತುಂಬಾ ಅಗತ್ಯವಿದೆ ಎಂದು ಸಂಸ್ಕೃತಿ ಚಿಂತಕ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ತಿಳಿಸಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ವರ್ಧಮಾನ ಮಹಾವೀರರ ಕೊಡುಗೆಗಳ ಕುರಿತು ಮಾತನಾಡುತ್ತಾ, ಜಗತ್ತಿಗೆ ಶಾಂತಿಯ ಶಕ್ತಿ ರೂಪವಾಗಿರುವ ಭಾರತ ವಿಶ್ವಗುರುವಾಗಿದೆ. ಇಡೀ ಜಗತ್ತು ಶಕ್ತಿಯ ಸ್ವರೂಪದಲ್ಲಿ, ಸ್ವಾರ್ಥದ ರೂಪವನ್ನು ತಾಳಿ ಯುದ್ಧದ ಕಾರ್ಮೋಡದಲ್ಲಿ ಬದುಕುತ್ತಿರುವ ಸಂದರ್ಭದಲ್ಲಿ ವರ್ಧಮಾನ ಮಹಾವೀರದ ದಿವ್ಯ ಶಾಂತಿಮಂತ್ರ ತುಂಬಾ ಅನಿವಾರ್ಯವಾಗಿದೆ.




ಸಕಲ ಜೀವಿಗಳ ಮೇಲು ದಯೆ, ಕರುಣೆ ಪ್ರೀತಿ,ನೀಡಬೇಕು. ಎಲ್ಲಾ ಜೀವಿಗಳಿಗೂ ಬದುಕುವ ಹಕ್ಕಿದೆ ಎಂದು ಜಗತ್ತಿಗೆ ಸಾರಿದ ಜೈನ ಧರ್ಮದ 24ನೇ ತೀರ್ಥಂಕರರಾದ ಮಹಾವೀರರು ತಾವು ಕಂಡ ಸತ್ಯವನ್ನು ಜನಸಾಮಾನ್ಯರಿಗೆ ತಿಳಿಸುವ ಮೂಲಕ ಶಾಂತಿದೂತಕರಾಗಿ ಜಗತ್ತಿಗೆ ಕಲ್ಯಾಣವನ್ನು ಬಯಸಿದವರು. ಎಲ್ಲ ವೈಭವವನ್ನು ತ್ಯಜಿಸಿ ಜ್ಞಾನವನ್ನು ಕಟ್ಟಿಕೊಳ್ಳುವ ದಿಕ್ಕಿನಲ್ಲಿ 12 ವರ್ಷಗಳ ಕಾಲ ಸುಧೀರ್ಘ ತಪಸ್ಸನ್ನು ಮಾಡಿ ಸತ್ಯವನ್ನು ಅರಿತು ದಾನದ ಮಹತ್ವವನ್ನು ಸರಳತೆಯ ಬೋಧನೆಯನ್ನು ಆತ್ಮಕಲ್ಯಾಣದ ಜೊತೆಗೆ ಜಗತ್ತಿನ ಕಲ್ಯಾಣ ನಮ್ಮ ಕರ್ತವ್ಯವಾಗಬೇಕು. ನಂಬಿದ ಸತ್ಯದ ದರ್ಶನವನ್ನು ಸರ್ವರಿಗೂ ತಿಳಿಸಿದ ಮಹಾನ್ ವ್ಯಕ್ತಿ. ವರ್ಧಮಾನ ಮಹಾವೀರರ ಮತ್ತು ಜೈನ ಧರ್ಮದ ತತ್ವಗಳು ತಾತ್ವಿಕ ಚಿಂತನೆಗಳಿಗೆ ವಿಶ್ವಧರ್ಮವಾಗಿದೆ. ಭಾರತದ ಧರ್ಮ ಪ್ರವರ್ತಕರಾಗಿ ಭಗವಾನ್ ಮಹಾವೀರರ ಹೆಸರು ಅಜರಾಮರವಾಗಿದೆ .ಅವರ ಸಾಹಿತ್ಯ ದರ್ಶನವನ್ನು ಜೀವನ ಮೌಲ್ಯಗಳು, ದಿವ್ಯ ಸಂದೇಶಗಳನ್ನು ತಿಳಿಯುವ ಪ್ರಯತ್ನ ನಮ್ಮದಾಗಬೇಕು .ಪ್ರಸ್ತುತ ಸಂದರ್ಭದಲ್ಲಿ ಜಗತ್ತು ಅಟ್ಟ ಹಾಸದಿಂದ ,ಯುದ್ಧಗಳಿಂದ ಅಹಂಕಾರದಿಂದ ತುಂಬಿದೆ. ಮಹಾವೀರರ ಸಂದೇಶಗಳು ತುಂಬಾ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂದು ಋಗ್ವೇದಿ ತಿಳಿಸಿದರು.

ಕಸ್ತೂರಿ ಕನ್ನಡ ಸಂಘದ ಮುಖಂಡ ಬೂದಿತಿಟ್ಟು ಲಿಂಗರಾಜು ಮಾತನಾಡಿ, ಮಹಾವೀರರ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಹಮ್ಮಿಕೊಳ್ಳುವ ಮೂಲಕ ಉತ್ತಮ ಕಾರ್ಯವನ್ನು ಮಾಡಿದೆ. ಸರ್ವ ಜನಾಂಗದ, ಸರ್ವ ಮಹನೀಯರ ,ಮಹಾತ್ಮರ ಚಿಂತನೆಗಳ ಸಂಸ್ಕೃತಿ ಮೌಲ್ಯಗಳನ್ನು ತಿಳಿಯುವ ಕಾರ್ಯವನ್ನು ನಿರಂತರವಾಗಿ ಋಗ್ವೇದಿ ರವರು ನೆರವೇರಿಸಿಕೊಂಡು ಬರುತ್ತಿದ್ದಾರೆ. ಸರಳ ಜೀವನ ಮತ್ತು ಅಹಿಂಸೆಯ ಸಂದೇಶವನ್ನು ಜಗತ್ತಿಗೆ ನೀಡಿದ ಮಹಾವೀರರು ಸತ್ಯ ಸರಳ ಚಿಂತನೆಗೆ ಹೆಸರಾದವರು. ನಾವು ಕೂಡ ಸರಳವಾಗಿ ಬದುಕುವ, ಕಾಯಕವನ್ನು ಪ್ರೀತಿಸುವ ಕೆಲಸವನ್ನು ಮಾಡೋಣ ಎಂದರು.

ದೊಡ್ಡರಾಯಪೇಟೆ ದೊರೆಸ್ವಾಮಿ ಹಾಗೂ ನಗರಸಭಾ ಮಾಜಿ ಸದಸ್ಯರಾದ ಪದ್ಮ ಪುರುಷೋತ್ತಮ್ ಮಹಾವೀರರ ಪ್ರತಿಮೆಗೆ ಪುಷ್ಪವನ್ನು ಅರ್ಪಿಸುವ ಮೂಲಕ ಉದ್ಘಾಟಿಸಿ ಶುಭ ಕೋರಿದರು. ಕನ್ನಡ ಸಾಹಿತ್ಯ ಪರಿಷತ್ತು ನಿರಂತರವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದು ಬಹಳ ಸಂತೋಷವೆಂದರು. ಮನುಷ್ಯ ಎಲ್ಲ ಜನರನ್ನ ಪ್ರೀತಿಸುವ ಗುಣವನ್ನು ಬೆಳೆಸಿಕೊಳ್ಳೋಣ, ಅಹಿಂಸಾ ತತ್ವ ನಮ್ಮ ತತ್ವವಾಗಲಿ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕ ಬಿಕೆ ಆರಾಧ್ಯರವರು ಏಕಾಗ್ರತೆ ಧ್ಯಾನ ಮತ್ತು ಪ್ರಾರ್ಥನೆಯ ಮೂಲಕ ಜೀವನದ ಸತ್ಯವನ್ನು ತಿಳಿಯಬೇಕು ಮೌನದ ಮೂಲಕ ಶಾಂತಿ ಸಂದೇಶವನ್ನು ಸಾರೋಣ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ರವಿಚಂದ್ರಪ್ರಸಾದ್, ಎಲ್ ಶಿವಲಿಂಗ ಮೂರ್ತಿ, ಗೀತಾ ಸುರೇಶ್ ಗೌಡ, ಮಂಜುನಾಥ್, ಮಹೇಶ್ ಮುಂತಾದವರು ಇದ್ದರು.

## ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತೆ
### ಮೊಬೈಲ್ ಬಳಕೆಯಿಂದ ಮಕ್ಕಳನ್ನು ದೂರವಿಡಿ



**ಮಂಡ್ಯ:** ಮಕ್ಕಳಲ್ಲಿ ಮೊಬೈಲ್ ಬಳಕೆ ಹೆಚ್ಚಾಗುತ್ತಿರುವುದು ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಆದ್ದರಿಂದ ಪೋಷಕರು ಮಕ್ಕಳನ್ನು ಕ್ರೀಡೆ ಸೇರಿದಂತೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸಬೇಕು ಎಂದು ಜಿಲ್ಲಾಧಿಕಾರಿ ಕುಮಾರ ಸಲಹೆ ನೀಡಿದರು.

ನಗರದ ಐಎಂಎ ಭವನದಲ್ಲಿ ನಡೆದ ಮಂಡ್ಯ ಶೂಟಿಂಗ್ ಅಕಾಡೆಮಿ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಮೊಬೈಲ್ ಗೀಳಿನಿಂದ ಮಕ್ಕಳನ್ನು ಹೊರತೆಗೆದು, ಅವರ ಪ್ರತಿಭೆ ಬೆಳೆಯಲು ಪಠ್ಯೇತರ ಚಟುವಟಿಕೆಗಳು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಮಂಡ್ಯದಲ್ಲಿ ಶೂಟಿಂಗ್ ಅಕಾಡೆಮಿ ಸ್ಥಾಪಿಸಿರುವುದು ಶ್ಲಾಘನೀಯ ಕಾರ್ಯವಾಗಿದ್ದು, ಜಿಲ್ಲೆಯ ಯುವಜನತೆಗೆ ಇದು ಉತ್ತಮ ಅವಕಾಶ ಕಲ್ಪಿಸಲಿದೆ ಎಂದು ಹೇಳಿದರು.

ಶೂಟಿಂಗ್ ಅಕಾಡೆಮಿಯ ಕಾರ್ಯದರ್ಶಿ ಡಾ.ಕೆ.ಎಸ್.ಮಹೇಶ್ ಮಾತನಾಡಿ, ಒಲಿಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳನ್ನು ಬೆಳೆಸುವ ಉದ್ದೇಶದಿಂದ ಈ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ. ಎಲ್ಲರಿಗೂ ಅವಕಾಶ ದೊರಕಬೇಕು ಎಂಬ ಮಹತ್ವಾಕಾಂಕ್ಷೆಯಿಂದ ಇದನ್ನು ಆರಂಭಿಸಿದ್ದೇವೆ. ಹೆಚ್ಚಿನವರು ಇದರ ಸದುಪಯೋಗ ಪಡೆಯಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮಂಗಳೂರು ಡಿಐಜಿ ಎ.ಎನ್.ಪ್ರಕಾಶ್‌ಗೌಡ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಇ.ಗಂಗಾಧರಸ್ವಾಮಿ, ಐಎಂಎ ಅಧ್ಯಕ್ಷ ಡಾ.ಟಿ.ಎನ್.ಮರಿಗೌಡ, ಕಾರ್ಯದರ್ಶಿ ಎಂ.ವಿನಯ್, ಮಂಡ್ಯ ಶೂಟಿಂಗ್ ಅಕಾಡೆಮಿ ಅಧ್ಯಕ್ಷೆ ಡಿ.ಆರ್.ನೇಮಾಂಬ ಹಾಗೂ ಮುಖಂಡರಾದ ಕಾರಸವಾಡಿ ಮಹದೇವ್,

ಚಿಕ್ಕಸ್ವಾಮಿ, ಅಶೋಕ್, ಶಿವಪ್ರಕಾಶ್ ಬಾಬು ಉಪಸ್ಥಿತರಿದ್ದರು.

# ಲಿಂ. ಡಾ: ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಉದ್ಘಾಟಿಸಿದ ರಾಷ್ಟ್ರಪತಿ

# ಶಿಕ್ಷಣ ವ್ಯಕ್ತಿತ್ವ ನಿರ್ಮಾಣದ ಅಡಿಪಾಯ: ದ್ರೌಪದಿ ಮುರ್ಮು

**ತುಮಕೂರು:** ಶಿಕ್ಷಣ ವ್ಯಕ್ತಿತ್ವ ವಿಕಸನ ಮತ್ತು ವ್ಯಕ್ತಿತ್ವ ನಿರ್ಮಾಣದ ಅಡಿಪಾಯವಾಗಿದೆ ಹಾಗೂ ಶಿಕ್ಷಣವು ಸ್ವಾವಲಂಬನೆಗೆ ದಾರಿ ಮಾಡಿಕೊಡಲಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತುಮಕೂರಿನ ಸಿದ್ದಗಂಗಾ ಮಠದಲ್ಲಿ ಬುಧವಾರ ಆಯೋಜಿಸಿದ್ದ ಲಿಂಗೈಕ್ಯ ಡಾ: ಶ್ರೀ ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮ ದಿನಾಚರಣೆ ಹಾಗೂ ಗುರುವಂದನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಅಥವಾ ವಿದ್ಯೆ ವ್ಯಕ್ತಿತ್ವ ವಿಕಸನ ಮತ್ತು ವ್ಯಕ್ತಿತ್ವ ನಿರ್ಮಾಣದ ಅಡಿಪಾಯವಾಗಿದ್ದು, ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಶಿಕ್ಷಣ ಒದಗಿಸುವ ಮೂಲಕ ಸಮಾಜಕ್ಕೆ ಶ್ರೀ ಸಿದ್ದಗಂಗಾ ಮಠವು ಅತ್ಯಂತ ಅಮೂಲ್ಯ ಕೊಡುಗೆ ನೀಡುತ್ತಿರುವುದು ಅತ್ಯಂತ ಪ್ರಶಂಸನೀಯ ಎಂದು ಅವರು ಅಭಿಪ್ರಾಯಿಸಿದರು.

ಶ್ರೀ ಮಠವು ಬಸವಣ್ಣನವರ ಆದರ್ಶಗಳನ್ನು ಅನುಸರಿಸುವ ಮೂಲಕ ತಾರತಮ್ಯದ ಸಾಮಾಜಿಕ ವ್ಯವಸ್ಥೆ ಮತ್ತು ಸಾರ್ವತ್ರಿಕ ಭಾಗವಹಿಸುವಿಕೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯ ಕೈಗನ್ನಡಿಯಾಗಿದೆ ಎಂದರು.

'ದಯವೇ ಧರ್ಮದ ಮೂಲವಯ್ಯ' ಎಂಬ ಬಸವಣ್ಣನವರ ಆಶಯದಂತೆ ಸಿದ್ದಗಂಗಾ ಮಠವು ಎಲ್ಲಾ ಸಮುದಾಯದ ಎಲ್ಲಾ ಜನವರ್ಗಗಳಿಗೆ ಅನ್ನ, ಅಕ್ಷರ, ಆಶ್ರಯದ ಮೂಲ ಮಂತ್ರದೊಂದಿಗೆ ಸಂಸ್ಕಾರವನ್ನು ನೀಡುತ್ತಿದೆ. ಎಲ್ಲಾ ನಂಬಿಕೆಗಳ ಆಧಾರ ಕರುಣೆ. ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ಇಡೀ ಪ್ರಪಂಚದ ಬಗ್ಗೆ ಪ್ರೀತಿ ಮತ್ತು ಕರುಣೆಯ ಭಾವನೆ ಇರಬೇಕು. ಈ ನಿಟ್ಟಿನಲ್ಲಿ ಸಿದ್ದಗಂಗೆ ಮಠದ ಲಿಂಗೈಕ್ಯ ಡಾ: ಶಿವಕುಮಾರ ಸ್ವಾಮೀಜಿ ಅವರು ತಮ್ಮ ಜನ್ಮ ಶತಮಾನೋತ್ಸವ ಆಚರಿಸಿದ ನಂತರ ಹಲವು ವರ್ಷಗಳ ಕಾಲ ತಮ್ಮ ಆಧ್ಯಾತ್ಮಿಕ ಚಟುವಟಿಕೆಯಿಂದ ಮಾನವೀಯತೆಯನ್ನು ಶ್ರೀಮಂತಗೊಳಿಸಿದ್ದರು ಎಂದು ಕೇಳಲ್ಪಟ್ಟಿದ್ದೇನೆ. ಬಡವರು ಹಾಗೂ ದುರ್ಬಲರ ಸೇವೆಗೆ ತಮ್ಮ ಇಡೀ ಆಯುಷ್ಯವನ್ನು ಮುಡಿಪಾಗಿಟ್ಟಿದ್ದರು. ರಾಷ್ಟ್ರ ನಿರ್ಮಾಣ, ಲೋಕೋಪಕಾರ ಮತ್ತು ಕರ್ತವ್ಯ ನಿಷ್ಠೆಯ ಮಾರ್ಗವನ್ನು ಅನುಸರಿಸಿದರೆ ಮಾತ್ರ ನಾವು ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಅವರು ಹೇಳಿದರು.



**ಕರ್ನಾಟಕ ರಾಷ್ಟ್ರ ನಿರ್ಮಾಣದ ಪ್ರಮುಖ ಕೇಂದ್ರ:** ಕಠಿಣ ಪರಿಶ್ರಮ, ಸಾರ್ವಜನಿಕ ಸೇವೆ ಮತ್ತು ರಾಷ್ಟ್ರೀಯ ಸೇವೆ ಪರಸ್ಪರ ಸಂಬಂಧ ಹೊಂದಿವೆ. ಸಾರ್ವಜನಿಕ ಸೇವೆ ಮತ್ತು ರಾಷ್ಟ್ರೀಯ ಸೇವೆಗೆ ಆಧ್ಯಾತ್ಮಿಕತೆಯು ಬಲವಾದ ಅಡಿಪಾಯ ಒದಗಿಸುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕವು ಸಾರ್ವಜನಿಕ ಸೇವೆ, ರಾಷ್ಟ್ರೀಯ ಸೇವೆ, ಆಧ್ಯಾತ್ಮಿಕತೆ ಹಾಗೂ ಆಧುನಿಕ ಪ್ರಗತಿಯ ಕೆಲವು ಪ್ರಭಾವಶಾಲಿ ಉದಾಹರಣೆಗಳನ್ನು ನೀಡುತ್ತದೆ. ಇದಕ್ಕಾಗಿ ಕರ್ನಾಟಕದ ಶ್ರಮಶೀಲ ಮತ್ತು ಪ್ರತಿಭಾನ್ವಿತ ನಿವಾಸಿಗಳು ಅಭಿನಂದನೆಗೆ ಅರ್ಹರು. ಕರ್ನಾಟಕದ ಜನರು ನಿರಂತರವಾಗಿ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ. ಕರ್ನಾಟಕವು ರಾಷ್ಟ್ರ ನಿರ್ಮಾಣದ ಪ್ರಮುಖ ಕೇಂದ್ರವಾಗಬಹುದು ಎಂಬುದು ನನ್ನ ನಂಬಿಕೆ ಎಂದರು.

**ಕುವೆಂಪು ವಿರಚಿತ ನಾಡಗೀತೆಗೆ ರಾಷ್ಟ್ರಪತಿ ನಮನ :** ವಂದೇ ಮಾತರಂ ರಾಷ್ಟ್ರೀಯ ಗೀತೆಯ ರಚನೆಗೆ 150 ವರ್ಷಗಳು ಸಂದಿದ್ದು, ದೇಶಾದ್ಯಂತ 150ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ಕರ್ನಾಟಕ ಗೀತೆಯಲ್ಲಿ ಕರ್ನಾಟಕ ಮಾತೆಯನ್ನು ಭಾರತ ಮಾತೆಯ ಮಗಳು ಎಂದು ವರ್ಣಿಸಿರುವುದು ನೆನಪಾಗುತ್ತದೆ ಎಂದ ಅವರು, "ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ" ಎಂಬ ಆ ಅಮರ ವಾಣಿಯು ದೇಶ ವಾಸಿಗಳ ಹೃದಯದಲ್ಲಿ ಕರ್ನಾಟಕದ ಬಗ್ಗೆ ಹಾಗೂ ರಾಷ್ಟ್ರೀಯ ಏಕತೆಯ ಬಗ್ಗೆ ಇರುವ ಹೆಮ್ಮೆಯ ಭಾವನೆಯನ್ನು ಜಾಗೃತಗೊಳಿಸುತ್ತದೆ. ಈ ಮೂಲಕ ಗೀತೆಯ ಭಾರತೀಯ ಮೌಲ್ಯಗಳ ಸಮಗ್ರತೆ ಮತ್ತು ಔದಾರ್ಯದ ವಿವರಣೆಯನ್ನು ಒದಗಿಸುತ್ತದೆ. ಇದೇ ಭಾರತೀಯ ಮೌಲ್ಯಗಳು ಲಿಂಗೈಕ್ಯ ಶ್ರೀಗಳ ಅಸಾಧಾರಣ ಕೊಡುಗೆಯಲ್ಲಿಯೂ ಪ್ರತಿಫಲಿಸುತ್ತವೆ ಎಂದರು.

ಶ್ರೀ ಶಿವಕುಮಾರ ಸ್ವಾಮೀಜಿಯವರ ಸತ್ಕಾರ್ಯಗಳ ಪರಂಪರೆಯನ್ನು ಇಂದಿನ ಶ್ರೀಗಳು ಮುಂದುವರೆಸಿಕೊಂಡು ಹೋಗುತ್ತಿದ್ದು, ಮಠದೊಂದಿಗಿನ ಭಕ್ತರ ಬಾಂಧವ್ಯ ಶ್ರೀಮಠದಿಂದ ಗ್ರಾಮೀಣ ಮಕ್ಕಳಿಗೆ ಮತ್ತು ಗ್ರಾಮೀಣ ಜನತೆಗೆ ಸಿಗುತ್ತಿರುವ ತ್ರಿವಿಧ ದಾಸೋಹ ಮತ್ತು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಸಿಗುತ್ತಿರುವ ವಿಶೇಷ ಸೌಲಭ್ಯಗಳು ಮತ್ತಷ್ಟು ಉನ್ನತ ಮಟ್ಟದಲ್ಲಿ ನಡೆಯಲಿ ಎಂದು ಆಶಿಸಿದ ಅವರು, ಇಂತಹ ಶ್ರೇಷ್ಠ ಕಾರ್ಯಕ್ರಮದಲ್ಲಿ ಭಾಗವಹಿಸಿದ ತಮಗೆ ಅತ್ಯಂತ ಸಂತೋಷದ ದಿನವಾಗಿದೆ ಎಂದರು.

ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಮಾತನಾಡಿ, ಲಿಂಗೈಕ್ಯ ಡಾ: ಶ್ರೀ ಶಿವಕುಮಾರ ಸ್ವಾಮೀಜಿ ಅವರು ಆದರ್ಶ ಜೀವಿಗಳು. ಸರಳತೆ ಮತ್ತು ಮಾನವೀಯತೆಯ ಮೂಲಕ ಬಡವರಿಗೆ ತ್ರಿವಿಧ ದಾಸೋಹದ ಮೂಲಕ ಸೇವೆಯನ್ನು ಮಾಡುವ ಮೂಲಕ ಆದರ್ಶಪ್ರಾಯರಾಗಿದ್ದಾರೆ ಎಂದರು.

ಶ್ರೀ ಸಿದ್ದಗಂಗಾ ಮಠವು ಕೇವಲ ಧಾರ್ಮಿಕ ಕೇಂದ್ರವಲ್ಲದೆ, ಇದು ಆಧ್ಯಾತ್ಮಕತೆಯ ಮೂಲಕ ಸಮಾನತೆ ಮತ್ತು ಮಾನವೀಯ ಮೌಲ್ಯವನ್ನು ಬಿತ್ತುವ ಮೂಲಕ ನಿರಂತರ ಸೇವೆಯನ್ನು ಮಾಡುತ್ತಿರುವ ಸಾಮಾಜಿಕ ಕೇಂದ್ರವಾಗಿದೆ ಎಂದರು.

ದಿವ್ಯ ಸಾನಿಧ್ಯವಹಿಸಿಕೊಂಡಿದ್ದ ಶ್ರೀ ಸಿದ್ದಗಂಗಾ ಮಠದ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಮಾತನಾಡಿ, 111 ವರ್ಷಗಳ ಸುದೀರ್ಘ ತಮ್ಮ ಜೀವಿತಾವಧಿಯಲ್ಲಿ 79 ವರ್ಷಗಳ ಸುದೀರ್ಘ ಸೇವೆಯನ್ನು ಶ್ರೀ ಶಿವಕುಮಾರ ಸ್ವಾಮೀಜಿ ಅವರು ಸಮಾಜ ಸೇವೆಗಾಗಿಯೇ ಮುಡಿಪಾಗಿಟ್ಟಿದ್ದರು. ಇದು ಅವರ ಆದರ್ಶ, ಆಚಾರ, ವಿಚಾರ, ವಿಸ್ಮಯ, ಪವಾಡ ಎಂದರೆ ತಪ್ಪಾಗಲಾರದು. ಗ್ರಾಮಾಂತರ ಭಾಗದ ಬಡ ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಗಬೇಕೆಂಬುದು ಶ್ರೀಗಳ ಮಹತ್ತರ ಆಶಯವಾಗಿತ್ತು. ಈ ನಿಟ್ಟಿನಲ್ಲಿ ಭಕ್ತರಿಗೆ ಸನ್ಮಾರ್ಗವನ್ನು ತೋರುವ ಮೂಲಕ ಶ್ರೀ ಮಠವು ನಿರಂತರ ಸೇವೆಯನ್ನು ಮುಂದುವರೆಸಿದೆ ಎಂದರು.

- ಶ್ರೀ ಮಠದ ಶಿಕ್ಷಣ ಕ್ರಾಂತಿಗೆ ರಾಷ್ಟ್ರಪತಿ ಪ್ರಶಂಸೆ;
- ಕರ್ನಾಟಕ ರಾಷ್ಟ್ರ ನಿರ್ಮಾಚಿಣದ ಪ್ರಮುಖ ಕೇಂದ್ರ;
- ಭಾಷಣದಲ್ಲಿ ಕುವೆಂಪು ನೆನಪಿಸಿಕೊಂಡ ರಾಷ್ಟ್ರಪತಿ

ಕೇಂದ್ರ ಗ್ರಾಹಕ ವ್ಯವಹಾರಗಳು ಮತ್ತು ಆಹಾರ ಸಚಿವ ಪ್ರಹ್ಲಾದ ಜೋಶಿ ಅವರು ಮಾತನಾಡಿ, ಶ್ರೀ ಸಿದ್ಧಗಂಗಾ ಮಠವು ಕೇವಲ ಆಧ್ಯಾತ್ಮಿಕ ಕೇಂದ್ರವಲ್ಲದೆ, ಆಧುನಿಕ ಸಂಶೋಧನಾ ಕೇಂದ್ರವಾಗಿದೆ. ಸಂಸ್ಕಾರವನ್ನು ಕೊಡುವ ಮೂಲಕ ಭಕ್ತರಿಗೆ ಸನ್ಮಾರ್ಗವನ್ನು ತೋರಿಸುವ ವಿಶ್ವದ ಏಕೈಕ ಮಠ. ಇದಕ್ಕೆ ಕಾರಣ ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ಹಸಿವಿನ ಅರ್ಥವಾಗಿತ್ತು. ಜಾತಿ, ಧರ್ಮವನ್ನು ಮೀರಿ ಬಡವರು ಹಸಿವಿನಿಂದ ನರಳಬಾರದು. ಹಣವಿಲ್ಲದವರು ಜ್ಞಾನದಿಂದ ವಂಚಿತರಾಗಬಾರದು ಎಂಬ ಧ್ಯೇಯವನ್ನು ಇಟ್ಟುಕೊಂಡಿರುವ ವಿಶ್ವದ ಏಕೈಕ ಮಠ ಇದಾಗಿದೆ. ಈ ಮೂಲಕ ಲಿಂಗೈಕ್ಯ ಶ್ರೀಗಳು ಮನುಷ್ಯನಿಂದ ಮಹಾದೇವರಾದರು ಎಂದರು. ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಅವರು ಗಣ್ಯರನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಸಚಿವರಾದ ಎಂ.ಬಿ. ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್ ಉಪಸ್ಥಿತರಿದ್ದರು.

---



# ಮೀಸೆ ಹೊತ್ತ ಗಂಡಸಿಗೆ ಡಿಮಾಂಡಪ್ಪೋ ಡಿಮಾಂಡು



| ಪುಷ್ಪ ಪ್ರಸಾದ್

ಗಂಡಸರಿಗೆ ಅಂದ ಅಂದ್ರೆ ಗಡ್ಡ ಮೀಸೆನೇ. ಹೆಂಗಸರಿಗೆ ಉದ್ದನೆಯ ದಟ್ಟ ಕೂದಲು ಬೇಕು ಅಂತ ಆಸೆ ಇರುತ್ತಲ್ವಾ, ಹಾಗೇನೇ ಗಂಡಸರಿಗೂ ಗಡ್ಡ ಮೀಸೆ ಬೇಕು ಅಂತ ಆಸೆ. ತಲೆಯಲ್ಲಿ ಕೂದಲು ಇಲ್ಲ, ಬೋಳು ತಲೆ ಅಂತ ತಲೆಕೆಡಿಸಿಕೊಳ್ಳೋ ಗಂಡಸರಿದ್ರೂ, ಗಡ್ಡ ಮೀಸೆ ಬೆಳೆಯುತ್ತಿಲ್ಲ ಅಂತ ಚಿಂತೆ ಮಾಡೋರು ಕೂಡ ಇದ್ದಾರೆ. ಯಾಕಂದ್ರೆ, ಇವೆರಡೂ ಅವರ ಐಡೆಂಟಿಟಿ. ಗಡ್ಡ, ಮೀಸೆಗಳು ಪುರುಷತ್ವದ ಲಕ್ಷಣ. ಗಂಡಸರ ಮೂಗು ಮತ್ತು ಬಾಯಿಯ ಮಧ್ಯದಲ್ಲಿ ಬೆಳೆಯುವ ಕೂದಲುಗಳ ಸಮೂಹಕ್ಕೆ ಮೀಸೆ ಎಂದು ಕರೆಯಲಾಗುತ್ತದೆ. ಗಂಡು ಮಕ್ಕಳು ಯೌವ್ವನಕ್ಕೆ ಕಾಲಿಡುತ್ತಿದ್ದಂತೆ ಅವರ ಮುಖದಲ್ಲಿ ಗಡ್ಡ, ಮೀಸೆ ಬೆಳೆಯಲಾರಂಭಿಸುತ್ತದೆ. ಗಂಡು ಮಕ್ಕಳು ಯುವಕರಾಗುತ್ತಿರುವುದರ ಸಂಕೇತ ಮೀಸೆ ಚಿಗುರುವುದು. ಬೆಳೆಯುತ್ತಿರುವ ಮಕ್ಕಳಿಗೆ ತಮ್ಮ ಅಪ್ಪನೇ ರೋಲ್ ಮೊಡೆಲ್, ಆದ್ದರಿಂದ ತಂದೆಯಂತೆ ಮೀಸೆ ಬಿಡಲು ಅಥವಾ ತೆಗೆಯಲು ಪ್ರಾರಂಭಿಸುತ್ತಾರೆ. ಮೀಸೆಯು ದೈಹಿಕ ಆಕರ್ಷಣೆ, ಬಲ ಮತ್ತು ಪುರುಷತ್ವವನ್ನು ಸೂಚಿಸುತ್ತದೆ, ಇದು ಅನೇಕ ಪುರುಷರಿಗೆ ಹೆಮ್ಮೆಯ ವಿಷಯವಾಗಿದೆ. ಸಾಂಪ್ರದಾಯಿಕವಾಗಿ, ದಪ್ಪ ಮೀಸೆ ಅಥವಾ ಗಡ್ಡವು ಶಕ್ತಿ ಮತ್ತು ಸಾಮಾಜಿಕ ಗೌರವದ ಸಂಕೇತವಾಗಿದೆ. ಮೀಸೆಯು ಧೈರ್ಯ, ಶ್ರಮಶೀಲತೆ, ಆತ್ಮವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನು ಸಂಕೇತಿಸುತ್ತದೆ. ಭಾರತದಲ್ಲಿ, ಮೀಸೆಯು ಗೌರವ ಮತ್ತು ಶಕ್ತಿಯ ಸಾಂಪ್ರದಾಯಿಕ ಸಂಕೇತವಾಗಿದೆ. ಯಕ್ಷಗಾನದಲ್ಲಿ ಮೀಸೆಯು ಪಾತ್ರದ ಗಂಭೀರತೆ ಮತ್ತು ಶಕ್ತಿಯನ್ನು ಹೆಚ್ಚಿಸುತ್ತದೆ.

ಮೀಸೆಯು ಪುರುಷರ ವ್ಯಕ್ತಿತ್ವಕ್ಕೆ ಗತ್ತು ಮತ್ತು ಆಕರ್ಷಣೆ ನೀಡಿ, ಸೌಂದರ್ಯವನ್ನು ಹೆಚ್ಚಿಸುತ್ತದೆ. ಹ್ಯಾಂಡಲ್‌ಬಾರ್, ದಪ್ಪ ಮೀಸೆ ಅಥವಾ ಟ್ರಿಮ್ ಮಾಡಿದ ಸ್ಟೈಲ್‌ಗಳು ಮುಖದ ಆಕಾರಕ್ಕೆ ತಕ್ಕಂತೆ ಗಂಭೀರತೆ ಅಥವಾ ಯೌವ್ವನದ ಲುಕ್ ನೀಡುತ್ತವೆ. ಸರಿಯಾದ ನಿರ್ವಹಣೆ, ನಿಯಮಿತ ಟ್ರಿಮ್ಮಿಂಗ್ ಮತ್ತು ಆರೈಕೆಯಿಂದ ಮೀಸೆ ಮುಖಕ್ಕೆ ಚಂದದ ಮತ್ತು ಆಕರ್ಷಕ ನೋಟವನ್ನು ನೀಡುತ್ತದೆ. ಟ್ರಿಮ್ ಮೀಸೆಯ ಗಂಡಸಿಗೆ ಮಾತ್ರ ಡಿಮ್ಯಾಂಡು ಅಂತ ನೆನಪಿರಲಿ! ಮೀಸೆಯನ್ನು ಸರಿಯಾಗಿ ಟ್ರಿಮ್ ಮಾಡದೆ ಮನಸ್ಸಿಗೆ ಬಂದಂತೆ ಬಿಟ್ಟರೆ ಮುಖ ವಿಚಿತ್ರವಾಗಿ ಕಾಣುತ್ತದೆ. ಮುಖದಲ್ಲಿ ಮೀಸೆ ನಿಮ್ಮ ಅಂದವನ್ನು ಹೆಚ್ಚಿಸುವಂತೆ ಇರಬೇಕೆ ಹೊರತು ಭಯಾನಕವಾಗಿ ಕಾಣುವಂತೆ ಮಾಡಬಾರದು. ಮೀಸೆಯು ಭಾರತೀಯ ಸಂಸ್ಕೃತಿಯಲ್ಲಿ ಪುರುಷತ್ವ, ಪೌರುಷ, ಗೌರವ ಮತ್ತು ಪ್ರಬುದ್ಧತೆಯ ಸಂಕೇತವಾಗಿದೆ. ಇದು ವ್ಯಕ್ತಿಯ ವ್ಯಕ್ತಿತ್ವವನ್ನು ಹೆಚ್ಚಿಸುವ, ಧೈರ್ಯ ಮತ್ತು ಆತ್ಮವಿಶ್ವಾಸವನ್ನು ಪ್ರತಿಬಿಂಬಿಸುವ ಮುಖದ ಆಭರಣವೆಂದು ಪರಿಗಣಿಸಲಾಗಿದೆ. ಸಾಂಪ್ರದಾಯಿಕವಾಗಿ, ದಪ್ಪ ಮೀಸೆಯನ್ನು ಸಾಮಾಜಿಕ ಸ್ಥಾನಮಾನದ ಸಂಕೇತವಾಗಿ ಮತ್ತು ಕೆಲವೊಮ್ಮೆ ಪೊಲೀಸ್ ಇಲಾಖೆಯಂತಹ ಕ್ಷೇತ್ರಗಳಲ್ಲಿ ಗೌರವದ ಪ್ರತೀಕವಾಗಿ ನೋಡಲಾಗುತ್ತದೆ.

ಹಿಂದೆ ಮೀಸೆಗೆ ಬಹಳಷ್ಟು ಗೌರವವಿತ್ತು. ಕೆಲವೊಂದು ಸಂದರ್ಭಗಳಲ್ಲಿ ಮೀಸೆಯನ್ನು ಉದ್ದೇಶಿಸಿ ಸವಾಲೆಸೆಯುತ್ತಿದ್ದರು. (ಉದಾಹರಣೆಗೆ ಮೀಸೆ ಇದ್ದ ಗಂಡಸಾದರೆ ಬಾರೋ) ಮೀಸೆ ತಮ್ಮ ಗೌರವದ ಸಂಕೇತ ಆದ್ದರಿಂದ ಬೆಟ್ ಕಟ್ಟಲು ಕೈಯಲ್ಲಿ ಹಣವಿಲ್ಲದಿದ್ದರೆ ಸೋತರೆ ಮೀಸೆ ಬೋಳಿಸುತ್ತೇನೆ ಅನ್ನುವವರೂ ಇದ್ದರು. ಕೆಲವೊಂದು ಸಂದರ್ಭಗಳಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ನೀಡುವುದಕ್ಕಾಗಿ, ಅವಮಾನ ಮಾಡುವುದಕ್ಕಾಗಿ ಮೀಸೆಯನ್ನು ಬಲಿಕೊಡುತ್ತಿದ್ದರು. ಅದು ಹೇಗೆಂದರೆ ಅರ್ಧ ಮೀಸೆ ಬೋಳಿಸಿ ಊರಿನಲ್ಲಿ ಮೆರವಣಿಗೆ ಮಾಡೋದು ಇತ್ಯಾದಿ. ಹಿಂದಿನ ಕಾಲದಲ್ಲಿ ಮೀಸೆ ಎಂಬುದು ಯಜಮಾನಿಕೆ, ಶ್ರೀಮಂತಿಕೆ, ಅಧಿಕಾರದ ಸಂಕೇತವಾಗಿತ್ತು. ರಾಜರು, ಮಂತ್ರಿಗಳು, ಸೇನಾ ಅಧಿಕಾರಿಗಳು, ಸೈನಿಕರು, ಪಾಳೇಗಾರರು, ಜಮೀದ್ದಾರರು, ಸಾಮಾಜದಲ್ಲಿರುವ ಗಣ್ಯವ್ಯಕ್ತಿಗಳು ತಮ್ಮಲ್ಲಿರುವ ಹಣ-ಅಂತಸ್ತು, ಅಧಿಕಾರಕ್ಕೆ ತಕ್ಕಂತೆ ಮೀಸೆ ಬೆಳೆಸಿಕೊಳ್ಳುತ್ತಿದ್ದರು. ಅಂಥವರ ಮೀಸೆ ನೋಡಿಯೇ ಸಮಾಜದಲ್ಲಿ ಅವರ ಸ್ಥಾನ-ಮಾನ ಹೇಗಿತ್ತು ಎಂಬುದನ್ನು ತಿಳಿಯಬಹುದಾಗಿತ್ತು. ಜನರು ಮೀಸೆಯನ್ನು ಅದರ ಆಕಾರ, ಗಾತ್ರಕ್ಕೆ ಅನುಗುಣವಾಗಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಪ್ರಮುಖವಾಗಿ ಚಾಪ್ಲಿನ್ ಮೀಸೆ, ಗಿರಿಜಾ ಮೀಸೆ, ಚಿಗುರು ಮೀಸೆ, ಕಡ್ಡಿ ಮೀಸೆ, ಹುರಿ ಮೀಸೆ, ಬೆಕ್ಕಿನ ಮೀಸೆ, ಬಂಗಾರು ಮೀಸೆ, ಮೊಟ್ಟೆ ಮೀಸೆ, ಪೊದೆ ಮೀಸೆ, ಫಿಲ್ಟರ್ ಮೀಸೆ, ಇತ್ಯಾದಿ. ಊರುಗಳು ಬದಲಾದಂತೆ ಮೀಸೆಯ ಹೆಸರುಗಳಲ್ಲಿ ಹಲವಾರು ಬದಲಾವಣೆಗಳನ್ನು ನೋಡಬಹುದು. ಈಗ ಮೀಸೆ ಇದ್ದರೂ ಇಲ್ಲದಿದ್ದರೂ ಪರವಾಗಿಲ್ಲ. ಯಾರೂ ಏನೂ ಅನ್ನುವುದಿಲ್ಲ. ಮೀಸೆ ಒಮ್ಮೆ ಬೋಳಿಸಿದ್ರೆ ಮತ್ತೆ ಎರೆಡು-ಮೂರು ದಿನಗಳಲ್ಲಿ ಬೆಳೆಯುತ್ತದೆ ಆದ್ದರಿಂದ ಅದರ ಬಗ್ಗೆ ಯಾರೂ ಚಿಂತೆ ಮಾಡಬೇಕಾಗಿಲ್ಲ.


ಮೀಸೆ ಜೊತೆಗೇ ಹುಟ್ಟಿಕೊಂಡ ಅರ್ಥಪೂರ್ಣ ಗಾದೆ, ಹಾಡು, ನಾಣ್ನುಡಿಗಳಂತೂ ಕಮ್ಮಿ ಇಲ್ಲ. "ಜಟ್ಟಿ ಬಿದ್ರೂ ಮೀಸೆ ಮಣ್ಣಾಗಲಿಲ್ಲ", ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ, ದೋಸೆ ತಿನ್ನುವಾಗ ಮೀಸೆ ಮುರಿವ ಹಾಗೆ, ರಾಜನಿಗೆ ಮೀಸೆ ಮೇಲೆ ಕೈ ಹೋದರೆ ಸಭೆಯೇ ಕಾಣುವುದಿಲ್ಲ, ಮೀಸೆ ಬಂದವನಿಗೆ ದೇಶ ಕಾಣದು ಹೀಗೆ ಅನುಭವದ ನುಡಿಮುತ್ತುಗಳು.

ಸಿಪಾಯಿರಾಮು ಚಿತ್ರದ "ಬಾಜಿ ಕಟ್ಟಿ ನೋಡು ಬಾರೋ", ಮೀಸೆ ಮಾವ" ದಿನವಿಡೀ ರೇಡಿಯೋದಲ್ಲಿ ಉಲಿಯುತ್ತಿತ್ತು.

ನಿನ್ನೆಯ ದಿನ ನಾನು ಬರೆದ ಹೆಣ್ಣಿಗೆ ಮೂಗುತಿ ಯಾಕೆ ಅಂದ ಎನ್ನುವ ಲೇಖನ ಓದಿ ಕೆಲವರು ಕೇಳಿದ್ದರು ನೀವು ಯಾಕೆ ಹೆಣ್ಣಿನ ಸೌಂದರ್ಯದ ಬಗ್ಗೆ ಮಾತ್ರ ಬರೀತಿರಿ ಗಂಡಸರಿಗೆ ಯಾವುದಿಲ್ಲವೆ?..? ಅವರಿಗಾಗಿ ಈ ಲೇಖನ.




---



| ಮಾಧುರಿ ದೇಶಪಾಂಡೆ, ಬೆಂಗಳೂರು

# ರಾಮಾಯಣ ಕಾಲದ ಅತ್ಯುತ್ತಮ ರಾಜತಾಂತ್ರಿಕ ಹನುಮಂತ



ರಾಮಾಯಣಕಾಲದಲ್ಲಿ ಅತೀ ಬುದ್ಧಿವಂತ ಮಂತ್ರಿಯಾಗಿದ್ದವನು ಹನುಮಂತ. ಸುಗ್ರೀವನ ಮಂತ್ರಿಯಾಗಿದ್ದಾಗ ಮತಂಗಾಶ್ರಮದಲ್ಲಿ ಇರುವಾಗ ಅವನನ್ನು ಕೊಲ್ಲಲು ಬರುವ ವಾಲಿಯ ಭಯವನ್ನು ನಿವಾರಿಸಿ ಅವನೊಟ್ಟಿಗೆ ನಿಲ್ಲುತ್ತಾನೆ. ರಾಮ ಲಕ್ಷ್ಮಣರು ಸೀತೆಯನ್ನು ಹುಡುಕಿ ಕಿಷ್ಕಿಂಧಾ ಪರ್ವತದಲ್ಲಿ ಅಲೆಯುವಾಗ ಮಾರು ವೇಷದಲ್ಲಿ ಹೋಗಿ ಅವರ ವಿಚಾರವನ್ನು ತಿಳಿದು ಅವರನ್ನು ಸುಗ್ರೀವನ ಬಳಿಗೆ ಕರೆ ತರುತ್ತಾನೆ. ಶ್ರೀರಾಮಚಂದ್ರನ ಸಹಾಯವನ್ನು ಪಡೆದು ವಾಲಿಯ ವಧೆಯನ್ನು ಮಾಡಿಸುವಲ್ಲಿ ಹಾಗೂ ಸುಗ್ರೀವನಿಗೆ ಪುನಃ ಪಟ್ಟಗಟ್ಟುವಲ್ಲಿ ಕೂಡ ಪ್ರಮುಖ ಪಾತ್ರವಹಿಸುತ್ತಾನೆ. ಸುಗ್ರೀವನ ಸಹಾಯದಿಂದ ಸೀತೆಯನ್ನು ಹುಡುಕುವ ಕಾರ್ಯವನ್ನು ವಹಿಸಿಕೊಂಡು ವಾನರರೊಂದಿಗೆ ಸೀತಾ ದೇವಿಯನ್ನು ಹುಡುಕಲು ಹೊರಟ ಹನುಮಂತ. ಸೀತೆಯನ್ನುಹುಡುಕುವ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡುವುದರ ಜೊತೆಗೆ ಹನುಮಂತ ಲಂಕಾ ಪ್ರವೇಶದ ಸಮಯದಲ್ಲಿ ಲಂಕೆಯ ವಾತಾವರಣ ಅಲ್ಲಿಯ ಜನರ ಮನಸ್ಥಿತಿ, ಸಾಮರ್ಥ್ಯ, ಅವರ ಆರ್ಥಿಕ ಸ್ಥಿತಿಗತಿ, ಯುದ್ಧದ ಶಕ್ತಿ ಹೀಗೆ ಅನೇಕ ಬಹು ಮುಖ್ಯ ವಿಚಾರಗಳನ್ನು ತಿಳಿದುಕೊಂಡು ಬರುತ್ತಾನೆ. ಒಬ್ಬ ಉತ್ತಮ ರಾಜತಾಂತ್ರಿಕನಿಗೆ ಇರಬೇಕಾದ ಚಾಣಾಕ್ಷತನ ಬುದ್ಧಿವಂತಿಕೆಯ ಉದಾಹರಣೆಯನ್ನು ಹನುಮಂತನು ಬಹು ಸೊಗಸಾಗಿ ತೋರಿಸುತ್ತಾನೆ. ಇದು ಸಾಲದು ಎಂಬಂತೆ ಅಶೋಕವನವನ್ನು ನಾಶ ಮಾಡಿ ವೈರಿಯ ಮನಸ್ಥಿತಿಯನ್ನು ಅವರ ಯುದ್ಧ ಕೌಶಲ್ಯ ಸೈನ್ಯ ಸಾಮರ್ಥ್ಯವನ್ನು ತಿಳಿಯುತ್ತಾನೆ. ಅಕ್ಷ ಕುಮಾರನನ್ನು ಸಾಯಿಸುವುದರ ಮೂಲಕ ತನ್ನ ಬಲದ ಪ್ರದರ್ಶನವನ್ನು ಮಾಡಿ, ಲಂಕೆಗೆ ಬೆಂಕಿಯನ್ನು ಹಚ್ಚುವುದರ ಮೂಲಕ ಅನ್ಯಾಯವನ್ನು ಸಹಿಸುವುದಿಲ್ಲ ಎಂದು ತೋರಿಸುತ್ತಾ ಅವರ ಸಂಪತ್ತಿನ ಹಾನಿಯನ್ನು ಕೂಡ ಮಾಡುತ್ತಾನೆ. ರಾವಣನೊಂದಿಗೆ ಮಾತನಾಡುತ್ತಾ ಶ್ರೀರಾಮನ ಶಕ್ತಿ ಸಾಮರ್ಥ್ಯ ಮತ್ತು ಅವನ ಉತ್ತಮಗುಣಗಳನನು ಹೇಳಿ ಸಂಧಾನದ ಪ್ರಯತ್ನವನ್ನು ಮಾಡುತ್ತಾ ರಾಕ್ಷಸರನ್ನು ಶಿಕ್ಷೆ ನೀಡದೆ ಬಿಡುವ ಉಪಾಯವನ್ನು ಕೂಡ ಹೇಳುತ್ತಾನೆ. ಇದರಿಂದ ಹನುಮಂತ ರಾವಣನ ಮನಃ ಪರಿವರ್ತನೆಯ ಪ್ರಯತ್ನವನ್ನು ಕೂಡ ಮಾಡಿರುತ್ತಾನೆ.

ಲಂಕೆಗೆ ಯುದ್ಧಕ್ಕೆ ಹೊರಟದ್ದು ಮಾನವರಲ್ಲ ವಾನರರು ಅವರ ನೇತೃತ್ವವನ್ನು ಮಾಡಿದವನು ಹನುಮಂತನೇ ಚಂಚಲಚಿತ್ತರಾದವರನ್ನು ಒಂದು ನಿರ್ದಿಷ್ಟ ಗುರಿಯ ಸಲುವಾಗಿ ಅಷ್ಟೆಲ್ಲರನ್ನೂ ಒಗ್ಗೂಡಿಸುವ ಸಂಘಟನಾ ಶಕ್ತಿ ಮತ್ತು ಅವರು ತನ್ನ ಮಾತನ್ನು ಕೇಳಿ ಹೇಳಿದ್ದು ಮಾಡುವ ಒಂದು ನಿಷ್ಠ ತೋರಿಸಬೇಕಾದರೆ ಹನುಮಂತನ ಗುಣ ಸ್ವಭಾವ ಹಾಗೂ ಅವನ ಬುದಿವಂತಿಕೆಯ ಪರಿಚಯವನ್ನು ನೀಡುತ್ತದೆ.

ಲಂಕೆಯ ದಡಕ್ಕೆ ಬಂದು ದಡದಲ್ಲಿ ನಿಂತ ಮೇಲೆ ಹನುಮಂತನ ಮತ್ತೊಂದು ರಾಜತಾಂತ್ರಿಕ ನಡೆಯ ಉತ್ತಮ ಉದಾಹರಣೆ ಎಂದರೆ ವಿಭೀಷಣನನ್ನು ತಮ್ಮ ಪಾಳಯದಲ್ಲಿ ಆಶ್ರಯ ನೀಡುವುದಾಗಿದೆ. ಲಂಕೆಯನ್ನು ನೋಡಿ ಅಲ್ಲಿಯ ಜನರ ಮನಸ್ಥಿತಿಯನ್ನು ಅರಿತುಕೊಳ್ಳಲು ಪ್ರಯತ್ನಿಸಿದಾಗ ರಾಕ್ಷಸರ ನಡುವೆ ಸಾತ್ವಿಕ ವಿಭೀಷಣನನ್ನು ಹನುಮಂತನು ಗುರುತಿಸಿರುತ್ತಾನೆ. ವಿಭೀಷಣ ಆಶ್ರಯ ಕೇಳಿ ಬಂದಾಗ ರಾಮನು ಹನುಮಂತನೊಡನೆ ಪರಾಮರ್ಶೆ ಮಾಡಿಯೇ ಅವನನ್ನು ತಮ್ಮ ಪಾಳಯಕ್ಕೆ ಸೇರಿಸಿಕೊಳ್ಳುತ್ತಾನೆ.

ಹನುಂತನ ದೂರ ದೃಷ್ಟಿ, ಚಾಣಾಕ್ಷತೆ ಮತ್ತು ಅವನು ತೆಗೆದುಕೊಳ್ಳುವ ನಿರ್ಧಾರ ಹಾಗೂ ಪರಿಸ್ಥಿತಿಯ ಅವಲೋಕನ ಎಲ್ಲದರ ಬಗೆಗೆ ಅವನ ರಾಜನಾದ ಸುಗ್ರೀವನಿಗೆ ಹಾಗೂ ಅವನ ಸ್ವಾಮಿಯಾದ ಶ್ರೀರಾಮಚಂದ್ರನಿಗೆ ಹನುಮಂತನ ಮೇಲೆ ಇದ್ದ ವಿಶ್ವಾಸದಿಂದ ನಾವು ಗುರುತಿಸಬಹುದಾಗಿದೆ. ಹನುಂತನ ಆ ಒಂದು ದೈವಿಕ ಶಕ್ತಿ ಹಾಗೂ ಆತ್ಮಬಲವನ್ನು ಅವನ ಪ್ರತಿಯೊಂದು ಕಾರ್ಯದಲ್ಲಿ ಕಾಣಬಹುದಾಗಿದೆ. ಸಂಜೀವಿನಿ ಗಿಡವನ್ನು ತರಲು ಸಮಯವನ್ನು ವ್ಯರ್ಥ ಮಾಡದೇ ಪರ್ವತವನ್ನು ತರುವ ಹನುಮಂತನ ನಡೆ ಸಮಯವನ್ನು ವ್ಯರ್ಥ ಮಾಡದೇ ಚಿಕಿತ್ಸೆಯ ಮಹತ್ವವನ್ನು ಹೇಳುವುದರ ಜೊತೆಗೆ ವೈರಿಯ ಮನೆಯಿಂದ ಕರೆದುಕೊಂಡ ವೈದ್ಯನಿಗೆ ಸ್ವಾಮಿ ಭಕ್ತಿಯಿಂದಿರುವ ಶ್ರೀರಾಮನ ಭಕ್ತರೂ ಎಷ್ಟು ಬಲಶಾಲಿಗಳಾಗಿದ್ದಾರೆ ಎಂಬುದನ್ನು ಹೇಳಲಿ ಎಂಬ ಉದ್ದೇಶವೂ ಇರುತ್ತದೆ. ರಾಜತಾಂತ್ರಿಕ ವ್ಯಕ್ತಿಗಳಲ್ಲಿ ಇರಬೇಕಾದ ಮತ್ತೊಂದು ಅತೀ ಅವಶ್ಯಕ ಗುಣವೆಂದರೆ ಸ್ವಾಮಿ ಭಕ್ತಿ ಮತ್ತು ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೇ ಇರುವುದು. ಹನುಮಂತನು ಸಂಪೂರ್ಣ ರಾಮಾಯಣದಲ್ಲಿ ಈ ಗುಣಕ್ಕೆ ಹಲವಾರು ಉದಾಹರಣೆಯನ್ನು ನೀಡಿದ್ದಾನೆ. ರಾಮನ ಪಟ್ಟಾಭಿಷೇಕದ ಸಮಯದಲ್ಲಿ ಮಾಣಿಕ್ಯದ ಹಾರವನ್ನು ನೀಡಿದಾಗ ಅದನ್ನು ನಗಣ್ಯ ಎನ್ನುವಂತೆ ತೋರಿಸಿ ಹೃದಯದಲ್ಲಿ ರಾಮನನ್ನು ತೋರಿಸಿ ಸ್ವಾಮಿನಿಷ್ಠೆಯನ್ನು ಪುನಃ ತೋರಿಸುತ್ತಾನೆ.

ಭಾರತದಲ್ಲಿ ರಾಮಾಯಣವು ಮನುಷ್ಯ ಜೀವನದಲ್ಲಿ ಹೇಗೆ ಬದುಕಬೇಕು ಎಂಬುದನ್ನು ತೋರಿಸಿಕೊಡುವ ಗ್ರಂಥವಾಗಿದೆ. ಇಂದಿನ ವಿದೇಶ ಮಂತ್ರಿಗಳಾದ ಶ್ರೀ ಎಸ್ ಜಯಶಂಕರ್‌ರವರು ಪ್ರಪಂಚದ ಅತ್ಯುತ್ತಮ ರಾಜತಾಂತ್ರಿಕನೆಂದರೆ ಹನುಮಂತ ಎಂಬ ಮಾತನ್ನು ತಮ್ಮ ಸಂದರ್ಶನದಲ್ಲಿ ಹೇಳುತ್ತಾರೆ. ಪಾಶ್ಚಾತ್ಯ ದೇಶಗಳನ್ನು ಸುತ್ತಿ ಅನೇಕ ದೇಶ ವಿದೇಶಗಳ ಬಗೆಗೆ ಅಧ್ಯಯನ ಮಾಡಿ ಅವರ ಒಡನಾಟದಲ್ಲಿದ್ದು ವಿದೇಶಾಂಗ ವ್ಯವಹಾರಗಳಲ್ಲಿ ಬಹಳಷ್ಟು ದಿನ ದುಡಿದ ಒಬ್ಬ ವ್ಯಕ್ತಿ ತನ್ನ ಆದರ್ಶ ವ್ಯಕ್ತಿ ಎಂದು ಪರಿಗಣಿಸುವುದು ರಾಮಾಯಣ ಕಾಲದಲ್ಲಿ ಹನುಮಂತನನ್ನು ಹಾಗೂ ಮಹಾಭಾರತದಲ್ಲಿ ಶ್ರೀಕೃಷ್ಣನನ್ನು ನಮ್ಮ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಹನುಮಂತನಿಗೆ ವಿಶೇಷ ಸ್ಥಾನವಿದೆ. ಅಂತಹ ಹನುಮಂತ ಹುಟ್ಟಿದ್ದು ಚೈತ್ರಮಾಸದ ಹುಣ್ಣಿಮೆಯಂಧು ಹನುಮಂತನ ತಾಯಿ ಅಂಜನಾ ದೇವಿ ವಾಯುದೇವರನ್ನು ಕುರಿತು ತಪಸ್ಸನ್ನು ಮಾಡಿ ಅವನ್ನನು ಪಡೆದಳು. ಹನುಮನ ತಂದೆ ಕೇಸರಿ ಮಹಾರಾಜ. ಹನುಮ ಸ್ವತಃ ಒಂದು ಸಾಮ್ರಾಜ್ಯವನ್ನು ಹೊಂದಿದ್ದರೂ ಸುಗ್ರೀವನಿಗೆ ಮಂತ್ರಿಯಾಗಿ, ಶ್ರೀರಾಮನ ಬಂಟನಾಗಿ ಬದುಕಿದ್ದು ಅವನ ವಿಶೇಷತೆ. ಸಪ್ತ ಚಿರಂಜೀವಿಗಳಲ್ಲಿ ಹನುಮಂತನೂ ಇರುವುದರಿಂದ ಇಂದಿಗೂ ನಮ್ಮ ನಿಮ್ಮ ನಡುವೆ ಹನುಮಂತ ಇದ್ದಾನೆ ಎಂಬುದು ಹಿಂದುಗಳ ಬಲವಾದ ನಂಬಿಕೆಯಾಗಿದೆ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,